ಮನೆಗಳನ್ನು ಜಪ್ತಿಮಾಡಿ, ಅವರನ್ನು ಹಿಡಿದು ಪೋಲೀಸ್‌ಸ್ಟೇಷನ್ನಿನಲ್ಲಿ ಹಾಕಿಕೊಂಡಿದ್ದ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ತರೀಕೆರೆಯಲ್ಲಿ ಈ ರೀತಿ ಆರು ಕೇಸುಗಳನ್ನು ದಾಖಲುಮಾಡಿದ್ದಾರೆಂಬುದು ತಮಗೆ ಗೊತ್ತಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಗೊತ್ತಿಲ್ಲ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಬೀರೂರಿನಲ್ಲಿ ಆರು ಮಣ ಒಂದು ಕಡೆ ಇದ್ದರೆ ಅಲ್ಲಿ ಜಪ್ತಿ ಮಾಡಿರುವುದು ತಮ್ಮ ಗಮನಕ್ಕೆ ಬಂದಿಲ್ಲವೆ ?

ಅಧ್ಯಕ್ಷರು.—ಅದಕ್ಕೆ-ಆಗಲೇ ಉತ್ತರ ಹೇಳಿದ್ದಾರೆ.

Hon'ble Sri T. MARIAPPA.—Sir, one question cuts the other. It was stated that we did not act at all. Now it is stated that we have acted hastily.

ಶ್ರೀ ಎಚ್. ಹುಚ್ಚಮಾಸ್ತಿಗೌಡರು (ತುಮಕೂರು ಜಿಲ್ಲೆ).—ಈ ಆಜ್ಞೆಯ ಪ್ರಕಾರ ಒಟ್ಟು ವ್ಯಾಪಾರಿಗಳು ಮತ್ತು ಚಿಲ್ಲರೆ ವ್ಯಾಪಾರಿಗಳನ್ನು ಸರ್ಕಾರದವರು ನೇಮಿಸಲು ಅವಕಾಶವಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ; ಸೀಲಿಂಗ್ ರೇಟ್ಸ್ ಗೊತ್ತುಮಾಡುವುದಕ್ಕೆ ಮಾತ್ರ ಅವಕಾಶವಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಸಾಗಾಣಿಕೆಯನ್ನು ಹತೋಟಿ ಮಾಡಲು ಅಧಿಕಾರವಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ತುಮಕೂರು ಜಿಲ್ಲೆಯ ಡಿಪ್ಯುಟಿಕಮೀಷನರವರು ಒಟ್ಟು ವ್ಯಾಪಾರಿಗಳನ್ನು ಮತ್ತು ಚಿಲ್ಲರೆ ವ್ಯಾಪಾರಿಗಳನ್ನು ನೇಮಕಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಡಿಪ್ಯುಟಿಕಮೀಷನರುಗಳಿಗೆ ಕೆಲವು ಅಧಿಕಾರಗಳಿವೆ. ಯಾರಾದರೂ ಬಚ್ಚಿಟ್ಟಿದ್ದರೆ ಅದನ್ನು ತೆಗೆಸಿ ವಿಧಾಯಕವಾದ ಬೆಲೆಗೆ ಜನರಿಗೆ ಮಾರಾಟಮಾಡಿಸಬಹುದು.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಒಟ್ಟು ವ್ಯಾಪಾರಿಗಳನ್ನೂ ಚಿಲ್ಲರೆ ವ್ಯಾಪಾರಿಗಳನ್ನೂ ಗೊತ್ತುಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಹಿಂದೆ ನಮ್ಮ ದೇಶದ ಮಣ ಒಂದಕ್ಕೆ ಎಷ್ಟು ರೂಪಾಯಿ ಬೆಲೆ ಇತ್ತು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹದಿಮೂರು-ಹದಿನಾಲ್ಕು ರೂಪಾಯಿ ಇತ್ತು.

ಶ್ರೀ ಎಸ್. ರಂಗರಾಮಯ್ಯನವರು.—ಈಗ 82 ಪೌಂಡಿನ ಮಣ ಒಂದಕ್ಕೆ 22 ರೂಪಾಯಿನಂತೆ ಮಾರಬೇಕೆಂದರೆ ಬಹಳ ನಷ್ಟವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ !

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಿಂದಿನ ದಾಸ್ತಾನಿಟ್ಟುಕೊಂಡಿದ್ದವರಿಗೆ ನಷ್ಟವಾಗಬಹುದು.

ಶ್ರೀ ಎಸ್. ರಂಗರಾಮಯ್ಯನವರು.—ಬಹಳ ದಾಸ್ತಾನಿತ್ತೆಂಬುದು ಗೊತ್ತೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವುಕಡೆ ಇತ್ತೆಂದು ಗೊತ್ತಿದೆ.

ಶ್ರೀ ಎಂ. ಎರ್ ನಂಜರಾಜ ಅರಸಿನವರು (ಮೈಸೂರು ಜಿಲ್ಲೆ).—ಬೆಲ್ಲದ ಹತೋಟಿ ಆಜ್ಞೆಯನ್ನು ವಾಪಸ್ಸು ತೆಗೆದುಕೊಳ್ಳುವಂತೆ ಭಾರತ ಸರ್ಕಾರದವರನ್ನು ಒತ್ತಾಯಮಾಡಬೇಕೆಂದು ರೈತರು ಸರ್ಕಾರದವರಲ್ಲಿಗೆ ನಿಯೋಗ ಬಂದಿದ್ದರೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬೆಲ್ಲದ ಆಜ್ಞೆಯ ಸಂಬಂಧವಾಗಿ ಬಂದಿರಲಿಲ್ಲ, ಸಕ್ಕರೆಗೆ ಸಂಬಂಧಪಟ್ಟ ವಿಷಯದಲ್ಲಿ ಬಂದಿದ್ದರು, ಅಷ್ಟೆ.

ಶ್ರೀ ಎಂ. ಎರ್. ನಂಜರಾಜ ಅರಸಿನವರು.—ಹತೋಟಿಯನ್ನು ತೆಗೆಯಬೇಕೆಂದು ಮನವಿಮಾಡಿಕೊಳ್ಳಲಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದು ಎಲ್ಲ ಹತೋಟಿಗಳ ಸಂಬಂಧವಾಗಿಯೂ ನಡೆಯುತ್ತದೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಕಂಟ್ರೋರ್ ಬೆಲೆಗೆ ಬೆಲ್ಲವನ್ನು ಯಾರು ಬೇಕಾದರೂ ಮಾರಲು ಅವಕಾಶವಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಗತ್ಯವಾಗಿ ಮಾರಬಹುದು, ಬಹಳ ನಂತೋಷ.

ಶ್ರೀ ಬಿ. ಹುಚ್ಚೇಗೌಡರು.—ಬೆಲ್ಲವನ್ನು ರೈತರು ಮಾರುವುದಕ್ಕೆ ಪ್ರತಿಬಂಧಕ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಎರ್. ಎಚ್. ತಿಮ್ಮಾಬೋಯಿಯವರು (ಚಿಕ್ಕಮಗಳೂರು ಜಿಲ್ಲೆ—ನಿಮ್ನ ಪಂಗಡ).—ಬೆಲ್ಲ, ಕಾಫಿ ಮಾಡಲು ಬೇಕಾದ ಮುಖ್ಯ ವಸ್ತುವೆಂಬುದು ಗೊತ್ತಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲರೂ ಕಾಫಿಗೆ ಬೆಲ್ಲವನ್ನೇ ಉಪಯೋಗಿಸಿದ್ದರೆ ಚೆನ್ನಾಗಿತ್ತು; ಮಲೆನಾಡಿನವರು ಉಪಯೋಗಿಸುತ್ತಾರೆ.

ಶ್ರೀ ಎರ್. ಎಚ್. ತಿಮ್ಮಾಬೋಯಿಯವರು.—ಪೆಪ್ಪರ್‌ಮೆಂಟ್ ಮಾಡಲು ಉಪಯೋಗಿಸುತ್ತಿದ್ದಾರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

Mr. SPEAKER.—Question time is over.

Recommendation by His Highness Rajpramukh for consideration of Bills

ಅಧ್ಯಕ್ಷರು (ಮಾನ್ಯ ಶ್ರೀ ಎ. ವೆಂಕಟಪ್ಪನವರು).—ಕೆಲವು ಮಸೂದೆಗಳನ್ನು ಪರಿಶೀಲನೆಗೆ ತೆಗೆದುಕೊಳ್ಳಲು ಶ್ರೀಮನ್ಮಹಾರಾಜರವರ ಒಪ್ಪಿಗೆ ಬೇಕಾಗಿತ್ತು; ಅದನ್ನು ಅವರು ಕಳುಹಿಸಿದ್ದಾರೆ, ಸಭೆಗೆ ಓದಿ ತಿಳಿಸುತ್ತೇನೆ.

ORDER.

"In pursuance of Clause (3) of Article 207 of the Constitution of India, I, Jayachamaraja Wadiyar, Maharaja of Mysore, do hereby recommend that the Mysore Payment of Salaries and Allowances to Members of the Legislative Assembly Bill, 1951, the Mysore State Aid to Industries Bill, 1951, and the Mysore Village Panchayets and District Boards Bills, 1951, be taken into consideration by the Legislative Assembly."

JAYA CHAMARAJA WADIYAR,
Maharaja of Mysore.

Statement laid on the table.

Mr. SPEAKER (The Hon'ble Sri V. Venkatappa).—The Chairman of the House Committee for the Assembly may lay on the Table the statement of recommendations of the Committee and the action taken thereon.

Resolutions of the House Committee and action taken thereon.

Sri L. H. THIMMA BOI (Chairman, House Committee for the Assembly).—Sir, I beg to lay on the Table of the House* the recommendations of the House Committee for the Legislative Assembly adopted at its meeting on 22nd August 1950 and the action taken thereon.

LEGISLATIVE BUSINESS

The Mysore Live-stock Improvement Bill 1951 (Concld.)

Motion to consider and amendment
Motion to refer.

Mr. SPEAKER (The Hon'ble Sri V Venkatappa).—The House will now resume discussion on the motion to consider the Mysore Live-stock Improvement Bill, 1951 and also the amendment motion to refer it to a Select Committee.

ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—ನಮ್ಮ ದೇಶದ ದನಗಳ ತಳಿಗಳನ್ನು ಉತ್ತಮಪಡಿಸಬೇಕೆಂಬ ಉದ್ದೇಶದಿಂದ ಮಂತ್ರಿಗಳು ಈ ಮಸೂದೆಯನ್ನು ನಭೆಯ ಮುಂದೆ ತಂದಿದ್ದಾರೆ. ಈ ಮಸೂದೆಯ ವಿಚಾರದಲ್ಲಿ ತೀಕ್ಷ್ಣವಾದ ಭಿನ್ನಾಭಿಪ್ರಾಯಕ್ಕೆ ಅವಕಾಶವಿದೆ. ನನಗೇ ತಿಳಿದಿರುವ ಹಾಗೆ, ನನಗೆ ವ್ಯವಸಾಯದ ಫೋರ್ಟ್‌ಫೋಲಿಯೋ ಇದ್ದಾಗ ಈ ಪ್ರಶ್ನೆ ಬಂತು. ಆದರೆ ನಾನು ಸ್ವಲ್ಪ ನಿಧಾನ ಮಾಡಿ ಎಂದು ಹೇಳಿದೆ. ಇದು ಆಗಿ ಆರೇಳು ವರ್ಷವಾಯಿತು. ಈಗ ಪರಿಸ್ಥಿತಿಯನ್ನು ನೋಡುವುದಾದರೆ, ನಾವು ಏನೂ ಮಾಡದೆ ಹೀಗೆ ಕೈಕಟ್ಟಿಕೊಂಡು ಕುಳಿತುಕೊಳ್ಳುವುದಾದರೆ ತೊಂದರೆಯಾದೀತು ಎನಿಸುತ್ತದೆ. ಮೊದಲು ಇದನ್ನು ವಿರೋಧಿಸಬೇಕೆಂದೆನಿಸಿತು. ಆದರೆ ಕೆಲವು ಕಡೆ ರೈತರಿಗೆ ಎಷ್ಟು ಅನುಕೂಲವಾಗಿದೆ ಎಂಬುದನ್ನು ನೋಡಿದ ಮೇರೆ ನನ್ನ ಅಭಿಪ್ರಾಯವನ್ನು ಸ್ವಲ್ಪ ಬದಲಾಯಿಸಬೇಕಾಯಿತು. ದೇಶಕ್ಕೆ ಬಹಳ ಪ್ರಾಮುಖ್ಯವಾದ ವಿಷಯ, ಇದು. ದೇಶದ ಜನರಲ್ಲಿ ಸುಮಾರು ಶೇಕಡ 80ರಷ್ಟು ಜನ ಹಳ್ಳಿಗಾಡಿನಲ್ಲಿದ್ದಾರೆ. ಅವರೆಲ್ಲರಿಗೂ ದನಗಳು ಬೇಕು. ಈ ದನಗಳನ್ನು ಅಭಿವೃದ್ಧಿಪಡಿಸಿದರೆ ದೇಶದ ಆರ್ಥಿಕಾಭಿವೃದ್ಧಿಯಾಗುತ್ತದೆ. ಹೀಗಿದ್ದರೂ ಈ ವಿಚಾರದಲ್ಲಿ ಎಚ್ಚರಿಕೆಯಿಂದ ಸ್ವಲ್ಪ ನಿಧಾನವಾಗಿ ಹೆಜ್ಜೆಯನ್ನಿಡಬೇಕಾಗಿದೆ. ಪೂರ್ವದಲ್ಲಿ ಹಳ್ಳಿಗಳಲ್ಲಿ ನಮ್ಮ ಹಿರಿಯರು ಬಹಳ ಸುಲಭವಾಗಿ ದನಗಳ ತಳಿಗಳ ಅಭಿವೃದ್ಧಿ ಕಾರ್ಯವನ್ನು ಮಾಡುತ್ತಿದ್ದರು. ಆದರೆ ಈಗಿನ ಕಾಲದಲ್ಲಿ ಜನರಲ್ಲಿ ಸ್ವಾರ್ಥ ಹೆಚ್ಚಾಗಿ ಬೆಳೆದು ಅದು ನಿಂತುಹೋಗಿದೆ. ಹಿಂದೆ ದೇವರ ಹೆಸರನ್ನು ಹೇಳಿ ಗೂಳಿಗಳನ್ನು ಬಸವನನ್ನು, ಬಸವಯನ್ನು ಬಿಡುತ್ತಿದ್ದರು. ಈಗಲೂ ಕೂಡ ಕೋರ್ಟು ಕಚೇರಿಗಳಿಲ್ಲದ ದೂರದ ಹಳ್ಳಿಗಳಲ್ಲಿ ಬಿಡುತ್ತಾರೆ. ಆದರೆ ಅಪರೂಪ. ಇದರ ಉದ್ದೇಶ ಒಳ್ಳೆಯ ತಳಿ ಹುಟ್ಟಲಿ ಎಂಬುದು. ಮಿಕ್ಕ ಹಳ್ಳಿಗಳಲ್ಲಿ ಈಗ ಹಾಗೆ ಬಿಟ್ಟರೆ ಕೋರ್ಟು ಕಚೇರಿಗಳಲ್ಲಿ ವ್ಯಾಜ್ಯ ಬೀಳಬಹುದೆಂದು ಆ ಒಳ್ಳೆಯ ಪದ್ಧತಿಯನ್ನೇ ಬಿಟ್ಟುಬಿಟ್ಟಿದ್ದಾರೆ. ಇಲ್ಲಿ ಅನೇಕ ಮಹನೀಯರು ಹಳ್ಳಿಗಳಿಂದ ಬಂದಿದ್ದಾರೆ; ಆದಕಾರಣ ನಾನು ಸೂಕ್ಷ್ಮವಾಗಿ ಹೇಳಿದರೂ ಅವರಿಗೆ ತಿಳಿಯುತ್ತದೆ. ಈಗ ಹಾಗೆ ಬಸವನನ್ನು ಬಿಟ್ಟರೆ, ಅವು ಯಾರ ಜಮೀನಿಗಾದರೂ ಹೋದರೆ ಹಳ್ಳಿಯವರು ತಮ್ಮ ಜಮೀನಿನ ಬೆಳೆ ಮೇಯಿತೆಂದು ಅದರ ಕಾಲು ಮುರಿಯುತ್ತಾರೆ; ಅಥವ ಕೋರ್ಟಿನಲ್ಲಿ ವ್ಯಾಜ್ಯ ಹೂಡುತ್ತಾರೆ. ಹಳ್ಳಿಗಳಲ್ಲಿ ಹಿಂದಿದ್ದ ಒಳ್ಳೆಯ ಪದ್ಧತಿಗಳು ಬಿಟ್ಟುಹೋಗುತ್ತಿವೆ.

ಈಗ ಆಧುನಿಕ ರೀತಿಯಲ್ಲಿ ರಷ್ಯಾ ದೇಶದಲ್ಲಿ ತಳಿಗಳ ಅಭಿವೃದ್ಧಿಯ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಗೂಳಿಗಳೇ ಬೇಕಾಗಿಲ್ಲ, artificial insemination ನಿಂದ ಮಾಡುತ್ತಾರೆ. ಆದರೆ ನಾವು ಇನ್ನೂ ಅಷ್ಟು ಮುಂದುವರಿದಿಲ್ಲ. ಅದು ಬರಬೇಕಾದರೆ ಇನ್ನೂ ಬಹಳ ಕಾಲವಾಗುತ್ತದೆ. ನಮ್ಮ ಇಂದಿನ ಸ್ಥಿತಿ ನೋಡಿದರೆ, ನಾನು ಒಳ್ಳೆಯ ತಳಿಯ ದನಗಳನ್ನು ಸಾಕಿದ್ದೇನೆ. ಈ ಊರಿನಲ್ಲಿ ಚಾಮರಾಜಪೇಟೆಗೆ ಹೋದರೆ ಅಲ್ಲಿ ಸರ್ಕಾರದವರು ಖರ್ಚಿಲ್ಲದೆ ಹಾಗೆಯೇ artificial insemination ಕೊಡಿಸುವ ಏರ್ಪಾಡು ಮಾಡಿದ್ದಾರೆ. ಆದರೆ ಅದು ಅಷ್ಟು ಫಲಕಾರಿಯಲ್ಲವೆಂದು ಕಾಣುತ್ತದೆ. ಅದರಿಂದ ಈಗ ನಾನು ಐದು ರೂಪಾಯಿ ಕೊಟ್ಟು ಗೂಳಿ ಬಿಡಿಸುತ್ತಿದ್ದೇನೆ. ನಾನು ಮುರಾ ಎಮ್ಮೆಯನ್ನೂ ಇಟ್ಟಿದ್ದೇನೆ. ಮುರಾ ಎಮ್ಮೆಗಳು ಬಹಳ ಬಲಯುತವಾದವುಗಳು. ದನಗಳ ವಿಚಾರದಲ್ಲಿ ನನಗೆ ಸ್ವಲ್ಪ ಸ್ವಂತ ಅನುಭವ ಇದೆ. ನಮ್ಮ ದನಗಳು ಒಳ್ಳೆಯವಲ್ಲ, ಹೊರಗಿನಿಂದ ತರಿಸಿ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಹೊರಗಿನಿಂದ ತರಿಸಿ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಹಾಲು ಸರಬರಾಯಿ ಮಾಡಿ. ಆದರೆ ನಮ್ಮ ದನಕರುಗಳಿಗೂ, ಅವಕ್ಕೂ ಸಂಬಂಧ ಕಲ್ಪಿಸಬಾರದು ಎಂದು ಹೇಳುತ್ತೇನೆ. ನಮ್ಮ ಅತ್ಯುತ್ಸಾಹದಲ್ಲಿ ಸಿಂಧಿ ದನಗಳೊಡನೆ ನಮ್ಮ ದನಗಳನ್ನು ಸೇರಿಸಿದರೆ ಅವೂ ಕೆಟ್ಟುಹೋಗುತ್ತವೆ, ಇವೂ ಕೆಟ್ಟುಹೋಗುತ್ತವೆ. ಸಿಟಿಗಳಲ್ಲಿ ಡೈರಿ ಫಾರಂಗಳಿಟ್ಟುಕೊಳ್ಳುವುದಕ್ಕೆ ಎಲ್ಲಿಂದರಾದರೂ ಹಸುಗಳನ್ನು ತರಿಸಿಕೊಳ್ಳಿ. ನಾಡ ದನಗಳೂ ಎಷ್ಟೋ ಇವೆ, ಅವು 2½–3 ಸೇರಿನವರೆಗೂ ಹಾಲು ಕೊಡುತ್ತವೆ. ಅದು ಬೇರೆ ವಿಷಯ.* ಈಗ ಹೇಳಿದ ಪ್ರಕಾರ ಗಿಡ್ಡ ಹೋರಿಗಳನ್ನು ತೆಗೆದುಕೊಂಡರೆ ಒಂದು ಸಮಸ್ಯೆ ಬರುತ್ತದೆ. ನಮ್ಮ ದೇಶದಲ್ಲಿ ಮಲೆನಾಡು, ಮೈದಾನ ಎಂದು ಇದೆ. ಇವು ದನಕರುಗಳಿರುವ ಪ್ರದೇಶ. ಮಲೆನಾಡಿಗೂ, ಮೈದಾನಕ್ಕೂ ಮಧ್ಯೆ

* Copy placed in the Assembly Library.

ಇರುವುದು ಬಹಳ ಒಳ್ಳೆಯ ದನಗಳನ್ನು ಉತ್ಪತ್ತಿಮಾಡುವ ಕೇಂದ್ರ. ಮಲೆನಾಡು ದನಗಳ ಉತ್ಪತ್ತಿ ಕೇಂದ್ರವಲ್ಲ. ಅಲ್ಲಿ ಗಿಡ್ಡ ರಾಸು ಇರುತ್ತದೆ. ನಾನು ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟ್ ಆಗಿದ್ದಾಗ ಮಲೆನಾಡಿಗೆ ಹೋರಿ ಕೊಟ್ಟರು, ಅದು ಅಲ್ಲಿಗೆ ಹೋದ 6 ತಿಂಗಳಿನಲ್ಲೇ ನಿರ್ಬಲವಾಗಿಹೋಯಿತು. ಈ ಅಂಶವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ನಮ್ಮ ಉತ್ಸಾಹದಲ್ಲಿ ಒಳ್ಳೆಯ ಹೋರಿಗಳನ್ನು ತೆಗೆದುಕೊಂಡು ಮಂಜರಾಬಾದು ಮುಂತಾದ ಕಡೆಗಳಲ್ಲಿ ಇಡುತ್ತೇವೆ ಎಂದರೆ ಅವು ನಿರ್ಬಲವಾಗಿ ಪ್ರಯೋಜನಕ್ಕೆ ಬಾರದಂತೆ ಆಗುತ್ತವೆ.

Sri H. SIDDAVEERAPPA (Chitaldrug District—General).—Is there any scientific explanation for that ?

Sri H. B. GUNDAPPA GOWDA.—It is on account of cold area. ಅಲ್ಲಿ ಹುಲ್ಲೇನೋ ಬಹಳ ಚೆನ್ನಾಗಿ ಬೆಳೆದಿರುತ್ತದೆ. ಆದರೆ ಅದು ಸಪ್ಪೆ ಹುಲ್ಲು. ರಸ ಇರುವುದಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಜನಗಳೂ ಹಾಗೆಯೇ !

(ಸಭೆಯಲ್ಲಿ ನಗು !)

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಜನಗಳ ವಿಷಯ ನಾನು ಹೇಳುವುದಿಲ್ಲ. ದನಗಳ ವಿಷಯ ಹೇಳಿದರೆ ಅವುಗಳ ಪ್ರತಿನಿಧಿ ಯಾರೂ ಇಲ್ಲ ಆದರೆ ಮಲೆನಾಡಿನ ಜನಗಳ ಪ್ರತಿನಿಧಿಗಳು ಅನೇಕರಿದ್ದಾರೆ. ಆ ವಿಷಯಕ್ಕೆ ಹೋಗುವುದಿಲ್ಲ. ಮಲೆನಾಡಿನವರು ಹೇಗಿದ್ದಾರೆ ಎಂಬುದನ್ನು ನೀವೇ ನೋಡಿ ತಿಳಿದುಕೊಳ್ಳಬಹುದು. ಮಲೆನಾಡಿನಲ್ಲಿ ದನಗಳ ಅಭಿವೃದ್ಧಿ ಯಾವ ರೀತಿ ಆಗಬೇಕು ಎಂಬುದನ್ನು ಬಹಳವಾಗಿ ಆಲೋಚನೆ ಮಾಡಿದ್ದೇನೆ. ಹುಲ್ಲನಲ್ಲಿ ಸಾರವಿಲ್ಲದೇ ಇರುವ ಆ ಪ್ರದೇಶದಲ್ಲಿ ದೊಡ್ಡ ದೊಡ್ಡ ರಾಸುಗಳನ್ನು ತೆಗೆದುಕೊಂಡುಹೋಗಿಬಿಟ್ಟರೆ ಅವು ಬದುಕುವುದಿಲ್ಲ. ಮಲೆನಾಡಿನಲ್ಲಿ ವಿಶೇಷವಾಗಿ ಇರುವುದು ಗಿಡ್ಡ ರಾಸುಗಳೇ. ನಾವೂ ಸಹ ಉಳುವುದಕ್ಕೆ ಗಿಡ್ಡ ರಾಸುಗಳನ್ನೇ ಕೊಳ್ಳುತ್ತೇವೆ. ಈ ಅಕ್ಕಿನಲ್ಲಿ ಇನ್ನೊಂದು ಕೆಲಸ ಮಾತಬೇಕಾಗಿತ್ತು. ಮಲೆನಾಡಿನಲ್ಲಿ ದನಗಳನ್ನು ಕೊಟ್ಟಿಗೆ ಒಳಗೆ ಸೇರಿಸಿಬಿಡುತ್ತಾರೆ. ಕಟ್ಟುವ ಪದ್ಧತಿ ಇಲ್ಲ. ಅವನ್ನು ಕಟ್ಟುವ ಪದ್ಧತಿಯನ್ನು ಜಾರಿಗೆ ತರಬೇಕು. ಅವು ಎದ್ದು ಇದ್ದರೆ ಅಲ್ಲೇ ಬಿಟ್ಟು ಬಿಡುತ್ತಾರೆ. ಎಲ್ಲವೂ ಒಂದೇ ಕಡೆ ಸೇರಿಕೊಂಡಿರುತ್ತವೆ. ದೊಡ್ಡರೋಗ ಬಂದು ಅನೇಕ ದನಗಳು ಸಾಯುವುದಕ್ಕೆ ಇದೇ ಒಂದು ಕಾರಣ. ಯಾವುದಾದರೂ ಒಂದಕ್ಕೆ ರೋಗಬಂದರೆ ಅದು ಇತರ ದನಗಳಿಗೂ ಹರಡುತ್ತದೆ. ಆದ್ದರಿಂದ ಈ ರೀತಿ ಒಟ್ಟಿಗೆ ಕೂಡುವುದನ್ನು ತಪ್ಪಿಸಿ, ಕೊಟ್ಟಿಗೆ ಒಳಗೆ ಕಟ್ಟಿ, ದಿನವಹಿ ಸರಿಯಾಗಿ ಸಗಣಿ ಮುಂತಾದ ಕಸವನ್ನು ತೆಗೆಯಲೇಬೇಕು ಎಂದು ನಿರ್ಬಂಧಮಾಡುವುದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಂಡರೆ, ನಿಜವಾಗಿಯೂ ದನಗಳ ಅಭಿವೃದ್ಧಿ ಪ್ರಾಡುವ ವಿಷಯದಲ್ಲಿ ಒಂದು ದೊಡ್ಡ ಕೆಲಸ ಮಾಡಿದ ಹಾಗಾಗುತ್ತದೆ. ಇದನ್ನು ನಾನು ಕಣ್ಣಾರೆ ನೋಡಿದ್ದೇನೆ, ಆ ಕೊಟ್ಟಿಗೆಗಳಲ್ಲಿ 8 ದಿನದ ಕಸ ಬಿದ್ದಿರುತ್ತದೆ, ಆ ದನಗಳು ಅಲ್ಲೇ ಮಲಗಿಕೊಳ್ಳುತ್ತವೆ. ಹೀಗಾದರೆ ದನಗಳು ಹೇಗೆ ಅಭಿವೃದ್ಧಿಯಾಗುತ್ತವೆ ! ಆದ್ದರಿಂದ ಕಸಿ ಮಾಡುವುದರಿಂದಲೇ ದನಗಳ ಅಭಿವೃದ್ಧಿಯಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ತಳಿ ಯಾವ ರೀತಿ ಅಭಿವೃದ್ಧಿಮಾಡಬೇಕೆಂಬುದನ್ನು ನೋಡಬೇಕು. ನಾನು ಯೋಜನೆ ಮಾಡಿದ್ದರಲ್ಲಿ ಈ ರೀತಿ ಒಂದು ನಿಯಮ ಸೇರಿಸಬಹುದು. ದನಗಳನ್ನು ಕೊಟ್ಟಿಗೆಗೆ ಸೇರಿಸಿ ಕಟ್ಟಬೇಕು ಎಂಬ ನಿಯಮವನ್ನು ಜಾರಿ ಮಾಡಬೇಕು ಅವುಗಳಿಂದ ಬೇಕಾದಷ್ಟು ಸೇವೆ ತೆಗೆದುಕೊಳ್ಳುತ್ತಾರೆ. ಆದ್ದರಿಂದ ಅವುಗಳಿಗೆ ಸರಿಯಾದ ಅನುಕೂಲ ಕಲ್ಪಿಸಿಕೊಡಬೇಕಾದುದು ಆಯಾ ಮಾಲೀಕರ ಕೆಲಸ. ಮಲೆನಾಡಿನಲ್ಲಿ ಕಸಿಮಾಡುವಾಗ ಬಹಳ ಹುಷಾರಾಗಿ ಮಾಡಬೇಕಾಗುತ್ತದೆ. ಮೈದಾನದವರಾದ ವೆಟರ್‌ನರಿ ಇಲಾಖೆಯವರನ್ನು ಅಲ್ಲಿಗೆ ನೇಮಕಮಾಡಿದರೆ ಅವರಿಗೆ ಅಲ್ಲಿನ ಸ್ಥಿತಿ ತಿಳಿಯುವುದಿಲ್ಲ. ರೈತಾಪಿ ಜನರು ಇದ್ದಾರೆ, ದನಗಳ ವಿಚಾರದಲ್ಲಿ ಅವರನ್ನು ಮೀರಿಸಿದವರು ಯಾರು ಇಲ್ಲ. ಆದ್ದರಿಂದ ವೆಟರ್‌ನರಿ ಇಲಾಖೆಯ ಅಧಿಕಾರಿಗಳಿಗೆ, ಒಂದು ಅಧಿಕಾರವನ್ನು ಕೊಡುವಾಗ, ಅವರು ಬಹಳ ವಿವೇಚನೆಯಿಂದ ಕೆಲಸ ಮಾಡಬೇಕಾಗುತ್ತದೆ. ಮಲೆನಾಡಿನಲ್ಲಿ ವಿಶೇಷ ಗಮನ ಕೊಡಬೇಕು. ಸರ್ಕಾರದವರು ಸುಮ್ಮನೆ ಈ ರೀತಿ ಜಾರಿಗೆ ತರಬೇಕೆಂದಿದ್ದೇವೆ ಎಂದು ಹೇಳಿದರೆ ಆಷ್ಟೇ ಸಾಲದು. ಇಲಾಖೆಯವರಿಗೆ ಅಧಿಕಾರ ಬಂದರೆ ಸಾಕು ಆ ತತ್ವ ಮರೆತುಹೋಗುತ್ತದೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

ಇನ್ನೊಂದು ವಿಷಯ ಏನೆಂದರೆ, ಇನ್ನು ಮುಂದೆ ಗ್ರಾಮಪಂಚಾಯತಿಗಳನ್ನು ಒಟ್ಟುಗೂಡಿಸಿ, ಒಂದೊಂದು ಗುಂಪು ಮಾಡುವ ಪದ್ಧತಿ ಬರುತ್ತದೆ. ಆಗ ಅವರು ಒಪ್ಪಿಗೆ ಕೊಡುವುದಾದರೆ ಈ ಬಿಲ್ಲನ್ನು ಆ ಸ್ಥಳದಲ್ಲಿ ಜಾರಿಗೆ ಕೊಡಬೇಕೆಂದು ಈ ಆಕ್ಟ್‌ನಲ್ಲಿ ಪ್ರೊವಿಷನ್ ಮಾಡಿದರೆ ಒಳ್ಳೆಯದು. ಈ ರೀತಿ ಮಾಡಬಹುದು. / ಹಾಗೆ ಮಾಡದೇ ಬಿಟ್ಟಿದ್ದೀರಿ ಎಂದು ಹೇಳುತ್ತೇನೆ. ಏಕೆಂದರೆ ಇದು ರೈತಾಪಿ ಜನಗಳಿಗೆ ಸಂಬಂಧಪಟ್ಟ ಮಸೂದೆ. ಸ್ವಲ್ಪ ಹೆಚ್ಚು ಕಡಿಮೆ ಮಾಡಿದರೂ ಬಹಳ ತೊಂದರೆ ಆಗುತ್ತದೆ. ಆ ಮೇರೆ ಹೋರಿಗಳು ಸಿಕ್ಕುವುದೇ ಕಷ್ಟವಾಗಬಹುದು. ಅಂಥ ಕಡೆ ಹೋರಿಗಳನ್ನು ಸಾಕಾದಷ್ಟು ಸರಬರಾಜು ಮಾಡಿ ಆಮೇಲೆ ಈ ಬಿಲ್ಲನ್ನು ಜಾರಿಗೆ ತರಬಹುದು. ಇದು ಒಂದು ರಚನಾತ್ಮಕ ಸಲಹೆ ಎಂದು ಹೇಳುತ್ತಾ ಇದ್ದೇನೆ. ಹೀಗೆ ಎರಡು, ಮೂರು ಅಂಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಇದನ್ನು ಆಲೋಚನೆ ಮಾಡಬೇಕಾಗಿದೆ.

ಸಿಂಧಿ ಹಸುಗಳು ಮಿಲಿಟರಿ ಡೈರಿ ಫಾರಂನಲ್ಲಿ ಇದ್ದವು. ಅವು ಕರುಗಳನ್ನು ಹಾಕಿದರೆ ಅವುಗಳಮೇರೆ ನಿಗಾ ಇಡುತ್ತಿರಲಿಲ್ಲ. ಅದೇ ರೀತಿ ಮುರಾ ಎಮ್ಮೆಗಳೂ ಇದ್ದವು. ಇವುಗಳ ಕರುಗಳನ್ನು ಸಹ ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ. ಅವುಗಳನ್ನೆಲ್ಲಾ ಸ್ಟಾಟರ್ ಹೌಸ್‌ಗೆ ಕಳುಹಿಸುತ್ತಿದ್ದರು. ನಾವು ಆಗ್ಯೆ ಅವುಗಳನ್ನೆಲ್ಲಾ ಒಟ್ಟು ವ್ಯಾಪಾರಮಾಡಿ ಕೊಂಡುಕೊಂಡು ಅಚ್ಚಂಪುರ ಫಾರಂ ಮತ್ತು ಸೂಳೆಕೆರೆ ಫಾರಂಗಳಿಗೆ ಕಳುಹಿಸಿದ್ದೆವು. ಈಗ ಆ ಸಿಂಧಿ ಹೋರಿಗಳು ಕೋಣಗಳು ವಯಸ್ಸಿಗೆ ಬಂದಿವೆ. ಎರಡು, ಮೂರು ಕೇಂದ್ರಗಳಗೂ ಸಹ ಕೊಟ್ಟಿದ್ದಾರೆ. ಸಿಂಧಿ ಹೋರಿಗಳನ್ನು ಮಲೆನಾಡಿನ ಹಸುಗಳ ಮೇಲೆ ಹಾರಿಸಬಹುದು. ಮಲೆನಾಡಿನ ಗಿಡ್ಡಕ್ಕೂ ಇದಕ್ಕೂ ಸ್ವಲ್ಪ ಸಂಬಂಧ ಇರುವ ಹಾಗೆ ಕಾಣುತ್ತದೆ. ಈ ಸಿಂಧಿ ಹೋರಿಗಳನ್ನು ಮಲೆನಾಡಿಗೆ ಕಳುಹಿಸುವ ಒಂದು ಯೋಜನೆ ಇತ್ತು. ಅದರಂತೆ ಅನೇಕ ಹೋರಿಗಳನ್ನು ಅಲ್ಲಿಗೆ ಕೊಟ್ಟಿದ್ದಾರೆ. ಅವರು ಅಲ್ಲಿ ಅವುಗಳನ್ನು ಚೆನ್ನಾಗಿ ಸಾಕುತ್ತಿದ್ದಾರೆ ಎಂದು ವರ್ತಮಾನ ಬಂದಿದೆ. ಆದ್ದರಿಂದ ತಳಿ ಅಭಿವೃದ್ಧಿ ಮಾಡುವಾಗ ಮಾತ್ರ ನಮ್ಮ ತಳಿಗೂ ಅವುಗಳಿಗೂ ಹೆಚ್ಚು ಸಂಬಂಧ ಕಲ್ಪಿಸಕೂಡದು. ನಮ್ಮ

(ಶ್ರೀ ಎಚ್. ಬಿ. ಗುಂಡಪ್ಪಗೌಡರು.)

ಹಳ್ಳಿಕಾರ, ಅಮೃತಮಹಲ್, ಬೆಟ್ಟದಪುರ, ಗುಜ್ಜಮಾವು ರಾಸುಗಳು ಬಹಳ ಹೆಸರುವಾಸಿಯಾದವು. ಇವುಗಳು, ಅವುಗಳೊಡನೆ ಸೇರದಹಾಗೆ ನೋಡಿಕೊಳ್ಳಬೇಕು. ತಳಿಗಳ ಅಭಿವೃದ್ಧಿ ಮಾಡುವಾಗ ಇದು ಮನಸ್ಸಿನಲ್ಲಿಟ್ಟು ಕೊಳ್ಳಬೇಕಾದ ವಿಚಾರ.

ಇನ್ನು ಕೆಲವು ಪ್ರೊವಿಷನ್‌ಗಳಿವೆ.

"The licensing officer may also revoke a licence granted in respect of any bull kept within his jurisdiction .....if in his opinion the licence was granted under circumstances of which the licensing officer was not aware at the time of granting the licence." ಎಂದು ಇದೆ. ಇದು ನನಗೆ ಅರ್ಥವಾಗಲಿಲ್ಲ. ರೈಸ್ಟಿಸಿಂಗ್ ಆಫೀಸರು ರೈಸ್ಟಿಸ್ ಕೊಟ್ಟರೆ ಆಯಿತು, ಆ ಮೇಲೆ ಅವನು ರಿವೋಕ್ ಮಾಡುತ್ತಾನೆ ಎಂದರೆ ಅದರ ಅರ್ಥವೇನು? ಇದರ ರೈಸ್ಟಿಸ್ ಕೊಡುವ ಮಾರ್ಗದಲ್ಲಿ ರೈತರಿಗೆ ಕೆಲವು ತೊಂದರೆಗಳಿವೆ. ಈಗ ಒಂದು ಹೋರಿ ಇಟ್ಟು ಕೊಂಡಿರುವವನು ರೈಸ್ಟಿಸ್ ತೆಗೆದುಕೊಳ್ಳಬೇಕೆಂದರೆ ಬಹಳ ತೊಂದರೆಯಾಗುತ್ತದೆ. ವೆಟರ್‌ನರಿ ಆಫೀಸರುಗಳು ಇರುವ ಊರಿಗೆ ಅದನ್ನು ಹೊಡೆದುಕೊಂಡು ಹೋಗಬೇಕೆಂದರೆ ಬಹಳ ಕಷ್ಟ, ತಂಟೆ ಮಾಡುತ್ತವೆ. ಆದ್ದರಿಂದ ಆ ಹೋರಿ ಇಟ್ಟಿರುವವನು ಯಾವ ಊರಿನಲ್ಲಿ ರುತ್ತಾನೆಯೋ ಅಲ್ಲಿಗೇ ಹೋಗಿ ಚಕ್‌ಮಾಡಬೇಕೇ ಹೊರತು ಅವನನ್ನೇ ಹೋರಿಯನ್ನು ಹೊಡೆದುಕೊಂಡು ಬರಬೇಕೆಂದರೆ ಬಹಳ ಕಷ್ಟವಾಗುತ್ತದೆ.

ನನ್ನ ಮಾನ್ಯ ಸ್ನೇಹಿತರಾದ ಶ್ರೀ ಸಿದ್ದಪ್ಪ ನವರು ಮಾತನಾಡುತ್ತಾ ಹಳ್ಳಿಗಳಿಗೆ ಇನ್ನೂ ಹೆಚ್ಚು ಹೋರಿಗಳನ್ನು ಹಂಚಬೇಕು, ಈಗ ಸಾಕಾದಷ್ಟು ನೀವು ಕೊಡುತ್ತಿಲ್ಲವೆಂದು ಹೇಳಿದ್ದನ್ನು ಕೇಳಿ ನಾವು ಹಿಂದೆ ಹಾಕಿದ್ದ ಯೋಜನೆಯೆಲ್ಲಾ ಬದರಾವಣೆಯಾಗಿ ಹೋಯಿತೇ ಎನ್ನಿಸಿತು. ಏಕೆಂದರೆ ಅಧಿಕ ಆಹಾರದ ಯೋಜನೆಗೆ ಇದು ಕೇವಲ ಸಂಬಂಧಪಟ್ಟ ರತಕ್ಕ ವಿಷಯ. ಅಂಥಾದ್ದರಲ್ಲಿ ಹಾಗೇನಾದರೂ ಹೋರಿಗಳನ್ನು ಒದಗಿ ಸುವುದನ್ನು ಕಡಿಮೆ ಮಾಡಿದೆಯೆಂದರೆ ಅದು ಅಕ್ಷಮ್ಯ ವಾದುದು. ಒಂದು ಡಿಸ್ಟ್ರಿಕ್ಟಿಗೆ ಎರಡು ಹೋರಿಗಳನ್ನು ಕೊಡಬೇಕೆಂದಿದೆಯೆಂದು ಹೇಳಿದರು, ಎರಡಲ್ಲ. ಐವತ್ತು ಕೊಟ್ಟರೂ ಸಾಲದೆನ್ನಬಹುದು. ಆದ್ದರಿಂದ ಈ ವಿಷಯವನ್ನು ನೇರವಾಗಿ ನಿಮ್ಮ ಅಧಿಕ ಆಹಾರದ ಯೋಜನೆಗೆ ಸೇರಿಸಿಕೊಂಡು ಕೆಲಸ ನಡೆಸಬೇಕಾದುದು ಅವಶ್ಯಕ. ಇದರ ಮುಂದೆ ನಿಮ್ಮ ಟ್ರ್ಯಾಕ್ಟರ್ ಸರ್ವಿಸ್ ಏಕೆ? ಈಗಲೂ ಆ ಟ್ರ್ಯಾಕ್ಟರುಗಳಿಗೆ ದುಡ್ಡು ಕೊಟ್ಟು ಹಾಳು ಮಾಡಿಕೊಳ್ಳುವುದಕ್ಕೆ ಬದಲು ಒಳ್ಳೊಳ್ಳೆ ಎತ್ತುಗಳನ್ನು ಕಟ್ಟಿಕೊಂಡು ವ್ಯವಸಾಯ ಮಾಡಿದರೆ ಎಷ್ಟೋ ಒಳ್ಳೆಯದಾಗುತ್ತದೆ. ಅದರಲ್ಲಿಯೂ ನಮ್ಮ ದೇಶದಲ್ಲಿ ಹೆಚ್ಚಿಗೆ ಇರುವವರು ಸಣ್ಣ ಪುಟ್ಟ ರೈತರು. ಸಾವಿರಾರು ಎಕರೆಗಳನ್ನಿಟ್ಟುಕೊಂಡಿರುವವರು ಎಷ್ಟು ಜನ ತಾನೇ ಇದ್ದಾರೆ? ಅಲ್ಲದೆ ಇಲ್ಲಿನ ಭೂಮಿಯೆಲ್ಲಾ ಒಂದೇ ಮಟ್ಟಸವಾಗಿಲ್ಲ. ಆದ್ದರಿಂದ ನಮ್ಮ ವ್ಯವ ಸಾಯಕ್ಕೆ ಎತ್ತುಗಳ ಸಹಾಯಕ್ಕಿಂತ ಇನ್ನಾವುದೂ ಹೆಚ್ಚಿಗೆ ಸಹಾಯಕರವಾಗಿಲ್ಲವೆನ್ನಬಹುದು. You cannot do away with them. ಪ್ರಪಂಚದಲ್ಲಿ ಹೇಗೆ ಇದುವರೆಗೂ mechanised army ಬೇಕೆಂದು ಹೇಳುತ್ತಿದ್ದವರು ಈಗ ಕಾಲಾಳುಗಳು ಹೆಚ್ಚಿಗೆ ಬೇಕೆಂದು ಹೊರಟಿದ್ದಾರೋ ಹಾಗೆ ಟ್ರ್ಯಾಕ್ಟರುಗಳು ಹೆಚ್ಚು ಹೆಚ್ಚಿಗೆ ಬಂದರೂ ಈ ಎತ್ತುಗಳ ಅವಶ್ಯಕತೆ ನಮಗೆ ಎಂದೂ ತಪ್ಪುವುದಿಲ್ಲ. ಈಗೇನೋ ತಾವು ಒಂದು ಒಳ್ಳೆಯ ಉದ್ದೇಶದಿಂದ ಗಿಡ್ಡಗಳನ್ನೆಲ್ಲಾ ಇಡಮಾಡಿಸಬೇಕೆಂದು ಹೊರಟಿದ್ದೀರಿ. ಹಾಗೊಂದು ವೇಳೆ ಗಿಡ್ಡಗಳನ್ನೆಲ್ಲಾ ಇಡಮಾಡಿಸಿ ಬಿಟ್ಟು ಕೊನೆಗೆ ದೇಶದಲ್ಲಿ ಸಾಕಾದಷ್ಟು ಹೋರಿಗಳೇ ಇಲ್ಲದೆ ಹೋದರೆ ಏನು ಮಾಡುವುದು? ಆದ್ದರಿಂದ ಮೊದಲು ಮುಖ್ಯವಾಗಿ ಎಲ್ಲಾ ಕಡೆಗೂ ಬೇಕಾದಷ್ಟು ಹೋರಿಗಳನ್ನು ಒದಗಿಸಬೇಕು. Plenty of bulls must be supplied before this Act comes into force. ನಿಮ್ಮ ಅಧಿಕ ಆಹಾರದ ಯೋಜನೆಯೊಂದಿಗೆ ಈ ಯೋಜನೆಯನ್ನೂ ಸೇರಿಸಿಕೊಳ್ಳಿ. ಏಕೆಂದರೆ ವ್ಯವಸಾಯಗಾರನಿಗೆ ತನ್ನ ಒಂದು ಎತ್ತು ಸತ್ತಿತೆಂದರೂ ಆತನ ಬಲಗೈ ಹೋದಹಾಗೆ. ಆದ್ದರಿಂದ ಆಹಾರದ ಯೋಜನೆಯಲ್ಲಿ first priority must be given to this aspect of supplying breeding bulls. ಆದ್ದರಿಂದ ಒಂದು ಕಡೆಯಲ್ಲಿ ದೇಶದ ಹೊರಗಡೆ ಹೋಗತಕ್ಕ ದನಗಳ ಸಂಖ್ಯೆಯನ್ನೂ ಸ್ವಲ್ಪಮಟ್ಟಿಗೆ ನಿರ್ಬಂಧಿಸಬೇಕು. ಏಕೆಂದರೆ, ಅನೇಕವಾಗಿ ಒಳ್ಳೆ ಒಳ್ಳೆ ದನಗಳು ಇಲ್ಲಿಂದ ಹೊರಕ್ಕೆ ಹೋಗಿಬಿಡಬಹುದು. ಇನ್ನೊಂದು ಕಡೆ ಹೆಚ್ಚು ಹೆಚ್ಚಿಗೆ ಒಳ್ಳೆಯ ಹೋರಿಗಳನ್ನು ಒದಗಿಸಿಕೊಟ್ಟು ಇಲ್ಲಿನ ತಳಿಗಳನ್ನೂ ಉತ್ಕೃಷ್ಟಪಡಿಸಿ.

ಆಮೇಲೆ, ಇದ ಮಾಡುವುದರಲ್ಲಿ ಒಂದು ನಿರ್ಬಂಧವನ್ನು ಹಾಕಿದ್ದೀರಿ. ನಿಮ್ಮ ಇರಾಬೆಯ ಆಫೀಸರು ಹೇಳಿದ ರೀತಿಯಲ್ಲೇ ಇಡ ಮಾಡಿಸಬೇಕೆಂದು ಹೇಳಿದ್ದೀರಿ. ಇದು ಸರಿಯಲ್ಲ. ಏಕೆಂದರೆ, ನನ್ನ ಮನೆಯಲ್ಲಿ ಒಂದು ಹೋರಿಯಿತ್ತು; ಅದನ್ನು ಇಡಮಾಡಿಸಬೇಕೆಂದು ಯೋಜನೆ ಮಾಡಿ ಆಸ್ಪತ್ರೆಗೆ ಕಳುಹಿಸಿಕೊಡಬೇಕೆಂದು ನಾನು ಹೇಳಿದಾಗ ಆಲ್ಲೇ ಸ್ಥಳದವರೊಬ್ಬರು ಬಂದು "ಆಸ್ಪತ್ರೆಗೆ ಕಳುಹಿಸಬೇಡಿ, ಅವರು ಶಸ್ತ್ರದಿಂದ ಮಾಡಿದರೂ ಸರಿಯಾಗುವುದಿಲ್ಲ, ನಾವೇ ಇಡ ಮಾಡುತ್ತೇವೆ" ಎಂದು ಹೇಳಿದರು. ಹೀಗೆ ಹೇಳುವುದಕ್ಕೂ ಕಾರಣವಿದೆ; ಅದನ್ನೀಗ ನಾನು ಹೇಳಲಿಚ್ಛಿಸುವುದಿಲ್ಲ. ಸರ್ಕಾರಿ ವೆಟೆರಿನರಿ ಡಾಕ್ಟರೇನೋ ಬುದ್ಧಿವಂತರಿರಬಹುದು. ಆದರೂ ಅವರದೆಲ್ಲಾ 'ಪುರಾಣದ ಬದನೆಕಾಯಿ' ಇದ್ದಹಾಗೆ ಆಗಬಹುದು. ಆದಕಾರಣ ಹೀಗೆ ಇಡಮಾಡಿಸುವುದರಲ್ಲಿ ಇದೇ ರೀತಿ ಮಾಡಬೇಕೆಂದು dogmatise ಮಾಡಬೇಡಿ. ನಿಮ್ಮ ಪದ್ಧತಿಯನ್ನೇ ನೋ ಇಟ್ಟುಕೊಳ್ಳಬಹುದು, ಆದರೆ ಅದನ್ನು ಜಾರಿಗೆ ಕೊಡುವುದರಲ್ಲಿ ಅದರ ವ್ಯಾಪ್ತಿಯನ್ನು ಸ್ವಲ್ಪಮಟ್ಟಿಗೆ ಪರಿಮಿತಿಗೊಳಿಸಬೇಕೆಂದು ಹೇಳುತ್ತೇನೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು (ಗೃಹಸಚಿವರು).— Scrub bulls should be rendered ineffective ಎಂಬುದು ನಮ್ಮ ಉದ್ದೇಶ ಅಷ್ಟೆ.

Sri H. B. GUNDAPPA GOWDA.—I agree to that; otherwise, this would not be effective. But according to the Act, "scrub bull" includes all malnad giddas and maidan giddas excepting stalwart animal. ಮಲೆನಾಡಿನ ಕಡೆಗಳಲ್ಲಿ ಈ ಮಲೆನಾಡಿನ ಗಿಡ್ಡಗಳೂ ಪ್ರಸಿದ್ಧಿಯಾಗಿವೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು. ಮಲೆನಾಡಿನ ಗಿಡ್ಡವನ್ನು ಉಳಿಸಿಕೊಳ್ಳಬೇಕಾಗುತ್ತದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಆದರೆ, ತಾವು ಸುಮ್ಮನೆ ಈ ಆಕ್ಟನ್ನು ಜಾರಿಗೆ ಕೊಟ್ಟರೆ, ಆ ವೆಟರಿನರಿ ಆಫೀಸರಿಗೆ ಹೇಗೆ ನಿಮ್ಮ ಉದ್ದೇಶ ಗೊತ್ತಾಗುತ್ತದೆ? ಮಲೆನಾಡು ಗಿಡ್ಡ, ಮೈದಾನ ಗಿಡ್ಡ ಎಲ್ಲವನ್ನೂ ಇಡ ಮಾಡಬೇಕೆಂದು ಅವರು ಹೇಳುತ್ತಾರೆ. ಆದ್ದರಿಂದ

ಹೋರಿಗಳನ್ನು ಇಡ ಮಾಡಲಕ್ಕೆ ಡೊನಾಯಿಸುವುದರಲ್ಲೂ, ಸ್ವಲ್ಪ ಯೋಚನೆ ಮಾಡಿ ಮಾಡಬೇಕಾಗುತ್ತದೆ. ಏಕೆಂದರೆ ನಮ್ಮ ರೈತರಾಗಳು ಕೂಡ ಹೋರಿ ಕೊಡಿಸುವುದರಲ್ಲಿ ಸ್ವಲ್ಪ ಬುದ್ಧಿ ಉಪಯೋಗಿಸಿಯೇ ಮಾಡುತ್ತಾರೆಂದು ತಾವು ತಿಳಿಯಬೇಕು. ಅವರೂ ಸಾಧಾರಣವಾಗಿ ಒಳ್ಳೆಯ ಹೋರಿಗಳನ್ನೇ ಕೊಡಿಸುತ್ತಾರೆ. ಆದ್ದರಿಂದ ಈ ಮಸೂದೆಯ ವ್ಯಾಪ್ತಿಯನ್ನು ಸ್ವಲ್ಪಮಟ್ಟಿಗೆ ಕಮ್ಮಿ ಮಾಡಿ ಅದನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಅಗತ್ಯವೆಂದು ನನ್ನ ಅಭಿಪ್ರಾಯ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದರ ವಿಚಾರದಲ್ಲಿ ತಾವು ದಯವಿಟ್ಟು 9 (2) ನೆಯ ಸೆಕ್ಷನ್ ನೋಡಿ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಅದರಲ್ಲಿ ಹೀಗಿದೆ:

"9 (2) Such castration shall be performed or caused to be performed by the licensing officer free of charge, unless the owner or other person keeping the bull desires to make his own arrangements for complying with the order."

ಇದೂ ಕೂಡ ambiguous ಆಗಿದೆ; ವಿಶದವಾಗಿ ಹೇಳಿಲ್ಲ. ಇದನ್ನು ಸ್ವಲ್ಪಮಟ್ಟಿಗೆ ತಿದ್ದುಪಾಟು ಮಾಡಬೇಕು.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸೆಲೆಕ್ಟ್ ಕಮಿಟಿಯಲ್ಲಿ ಮಾಡೋಣ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಇಲ್ಲಿ ಇನ್‌ಫರ್ಮರಿಯಯ ವಿಷಯ ಹೇಳಿದ್ದೀರಿ. ಈ ಇನ್‌ಫರ್ಮರಿ ಅಥವಾ ಪಿಂಜರಾ ಪೋಲುಗಳೆಲ್ಲಿವೆ? ಬರೀ ಮಾತಿನಲ್ಲೇ ಇವುಗಳೆಲ್ಲಾ ಆಗಿ ಹೋಗುತ್ತವೆ. ಹಾಗೇನಾದರೂ ನೀವು ಏರ್ಪಡಿಸಿದ್ದರೆ ಹೇಳಿ. ಹಾಲು ನಮ್ಮ ಹಾಸನ ಡಿಸ್ಟ್ರಿಕ್ಟಿನಲ್ಲಿ ಅನೇಕ ಬಸವಗಳಿವೆ. ಅವುಗಳನ್ನು ಎಲ್ಲಿ ಕಳುಹಿಸಿಕೊಡುವುದು ಹೇಳಿ? ಅದ್ದರಿಂದ ತಾವು ಸುಮ್ಮನೆ ಕಾನೂನು ಮಾಡಿ ಬಿಟ್ಟು ಅದಕ್ಕೆ ತಕ್ಕಂತೆ ಏರ್ಪಾಡು ಮಾಡದೆ ಹೋದರೆ ಏನು ಪ್ರಯೋಜನ? ಒಂದು ವೇಳೆ ಒಂದೊಂದು ಡಿಸ್ಟ್ರಿಕ್ಟಿನಲ್ಲಿ ಒಂದು ಎಂದು ಇಟ್ಟರೂ ಅಲ್ಲಗೆ ಎಲ್ಲವನ್ನೂ ತರುವುದು ಹೇಗೆ? ಆದಕಾರಣ ಆತುರದಿಂದ ಏನನ್ನೂ ಮಾಡಬೇಡಿ. ಮೊದಲು ಬೇಕಾದ ಏರ್ಪಾಡುಗಳನ್ನು ಮಾಡಿಕೊಡಿ. ಅಲ್ಲಿನವರಿಗೂ ಈ ಬಸವಗಳು ದೇವರ ಹೆಸರಿನಲ್ಲಿ ಬಿಡುಕಿಕೊಳ್ಳಲಿ!

ಆಮೇಲೆ, ರೈತೆನ್ಸಿಂಗ್ ಆಫೀಸರ ವಿಷಯದಲ್ಲಿ ಸ್ವಲ್ಪ ನಿಗಾಯಿಟ್ಟು, ಅವರು ಕೊಂಡ ಮಟ್ಟಿಗೆ ಯೋಚನೆ ಮಾಡಿ ಮಾಡುವಂತೆ ಮಾಡಬೇಕು. ಏಕೆಂದರೆ ನಾನು ತಿಳಿದಿರುವ ಮಟ್ಟಿಗೆ ಸರ್ಕಾರಕ್ಕೆ ಯಾವ ಕೆಟ್ಟ ಹೆಸರು ಬರಬೇಕಾದರೂ ಜಾರಿ ಮಾಡುವ ಆಫೀಸರಿಂದಲೇ. ಕಾನೂನುಗಳನ್ನು ಮಾಡುವುದರಲ್ಲಿ ಸರ್ಕಾರದವರು ಒಳ್ಳೆಯ ಉದ್ದೇಶಗಳನ್ನಿಟ್ಟುಕೊಂಡೇ ಮಾಡಿರುತ್ತಾರೆ. ಆದರೂ ಆಫೀಸರುಗಳು ಜನರಿಗೆ ಅವುಗಳನ್ನು ಜಾರಿಗೆ ಕೊಡುವುದರಲ್ಲಿ ಎಷ್ಟು ತೊಂದರೆ ಕೊಡುತ್ತಾರೆಂದು ತಮಗೇ ಗೊತ್ತಿದೆ. ಆದ್ದರಿಂದ ವೆಟರಿನರಿ ಆಫೀಸರುಗಳಿಗೇ ಇಂಥಾ ಒಂದು ಅಯುಧವನ್ನು ಕೊಡಬೇಡಿ. With these suggestions, I think that so far as I am concerned I can agree to this.

*ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಸ್ವಾಮಿ, ಈ ಮಸೂದೆಯ ವಿಚಾರವಾಗಿ ಅನೇಕ ನನ್ನ ಮಾನ್ಯ ಮಿತ್ರರು ಕೆಲಕೆಲವು ವಿಷಯಗಳನ್ನು ತಿಳಿಸಿದ್ದಾರೆ. ಆದರೆ ಈ ಬಗ್ಗೆ ನನ್ನ ಅಭಿಪ್ರಾಯ ವೇನಿದೆಯೆಂಬುದನ್ನು ಕೇವಲ ಎರಡು ಮಾತುಗಳಲ್ಲಿ ತಿಳಿಸಬೇಕೆಂದಿದ್ದೇನೆ. ಈ ಕಾನೂನಿನ ಉದ್ದೇಶವಿರತಕ್ಕದ್ದು ನಮ್ಮ ದೇಶದಲ್ಲಿರತಕ್ಕ ತಳಿಗಳನ್ನು ಅಂದರೆ ರಾಸುಗಳನ್ನು ಉತ್ತಮಪಡಿಸಬೇಕು, ಮತ್ತು ಹಾಗೆ ಉತ್ತಮಪಡಿಸಲು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬುದೇ ಆಗಿದೆ. ಇದರ ಉದ್ದೇಶವೇನೋ ಬಹಳ ಒಳ್ಳೆಯದೇ. ಆದರೆ ಇದರ ಅವಶ್ಯಕತೆ ಎಷ್ಟಿದೆ ಮತ್ತು ಇದರ ಅನುಕೂಲ ಪ್ರತಿಕೂಲಗಳೇನು ಎಂಬುದರ ಬಗ್ಗೆ ಒಂದೆರಡು ಅಂಶಗಳನ್ನು ತಿಳಿಸಬೇಕಾಗಿದೆ.

ಮೊದಲನೆಯದಾಗಿ, ಈ ಕಾನೂನಿನ ಅವಶ್ಯಕತೆ ಎಲ್ಲಾ ಕಡೆಯೂ ಸಾರ್ವತ್ರಿಕವಾಗಿ ಬೇಕಾಗಿದೆಯೇ ಎಂದು ಆಲೋಚಿಸಿ ನೋಡಿದರೆ ಈ ಕಾನೂನಿನಲ್ಲಿ ಹೇಳಿರುವಂತೆ ಇದನ್ನು ಎಲ್ಲಾ ಕಡೆಯಲ್ಲೂ ಜಾರಿಗೆ ತಂದೇ ತರಬೇಕೆಂದು ಹೇಳಿರತಕ್ಕದ್ದು ಅಷ್ಟು ಸೂಕ್ತವಾಗಿಲ್ಲವೆಂದು ನನಗೆ ಅನ್ನಿಸುತ್ತಿದೆ. ಎಲ್ಲೆಲ್ಲಿ ಯಾವ ಯಾವ ಪ್ರಾಂತ್ಯದ ಜನಗಳು ಬೇಕೆಂದು ಕೇಳುತ್ತಾರೋ ಅಂಥಾ ಪ್ರದೇಶಕ್ಕೆ ಬೇಕಾದರೆ ಇದನ್ನು ತಾವು ಅನ್ವಯಿಸುವಂತೆ ಮಾಡಬಹುದು. ಹಾಗೆ ಮಾಡುವುದು ಸೂಕ್ತ. ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಹಾಕಿ, ಅಲ್ಲಿ ಅವರು ಎಲ್ಲವನ್ನೂ ಆಲೋಚನೆ ಮಾಡಿ ಒಂದು ನಿರ್ಧಾರಕ್ಕೆ ಬರುತ್ತಾರೆ, ನಂತರ ನೋಡೋಣ. ನನಗೆ ತಿಳಿದ ಮಟ್ಟಿಗೆ ಯಾವ ಪ್ರಾಂತ್ಯದ ಜನರು ತಮಗೆ ಅವಶ್ಯಕವಿದೆಯೆಂದು ಕೇಳುತ್ತಾರೋ ಅಂಥವರಿಗೆ ಮಾತ್ರವೇ ಈ ಮಸೂದೆಯು ಅನ್ವಯಿಸುವಂತೆ ಮಾಡತಕ್ಕದ್ದು ಸೂಕ್ತ.

ಇನ್ನು ಕೆಲವು ವಿಚಾರದ ಬಗ್ಗೆ ಈ ಮಸೂದೆಯಲ್ಲಿ ತಿಳಿಸಿರುವ ಪ್ರಕಾರ ರೈತರು ನಡೆಯದೆ ಹೋದರೆ ಅದರಿಂದ ಗೋಸಂಪತ್ತಿಗೇ ಅಷ್ಟು ದಕ್ಕೆಯುಂಟಾಗುತ್ತದೆಯೆಂಬುದನ್ನು ನಾನು ನಂಬಿರುವೆ. ಗಿದ್ದಾಗಿರುವ ಹೋರಿಗಳು ಎರಡು ಸಲ್ಲುಗಳನ್ನು ಹಾಕುವ ವಯಸ್ಸಿಗೆ ಬಂದ ಕೂಡಲೇ ಅವುಗಳ ಬೀಜ ಹೊಡೆಸಬೇಕು, ಇಲ್ಲವೇ ಬೀಜದ ಹೋರಿಗೆ ಅನುಕೂಲವಾಗುವಂತೆ ಏರ್ಪಾಡು ಮಾಡಿ ತಕ್ಷಣವೇ ರೆಜಿಸ್ಟರು ಪಡೆದುಕೊಳ್ಳಬೇಕೆಂದು ಈ ಮಸೂದೆಯಲ್ಲಿ ಹೇಳಿರುವಾಗ, ರಾಸಿನ ಮಾಲೀಕನಿಗೆ ಯಾವುದಾದರೂ ಅನಾನುಕೂಲವಾಗಿ ಹಾಗೆ ಮಾಡಲು ತಪ್ಪಿದರೆ ಅತನಿಗೆ ಈ ಮಸೂದೆಯಿಂದ ತುಂಬಾ ತೊಂದರೆ ಆಗಬಹುದು. ಅಲ್ಲದೆ ಕೆಲವು ತುಂಟ ದನಗಳಿರುತ್ತವೆ, ಅಂಥಾವುಗಳನ್ನು ಎಲ್ಲೋ ಇರತಕ್ಕ ಪಶುವೈದ್ಯ ಶಾಲೆಗೆ ತೆಗೆದುಕೊಂಡು ಹೋಗಲು ಅಸಾಧ್ಯವೆಂದು ಕಂಡುಬರುವ ವೇಳೆಯಲ್ಲಿ ಆಯಾ ಸ್ಥಳದಲ್ಲಿಯೇ ಇದ ಮಾಡತಕ್ಕವರಿಂದಲೇ ಅಂದರೆ ಆ ಕಸುಬಿನಲ್ಲಿ ಪರಿಪೂರ್ಣ ಪಾರಂಗತರಾಗಿರತಕ್ಕವರಿಂದಲೇ ಮಾಡಿಸಿದರೂ ಪರವಾಗಿಲ್ಲವೆಂಬ ಒಂದು ಅವಕಾಶ ಈ ಮಸೂದೆಯಲ್ಲಿ ಕಲ್ಪಿಸಬೇಕೆಂದು ನನ್ನ ಒಂದು ಸೂಚನೆ. ಆದರೆ ಈ ಇದ ಮಾಡತಕ್ಕ ಪದ್ಧತಿ ನಮ್ಮ ಪ್ರಾಂತ್ಯದಲ್ಲಿ ಜಾರಿಯಲ್ಲಿಲ್ಲ. ಇದೆಲ್ಲ ಮಾಲೀಕನ ಇಷ್ಟಕ್ಕೇ ಬಿಡತಕ್ಕ ಕೆಲಸ. ಕೆಲವರು ಅದೇ ಉದ್ಯೋಗದಲ್ಲಿ ಹೆಚ್ಚು ಲಾಭಗಳಿಸಬೇಕೆಂಬ ಇರಾದೆಯಿಂದ ಹತ್ತಾರು ಆಳುಗಳನ್ನು ಕಟ್ಟಿಕೊಂಡು, ಒಳ್ಳೆಯ ಬೀಜದ ಹೋರಿಗಳನ್ನು ಸಾಕುತ್ತಾ ಹಣ ಗಳಿಸುತ್ತಿರುವಂಥ ಜನರು ಈಗಲೂ ಕೆಲ ಕೆಲವು ಹಳ್ಳಿಗಳಲ್ಲಿ ಇದ್ದೇ ಇದ್ದಾರೆ. ಆದರೆ ಎಲ್ಲರಿಗೂ ಈ ಉದ್ಯೋಗದಲ್ಲಿ ಲಾಭ ಹೊಂದುತ್ತೇವೆಂಬ ಭರವಸೆ ಇರುವುದಿಲ್ಲ. ಆದುದರಿಂದ ಇದಕ್ಕೆ ಯಾರು ಅನುಮತಿ ಪಡುತ್ತಾರೋ ಅಂಥವರ ವಿಷಯದಲ್ಲಿಯೂ ಮತ್ತು ಎಲ್ಲ ಇದರ ಅವಶ್ಯಕತೆ

(ಶ್ರೀ ಚ. ಮಾದಯ್ಯಗೌಡರು.)

ಅಗತ್ಯವೆಂದು ಕಂಡುಬರುತ್ತದೆಯೋ ಅಲ್ಲಿ ಮಾತ್ರ ಇದು ಆಚರಣೆಯಲ್ಲಿರುವಂತೆ ಮಾಡುವುದು ಸಾಧುವಾದದ್ದು. ಈಗಲೂ ಕೂಡ ಜಾರಿಯಲ್ಲಿರತಕ್ಕ ಪದ್ಧತಿಯನ್ನು ನೋಡಿದರೆ ಅನೇಕರು ತಮ್ಮ ತಮ್ಮ ಇಚ್ಛಾನುಸಾರ ಯಾರು ಖಾಯಿಷ್ ಪಡುತ್ತಾರೋ ಅಂಥವರೆಲ್ಲರೂ ತಮ್ಮ ಹಸುಗಳಿಂದ ಒಳ್ಳೆಯ ತಳಿ ದೊರಕಿಸಿಕೊಳ್ಳಲು ಬೀಜದ ಹೋರಿಗಳಿರತಕ್ಕ ಕಡೆ ಹೋಗಿ ಅವರು ಕೇಳಿದಷ್ಟು ಕೊಟ್ಟು ತಮ್ಮ ಹಸುಗಳಿಗೆ ಹೋರಿ ಕೊಡಿಸಿಕೊಂಡು ಬರುತ್ತಿರುವುದನ್ನು ನಾವೆಲ್ಲರೂ ನೋಡಿದ್ದೇವೆ. ಈ ಪಶುವೈದ್ಯ ಇಲಾಖೆಯವರೂ ಸಹ ಒಂದೊಂದು ವೇಳೆ ಅಂಥ ಮಾದರೀ ರೈತನು ದನಗಳನ್ನು ಹೇಗೆ ಸಾಕುತ್ತಿದ್ದಾನೆಂಬ ವಿಧಾನದಲ್ಲಿ ಆತನಿಂದ ಕಲಿತುಕೊಳ್ಳಬೇಕಾದ ವಿಚಾರಗಳು ಬೇಕಾದಷ್ಟಿರುತ್ತೆಂದು ಹೇಳಿದರೆ ಅತಿಶಯೋಕ್ತಿಯಾಗದಾರದು. ನಮ್ಮಲ್ಲೆಲ್ಲಾ ಅಮೃತಮಹರ್ ಇಲಾಖೆಯ ರಾಸುಗಳನ್ನೂ ಮತ್ತು ಹಳ್ಳಿಕಾರ್ ಜಾತಿಯ ರಾಸುಗಳನ್ನೂ ಹೆಚ್ಚಾಗಿ ಸಾಕುವ ಪದ್ಧತಿಕೆ. ಸಾಮಾನ್ಯವಾಗಿ ವ್ಯವಹಾರ ಈ ಸಂಬಂಧವಾಗಿ ಇಷ್ಟು ನುಗಮವಾಗಿ ನಡೆದುಕೊಂಡು ಹೋಗುತ್ತಿರುವ ವೇಳೆಯಲ್ಲಿ ಹೀಗೆ ಜನರು ಒಂದು ಲೈಸೆನ್ಸು ಪಡೆದೇ ಬೀಜದ ಹೋರಿಗಳನ್ನಿಡಬೇಕೆಂದೂ ಅಥವಾ ಸರಕಾರದಲ್ಲಿ ಬೀಜ ತೆಗೆಸದೆ ಬಿಟ್ಟು ಬಿಟ್ಟ ರೈತನಿಗೆ ಶಿಕ್ಷೆ ವಿಧಿಸರಾಗುತ್ತೆಂದೂ ಹೇಳುವುದು ಅಷ್ಟು ಸಾಧುವಾಗಿ ಕಾಣುತ್ತಿಲ್ಲ. ಒಂದು ವೇಳೆ ಒಂದು ಪ್ರದೇಶದಲ್ಲರತಕ್ಕ ಜಾನುವಾರುಗಳೆಲ್ಲಾ ಬರಿಗಿಡ್ಡಗಳಾಗಿದ್ದರೆ ಆಗ ಅವರು ಬೀಜದ ಹೋರಿಗೆ ಎಲ್ಲಿಗೆ ಹೋಗಬೇಕು? ಅಥವಾ ಈ ಒಂದು ಕಾನೂನಿನ ಹೆದರಿಕೆಗಾಗಿ ಅವರು 50-60 ಮೈಲಿ ಹೋಗಲು ಸಾಧ್ಯವೇ! ಈ ಎಲ್ಲ ಅಂಶಗಳನ್ನೂ ಕಾನೂನು ತರುವ ಮುನ್ನ ಸರ್ಕಾರದವರು ಆಲೋಚನೆ ಮಾಡಿ ನೋಡಬೇಕು. ಈ ಎಲ್ಲಾ ಕಾರಣಗಳಿಂದ ಈ ಮಸೂದೆಯನ್ನು ಸೆಲೆಕ್ಟ್ ಸಮಿತಿಗೆ ಒಪ್ಪಿಸುವುದು ತಕ್ಷಣಕ್ಕೆ ಸಾಧುವಾಗಿದೆಯೆಂದು ನನಗೆ ಅನ್ನಿಸುತ್ತದೆ. ಇದರಲ್ಲಿ ಅನೇಕ ಭಾಗಗಳಲ್ಲಿ ತಿದ್ದುಪಡಿಯಾಗಬೇಕಾದಂಥ ವಿಷಯಗಳು ಬೇಕಾದಷ್ಟಿವೆ; ಅವುಗಳ ತಿದ್ದುಪಡಿ ಕೂಡ ಅತ್ಯಾವಶ್ಯಕ. ಈ ಸಂಬಂಧವಾಗಿ ನನ್ನ ಮಾನ್ಯ ಮಿತ್ರರಾದ ಶ್ರೀ ಗುಂಡಪ್ಪಗೌಡರು ಅನೇಕ ವಿಚಾರಗಳನ್ನು ಈಗಾಗಲೇ ತಿಳಿಸಿದ್ದಾರೆ. ಆದರೆ ನಾನು ಕೆಲವು ಹೊಸ ವಿಷಯಗಳನ್ನು ತಿಳಿಸಬೇಕೆಂದಿದ್ದೇನೆ.

ಈಗ ಇಲಾಖೆಯವರು ಒಬ್ಬ ಮನುಷ್ಯನಿಗೆ ಒಂದು ನೋಟೀಸ್ ಕೊಟ್ಟು "ನೀನು ನಿನ್ನ ಹೋರಿಯನ್ನು ತಂದು ನಮ್ಮ ಮುಂದೆ ಹಾಜರ್ಮಾಡಿ ಲೈಸೆನ್ಸು ಪಡೆಯಬೇಕು" ಎಂದು ಹಾಗೆ ಕಳುಹಿಸುವ ನೋಟೀಸಿನಲ್ಲಿ ಅದು ಹಳ್ಳಿಯಲ್ಲಿ ಯಾರಿಗೆ ಜಾರಿಯಾಗಬೇಕಾಗಿತ್ತೋ ಆತನಿಗೆ ಜಾರಿಯಾಗದೆ ಬೇರೊಬ್ಬನಿಗೆ ಜಾರಿಯಾಗಿ ಆತನಿಗೆ ಅದರ ವಿಚಾರವೇ ಗೊತ್ತಿಲ್ಲದೆ ಆತನು ನುಮ್ಮನಾಗಿ ಬಿಟ್ಟರೆ, ಆತನಲ್ಲ ರಾಸಿರಲಿ ಅಥವಾ ಇಲ್ಲದಿರಲಿ ಆತನಿಗೆ ಆ ನೋಟೀಸ್ ಪ್ರಕಾರ ಶಿಕ್ಷೆಯಾಗಬೇಕಾಗುತ್ತದೆ. ಇದರಲ್ಲಿ ಇಂಥಾ ಅನಾನುಕೂಲಗಳಾಗಲು ಸಾಕಷ್ಟು ಅವಕಾಶವಿದೆಯೆಂದು ನನಗೆ ಅನ್ನಿಸುತ್ತಿದೆ. ಆದರೆ ಇಂಥಾದ್ದನ್ನೆಲ್ಲಾ ಬದಲಾವಣೆ ಮಾಡುವುದಕ್ಕೆ ಇನ್ನೂ ಅವಕಾಶವಿದೆ. ಇದು ಸೆಲೆಕ್ಟ್ ಸಮಿತಿಯ ಮುಂದೆ ಹೋದಾಗ ಇದನ್ನೆಲ್ಲಾ ಅವರು ಆಲೋಚಿಸಲು ಅವಕಾಶವಿದೆ. ಇದೂ ಅಲ್ಲದೆ ಯಾರೋ ಒಬ್ಬ ಅಧಿಕಾರಿ ಎಲ್ಲೋ ಒಂದು ಮೂಲೆಯಲ್ಲಿ ಕುಳಿತುಕೊಂಡು ಯಾವುದೋ ಒಬ್ಬ ಮನುಷ್ಯನಿಗೆ ನೀನು ನಿನ್ನ ಹೋರಿಯನ್ನು ಪರೀಕ್ಷೆಗಾಗಿ ಇಂಥಾ ಸ್ಥಳಕ್ಕೆ ಹಾಜರ್ಮಾಡಬೇಕೆಂದು ಒಂದು ನೋಟೀಸ್ ಕೊಟ್ಟರೆ, ಆಗ ಆ ಮನುಷ್ಯ ಆ ಹೋರಿಯನ್ನು ಆತನಿರುವ ಜಾಗಕ್ಕೆ ಸಾಗಿಸಿಕೊಂಡು ಹೋಗಬೇಕು. ತಂಪು ಹೊತ್ತಿನಲ್ಲಿ ಅದನ್ನು ಸಾಗಿಸಿಕೊಂಡು ಹೋದರೆ ಅಧಿಕಾರಿಯು ಆ ವೇಳೆಯಲ್ಲಿ ಹಾಜರಿರುವುದಿಲ್ಲ. ಅವರು ಹಾಜರಾಗುವುದೇ ಒಳ್ಳೆ ಬಿಸಿಲು ಬರುತನಂತರ. ಹಾಗೆ ಬರುತ ಬಿಸಿಲಿನಲ್ಲಿ ಇಂಥಾ ಬೀಜದ ಹೋರಿಗಳನ್ನು ಹೊಡೆದುಕೊಂಡು ಹೋಗತಕ್ಕದ್ದು ಬಹಳ ಕಷ್ಟ. ಕೆಲವು ವೇಳೆ ಒಂದೊಂದು ಬೀಜದ ಹೋರಿಯನ್ನು ಸಾಗಿಸಿಕೊಂಡು ಹೋಗಲು ನಾರ್ಯಾರು ಜನರ ನೆರವು ಬೇಕಾಗುತ್ತದೆ. ಅಷ್ಟೇ ಅಲ್ಲದೆ ಅಂಥಾ ಬಿಸಿಲು ಕಾಲದಲ್ಲಿ ಆ ಜಾನುವಾರಿಗೆ ಹುಲ್ಲು ಮೇವಿನ ಅನುಕೂಲತೆಗಳು ಎಲ್ಲಿಂದ ದೊರೆಯಬೇಕು! ಈ ಭೀತಿಗಳೆಲ್ಲಾ ಮಾಲೀಕನಿಗೆ ಇರುತ್ತವೆ. ಈ ತೊಂದರೆಗಳನ್ನೆಲ್ಲಾ ತಪ್ಪಿಸಲು ರೈತರು ತಮ್ಮ ರಾಸುಗಳನ್ನು ತರುವ ಬದಲು ಅದನ್ನು ಪರೀಕ್ಷೆ ಮಾಡತಕ್ಕ ಆಫೀಸರೇ ಆಯಾ ಸ್ಥಳಕ್ಕೆ ಹೋಗಿ ಅದನ್ನು ಪರೀಕ್ಷೆ ಮಾಡುವಂತೆ ಮಾಡಿದರೆ ಬಹಳ ಉತ್ತಮವಾಗಿರುತ್ತದೆ. ಅಷ್ಟೇ ಅಲ್ಲದೆ ಹಾಗೆ ಒಬ್ಬೊಬ್ಬ ಅಧಿಕಾರಿಯೂ ತನ್ನ ಸರಹದ್ದಿಗೆ ಸೇರಿರತಕ್ಕ ಗ್ರಾಮಗಳನ್ನೆಲ್ಲಾ ಗಸ್ತು ಮಾಡಿ ಪ್ರತಿಯೊಂದು ಗ್ರಾಮದಲ್ಲೂ ಎಷ್ಟೆಷ್ಟು ಬೀಜದ ಹೋರಿಗಳಿರುತ್ತವೆಂಬ ಬಗ್ಗೆ ಮತ್ತು ಅಂಥ ಪ್ರತಿಯೊಂದು ಹೋರಿಯ ಬಗ್ಗೆ ಒಂದು ಚರಿತ್ರೆಯನ್ನೇ ಬರೆದು ತಮ್ಮ ಕಚೇರಿಗಳಲ್ಲಿ ಇಡತಕ್ಕದ್ದು ಅತ್ಯಾವಶ್ಯಕವೆಂದು ಹೇಳುತ್ತೇನೆ ಹೀಗೆ ಆಯಾ ಸ್ಥಳಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನೇ ಹೋಗುವಂತೆ ಮಾಡದಿದ್ದಲ್ಲಿ ಹೋರಿ ಸಾಕತಕ್ಕ ರೈತರಿಗೆ ಈ ಕಾನೂನಿನ ದೃಷ್ಟಿಯಲ್ಲಿ ಎಷ್ಟು ಅನುಕೂಲವಾಗುತ್ತದೆಂದು ಭಾವಿಸರಾಗಿದೆಯೋ ಅಷ್ಟೂ ತಪ್ಪಿ ಹೋಗುವುದಲ್ಲದೆ ರೈತರಿಗೆ ಇದರಿಂದ ಬಹಳ ತೊಂದರೆಯೂ ಆಗುತ್ತದೆ. ಆದ್ದರಿಂದ ಇದನ್ನು ಬದಲಾಯಿಸಬೇಕೆಂದು ಹೇಳುತ್ತೇನೆ. ರೈತರಿಗೊಂದು ತೊಂದರೆ ಇಂಥಾ ಕಾನೂನಿನಿಂದ ಆಗಬಾರದೆಂದು ನನ್ನ ಅಭಿಪ್ರಾಯ.

ಎರಡನೆಯದಾಗಿ, ಈಗ ಒಬ್ಬ ರೈತ ತಾನೇ ಇಷ್ಟಪಟ್ಟು ಕಷ್ಟದಿಂದ ಒಂದು ಹೋರಿಯನ್ನು ಸಾಕುತ್ತಾನೆಂದು ಭಾವಿಸೋಣ. ಅಂಥಾ ಮನುಷ್ಯ ಲೈಸೆನ್ಸು ತೆಗೆದುಕೊಳ್ಳಲು ಯಾವಾಗಲೂ ಸಿದ್ಧನಾಗಿದ್ದೇ ಇರುತ್ತಾನೆ. ಅಂಥವರಿಗೆ ಇಲಾಖೆಯವರೂ ಸಹ ಲೈಸೆನ್ಸು ಕೊಡಲು ಸಿದ್ಧವಾಗಿಯೇ ಇರುತ್ತಾರೆ. ಅಂಥಾ ರೈತರಿಗೆ ಈ ಕಾನೂನಿನಿಂದ ಅನುಕೂಲವೇ ಹೊರತು ಪ್ರತಿಕೂಲವಿಲ್ಲ. ಆದರೆ ಎಲ್ಲರೂ ಇದೇ ಪರಿಸ್ಥಿತಿಯಲ್ಲಿರುತ್ತಾರೆಂದು ಭಾವಿಸುವುದು ಉಚಿತವಲ್ಲ. ಆದುದರಿಂದ ಇಷ್ಟಪಟ್ಟವರಿಗೆ ಮಾತ್ರ ಇದು ಅನ್ವಯಿಸಿ, ಅಪೇಕ್ಷೆ ಪಡದವರಿಗೆ ತೊಂದರೆ ಉಂಟಾಗದಂತೆ ಕಾನೂನಲ್ಲಿ ಅವಕಾಶವಿರಬೇಕು. ಆ ರೀತಿ ಸರ್ಕಾರದವರು ರಿವೈಜ್ ಮಾಡಬಹುದು. ಹಾಗೆ ಮಾಡದೆ ಪ್ರತಿಯೊಬ್ಬರೂ ಈ ಕಾನೂನಿಗೆ ತಲೆಬಾಗಬೇಕೆಂದು ಹೇಳುವುದಾದರೆ ಮೊಳಕಾಲ್ಮುರುವಿನಲ್ಲಿರತಕ್ಕ ಯಾರೋ ಒಬ್ಬ ಮನುಷ್ಯ ತನ್ನ ಬಳಿ ಇರುವ ರಾಸು ಆರೋಗ್ಯವಾಗಿದೆಯೇ ಅಥವಾ ಇಲ್ಲವೇ, ಖಾಯಿಲೆ ಆಗಿದೆಯೇ ಎಂಬುದನ್ನು ಪರೀಕ್ಷೆ ಮಾಡಿಸಲು ಬೆಂಗಳೂರಿಗೇ ಬರಬೇಕೆಂದು ಹೇಳಿದರೆ, ಆತನು ಹಾಗೆ ಮಾಡಲು ತನಗೆ ಬಹಳ ತೊಂದರೆಗಳಿವೆಯೆಂದು ಒಂದು ಅರ್ಜಿ ಹಾಕಿ, ಅದು ಮೇಲಕ್ಕೆ ಹೋಗಿ ಆತನಿಗೆ ಅದರಿಂದ ಪರಿಹಾರ ದೊರಕಲು ವಿಶೇಷ ಹಣವ್ಯಯ ಮತ್ತು ಕಷ್ಟ ನಷ್ಟಗಳಿಗೆ ಅವಕಾಶ

ಉಂಟಾಗುತ್ತದೆ. ಅಲ್ಲದೆ ಸರಕಾರದಲ್ಲಿ ಒಂದೂ ತೀರ್ಮಾನವಾಗಲು ಅವಕಾಶವಿಲ್ಲ. ಈ ಕಾರಣದಿಂದ ಇಂಥಾ ನಂದರ್ಭಗಳಲ್ಲಿ ಅಪೀಲು ಹೋಗಲು ಆಯಾಯ ಜಿಲ್ಲೆಗಳಲ್ಲಿರುವಂಥ ಪಶುವೈದ್ಯ ಅಧಿಕಾರಿಗಳೇ ಅಧಿಕಾರ ಉಳ್ಳವರಾಗಿದ್ದಾರೆಂದು ತಾವು ಖಚಿತಪಡಿಸಬೇಕು. ಇಂಥಾದ್ದಕ್ಕೆಲ್ಲ ಕಾನೂನಿನಲ್ಲಿ ಅವಕಾಶ ಕಲ್ಪನ ಬೇಕಾದ್ದು ಅತ್ಯಗತ್ಯ.

ಅದೂ ಅಲ್ಲದೆ ರೈತರಿಗೆ ಸೆನ್ಸ್ ತೆಗೆದು ಕೊಂಡಿದ್ದಾರೆಯೇ ಇಲ್ಲವೇ ಎಂಬುದನ್ನು ತನಿಖೆ ಮಾಡುವುದಕ್ಕೆ ವೆಟರ್ನರಿ ಇಲಾಖೆಗೆ ಮಾತ್ರವಲ್ಲದೆ ರೆವೆನ್ಯೂ ಇನ್‌ಸ್ಪೆಕ್ಟರಿಗೂ ಅಧಿಕಾರ ಕೊಡಲು ಪ್ರಯತ್ನ ಪಟ್ಟಿದ್ದಾರೆ, ಅನೇಕ ದಕ್ಷರಾದ ರೆವೆನ್ಯೂ ಇನ್‌ಸ್ಪೆಕ್ಟರೂ ಇದ್ದಾರೆ; ಇಲ್ಲ ವೆಂಬ ಭಾವನೆಯಲ್ಲ. ಆದರೆ ರೈತರಿಗೆ ಕಿರುಕುಳ ಕೊಡದೇಯಿರುವವರಿಗೆ ಮಾತ್ರ ಅಧಿಕಾರ ಕೊಡುವುದು ಸೂಕ್ತವೆಂಬುದು ನನ್ನ ಸಲಹೆ. ಹಾಗೆ ಅಲ್ಲಲ್ಲಿ ಕೆಲವು ಬದಲಾವಣೆಮಾಡಿ ತಳಿ ಅಭಿವೃದ್ಧಿಯಾಗುವಂತೆಯೂ ರೈತರಿಗೆ ತೊಂದರೆಯಾಗದಂತೆಯೂ ಮಾಡಬೇಕು. ಈ ಒಂದು ದೃಷ್ಟಿಯಿಂದ ಈ ಮಸೂದೆಯನ್ನು ಅಂಗೀಕಾರವಾಗಬೇಕೆಂದು ಅಭಿಪ್ರಾಯ ಪಡುತ್ತೇನೆ. ಗೋಸಂಪತ್ತು ಅಭಿವೃದ್ಧಿಯಾಗುವುದಕ್ಕೆ ಏನೇನು ಅನುಕೂಲಬೇಕೋ ಅದನ್ನೆಲ್ಲಾ ಸರ್ಕಾರದವರು ಮಾಡಬೇಕು. ಮೈಸೂರು ದೇಶದಲ್ಲಿ ದನಗಳ ಸಾಕುವಿಕೆ ಚೆನ್ನಾಗಿರುವುದರಿಂದ ಹೊರದೇಶದಿಂದ ನಮಗೆ ಪ್ರತಿವರ್ಷವೂ ಕೋಟ್ಯಾಂತರ ರೂಪಾಯಿ ಬರುತ್ತಿದೆ. ಈ ದಿವಸ ನಮ್ಮ ರೈತರು ಹಾಗೂ ಹೀಗೂ ತಮಗೆ ಅನೇಕ ತೊಂದರೆಯಿದ್ದರೂ ಕೂಡ ದನ ಕರುಗಳನ್ನು ಸಾಕುವ ಕಸಬನ್ನು ಚೆನ್ನಾಗಿ ತಿಳಿದು ಕೊಂಡು ಆದಾಯ ಪಡೆಯುತ್ತಿದ್ದಾರೆ. ಇತರ ಕಸುಬುಗಳಂತೆಯೇ ಇದನ್ನೂ ಕಾಣುತ್ತಿದ್ದಾರೆ. ಹೀಗೆ ಮಾಡುವಾಗ ಅನೇಕ ತೊಂದರೆಗಳು ಬಂದಿವೆ. ಮೇವಿಗೆ ಅನುಕೂಲತಪ್ಪಿ ಹೋಯಿತು. ಡಾಲ್ಡ ಬಂದು ತುಪ್ಪ, ಹಾಲು, ಮೊಸರಿಗೆ ಸಾಕಷ್ಟು ಪ್ರಾಮುಖ್ಯತೆ ಹೋಯಿತು.

ಅಧ್ಯಕ್ಷರು.—ಬೆರೆ ಸ್ವಲ್ಪ ಕಡಮೆಯಾಯಿತೆಂದು ಹೇಳುತ್ತೀರಾ?

ಶ್ರೀ ಟಿ. ಮಾದಯ್ಯಗೌಡರು.—ಹೌದು, ಡಾಲ್ಡ,ವನಸ್ಪತಿ ಮುಂತಾದುವು ಬಂದು ತುಪ್ಪವನ್ನು ಮಾಡಿ ಮಾರಾಟ ಮಾಡುತ್ತಿದ್ದ ರೈತರಿಗೆ ಏನು ನಾಲ್ಕು ಕಾಸು ಸಿಕ್ಕುತ್ತಿತ್ತೋ ಅದೂ ಹೋಯಿತು.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತುಪ್ಪಕ್ಕೆ ಬೆಲೆ ಕಡಮೆಯಾಗಿಲ್ಲ. ಡಾಲ್ಡ ಉಪಯೋಗಿಸುತ್ತಿದ್ದಾರೆಂದು ಹೇಳಬಹುದು.

ಶ್ರೀ ಟಿ. ಮಾದಯ್ಯಗೌಡರು.—ನಾನು ಹಾಗೆ ತಿಳಿದುಕೊಂಡಿದ್ದೇನೆ. ಅನೇಕ ಕಾರಣಗಳಿಂದ ಗೋಸಂಪತ್ತನ್ನು ವೃದ್ಧಿ ಮಾಡುವ ಉಪಕ್ರಮಕ್ಕೆ ಬಹು ತೊಂದರೆ ಬಂದಿದೆ. ಅದನ್ನು ನಿವಾರಣೆ ಮಾಡಿ ಅಭಿವೃದ್ಧಿ ಪಡಿಸುವುದು ಧರ್ಮ. ಅದಕ್ಕೆ ಸರ್ಕಾರದವರು ಸರಿಯಾದ ಪ್ರೋತ್ಸಾಹ ನೀಡಬೇಕಾದ್ದು ಧರ್ಮ. ಹಳ್ಳಿಕಾರ್‌ದನಗಳು ಮತ್ತು ಅಮೃತಮಹಲ್ ರಾಸುಗಳು ಸಾಮಾನ್ಯವಾಗಿ ನಮ್ಮ ಕಡೆ ಪ್ರಗತಿ ಹೊಂದುತ್ತಿವೆ. ನಮ್ಮ ದನಗಳು ಹೊರಕ್ಕೆ ಸ್ವಲ್ಪ ಹೋಗುತ್ತಿವೆಯೆಂದು ಕೇಳಿದ್ದೇವೆ. ಇನ್ನಾವ ದೇಶದಲ್ಲೂ ಇಂಥ ಸೊಗಸಾದ, ಲಕ್ಷಣವಾದ ಮತ್ತು ಶಾಂತಿಯುತವಾದ ದನಗಳು ಸಿಕ್ಕುವುದಿಲ್ಲ, ಅದನ್ನು ಚೆನ್ನಾಗಿ ಕಾಪಾಡಿಕೊಂಡು ಬಂದು ಉತ್ತಮಸ್ಥಿತಿಗೆ ತರಬೇಕು. ಟಿಪ್ಪು ಸುರ್ತಾನನ ಕಾಲದಲ್ಲೂ ಅಮೃತ ಮಹಲ್ ದನಗಳಿಗೆ ಎಷ್ಟು ಪ್ರೋತ್ಸಾಹವಿತ್ತೆಂಬುದನ್ನು ಚರಿತ್ರೆಯಲ್ಲಿ ನೋಡಬಹುದು. ಈಗ ಹಾಲು ಹೆಚ್ಚಾಗಿ ಸಿಕ್ಕುವುದಿಲ್ಲವೆಂದು ಅಮೃತಮಹಲ್ ದನಗಳಿಗೆ ಬದಲಾಗಿ ಸಿಂಧಿ ರಾಸುಗಳನ್ನು ಉಪಯೋಗಿಸುವುದು ಹೆಚ್ಚಿದೆ. ಇದು ದನಗಳ ತಳಿ ಕಡಮೆಯಾಗಲು ಕಾರಣವಾಗಿದೆ. ಆದರೆ ಆ ಹಸುಗಳಿಗೆ ಏನು ಆಹಾರಕೊಟ್ಟು ಪೋಷಿಸಿ ನಿಗಾ ಕೊಡುತ್ತಾರೋ ಅದನ್ನೇ ನಮ್ಮ ಹಳ್ಳಿಕಾರ್ ಹಸುಗಳಿಗೆ ಕೊಟ್ಟರೆ ಅವೂ ಕೂಡ ಬಹಳ ಮಟ್ಟಿಗೆ ಉತ್ತಮ ರೀತಿಯಲ್ಲಿ ಹಾಲು ಕೊಡಲು ಅನುಕೂಲವಾಗುತ್ತದೆ. ಅದನ್ನು ಮಾಡದೆ ಹಳ್ಳಿಕಾರ ಹಸುಗಳಿಗೆ ನೂರು ರೂಪಾಯಿ ಬೆರೆಯಿದ್ದರೂ ಕೂಡ ಅವನ್ನು ಬಿಟ್ಟು ಒಂದು ಸಾವಿರ ರೂಪಾಯಿ ತೆತ್ತು ಸಿಂಧಿ ರಾಸುಗಳನ್ನು ತಂದು ಅವಕ್ಕೆ ಪ್ರೋತ್ಸಾಹ ಕೊಡುತ್ತಿದ್ದಾರೆ. ಅದರಲ್ಲಿ ಅಷ್ಟು ಅನುಕೂಲ ಕಾಣುವುದಿಲ್ಲ. ಹಾಲು ಕೊಡುವುದರಲ್ಲಿ, ಗಾಡಿ ಎಳೆಯುವುದರಲ್ಲಿ, ವ್ಯವಸಾಯದ ಕೆಲಸ ಮಗೈರೆ ಮಾಡುವುದರಲ್ಲಿ ಅನುಕೂಲವಾಗಿರತಕ್ಕಂಥ ಉತ್ತಮ ರಾಸುಗಳು ನಮ್ಮದೇಶದಲ್ಲಿರುವಾಗ ಅವನ್ನು ಯಾವ ರೀತಿಯಲ್ಲಿ ಸಾಕಬೇಕೋ ಆ ರೀತಿ ಮಾಡದೆ ಪರದೇಶದ ದನಗಳನ್ನು ತರುತ್ತಿರುವುದು ಬಹಳ ಅನ್ಯಾಯ. ಈಚೆಗೆ ಅಚ್ಚುಕಟ್ಟಾದಲ್ಲಿರುವ ಬೀಜದ ಹೋರಿಗಳನ್ನು ಸಾಕತಕ್ಕ ಸಂಸ್ಥೆಯು ಸ್ವಲ್ಪ ಕೆಳಮಟ್ಟಕ್ಕೆ ಇಳಿದಿದೆಯೆಂದು ಕೇಳಿಬರುತ್ತಿದೆ. ಇದರಿಂದ ಬಹು ತೊಂದರೆ. ಪ್ರತಿಯೊಂದು ಜಿಲ್ಲೆಯಲ್ಲೂ ಉತ್ತಮ ತರಹೆಯ ಬೀಜದ ಹೋರಿಗಳನ್ನು ಸಾಕುವ ಕೇಂದ್ರವಿಲ್ಲ. ಅನೇಕ ಮಹನೀಯರು ಹೇಳಿದ ಹಾಗೆ ಒಳ್ಳೆಯ ಹೋರಿಗಳು ಬೇಕು. ಹಾಗೆ ಏರ್ಪಾಡಾದರೆ ಅಂದರೆ ಈ ಕಾನೂನಿನಿಂದ ಆ ರೀತಿಯಾದರೆ ಉತ್ತಮವಾಗುತ್ತದೆ. ಒಳ್ಳೆಯ ಹೋರಿಗಳನ್ನು ಸಾಕತಕ್ಕ ಕೇಂದ್ರವಿರಬೇಕು. ಅಂಥ ಕಡೆ ಸೊಗಸಾದ ಕರುಗಳನ್ನಿಡಿಸಿ ಹೋರಿಗಳನ್ನು ತಯಾರುಮಾಡಿ ಬೇರೆ ಬೇರೆ ಕಡೆಗಳಿಗೆ ಹಂಚಬೇಕು. ಒಂದೊಂದು ಕಡೆಗೆ 50 ಹೋರಿಗಳು ಬೇಕೆಂದು ಶ್ರೀ ಗುಂಡಪ್ಪಗೌಡರು ಹೇಳಿದರು. ಆದರೆ ಎಲ್ಲಿಂದ ತರಬೇಕು? ಬೇರೆ ಕಡೆಯಿಂದ ಕೊಂಡು ತರಬಹುದು. ಆದರೆ ಅದಕ್ಕಿಂತ ಒಳ್ಳೆಯ ಕೇಂದ್ರವನ್ನು ಏರ್ಪಡಿಸಿ ಒಳ್ಳೆಯ ಹಸುಗಳನ್ನು ಮತ್ತು ಹೋರಿಗಳನ್ನು ತರಿಸಿ ಹೆಚ್ಚು ಉತ್ತಮವಾದ ರಾಸುಗಳನ್ನು ಉತ್ಪನ್ನ ಮಾಡಿ ರೈತರಿಗೆ ಪ್ರೋತ್ಸಾಹ ಮಾಡುವುದು ಒಳ್ಳೆಯದು. ಅದು ಸಾಧ್ಯವಿಲ್ಲವೆಂದು ಭಾವಿಸಬಾರದು, ಹೀಗೆ ಮಾಡುವುದರಿಂದ ನಮ್ಮ ಪ್ರಾಂತ್ಯಕ್ಕೆ ಮಾತ್ರವಲ್ಲದೆ ಇಡೀ ಮೈಸೂರು ದೇಶಕ್ಕೇ ಸಹಾಯವಾಗುತ್ತದೆಂದು ಅನೇಕ ಮಹನೀಯರು ಹೇಳಿದ್ದಾರೆ. ಇತರ ಜಿಲ್ಲೆಗಳ ಮಾನ್ಯ ಮಿತ್ರರೂ ಅದೇ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಆದ್ದರಿಂದ ಈ ಮಸೂದೆಯು ಇರಬೇಕು. ಇದಕ್ಕೆ ಪೂರ್ಣ ಬೆಂಬಲ ವಿದೆ. ಆದರೆ ಸೂಕ್ಷ್ಮ ಬದಲಾವಣೆ ಮಾಡಿ, ಕೂಲಂಕಷವಾಗಿ ಸೆಲೆಕ್ಟ್ ಸಮಿತಿಯಲ್ಲಿ ಪರಿಶೀಲಿಸಿ ಜಾರಿಗೆ ತರಬೇಕೆಂದು ತಿಳಿಸಿ ಈ ಮಸೂದೆಯನ್ನು ಪುಷ್ಟೀಕರಿಸುತ್ತೇನೆ.

ಶ್ರೀ ಎಂ. ಎರ್. ನಂಜರಾಜ ಅರಸಿನವರು (ಮೈಸೂರು ಜಿಲ್ಲೆ).—ಅಧ್ಯಕ್ಷರೇ, ಸರ್ಕಾರದವರು ಈ ಕಾನೂನನ್ನು ತಂದಿರುವ ಉದ್ದೇಶ ಬಹಳ ಒಳ್ಳೆಯದು, ಆದರೆ ಕಾರ್ಯ ರೂಪಕ್ಕೆ ಬಂದರೆ ಅಷ್ಟು ಒಳ್ಳೆಯದಾಗುವುದಿಲ್ಲವೆಂದು ಈಗಲೇ ಹೇಳುತ್ತೇನೆ. ಅದರಲ್ಲ ಮುಚ್ಚುಮರೆಯಿಲ್ಲ. ನಾನು ಇದನ್ನು ವಿರೋಧಿಸುತ್ತಿಲ್ಲ. ಇದು ದೇಶದಲ್ಲಿರುವ ಸರಕಡ ೧೦ ಮಂದಿ ರೈತರಿಗೆ ಅನುಕೂಲವಾಗುವುದಿಲ್ಲ. ಈ ದಿವಸ ನಮ್ಮ ದೇಶದಲ್ಲಿ ಅನೇಕ ರೀತಿನೀತಿಗಳಿವೆ. ಪಟ್ಟಣಗಳಲ್ಲಿರು

(ಶ್ರೀ ಎಂ ಎಲ್. ನಂಜರಾಜ ಅರಸಿನವರು.)

ವವರಿಗೇ ಒಂದು ದೃಷ್ಟಿಯಿದೆ. ಅವರು ಹಾಲು, ಮೊನರು, ಬೆಣ್ಣೆಯ ಕಡೆ ನಿಗಾ ಕೊಡುತ್ತಾರೆ. ಅವರಿಗೆ ಅಂಥ ದನಗಳು ಅಭಿವೃದ್ಧಿಯಾಗಬೇಕೆಂಬ ದೃಷ್ಟಿಯಿದೆ. ಅದೇ ಜಿರಾಯ್ತಿ ಕನಬು ಮಾಡುವ ರೈತನಿಗೆ ಎರಡು ಕೆಲಸಕ್ಕೂ (dual purpose) ಅನುಕೂಲವಾದ ರಾಸು ಬೇಕು. ಮೈಸೂರು, ಮಂಡ್ಯ, ಬೆಂಗಳೂರು ಜಿಲ್ಲೆಗಳಲ್ಲಿ ಹಳ್ಳಿಕಾರಜಾತಿಯಿರುವುದು ಹೆಚ್ಚು, ಮಲೆನಾಡು ಪ್ರದೇಶದಲ್ಲಿ ಗಿಡ್ಡರಾಸುಗಳು ಹೆಚ್ಚು ಎಂದು ಶ್ರೀ ಗುಂಡಪ್ಪಗೌಡರು ಹೇಳಿದರು. ಅಲ್ಲಿಗೆ ಅದು ಅನ್ವಯಿಸಬಹುದು. ನನಗೆ ಮಲೆನಾಡಿನ ವಿಚಾರ ಗೊತ್ತಿಲ್ಲ. ಅದೇ ಹೆಗ್ಗಡದೇವನಕೋಟೆಯ ಕಡೆ ಇಂಥ ಕಾನೂನನ್ನು ಅನ್ವಯಿಸಬಹುದು. ಎಲ್ಲಾ ಕಡೆಗೂ ಇವನ್ನು ಅನ್ವಯಿಸಿದರೆ ಅನರ್ಥವೇನಾಗುತ್ತದೆಯೆ. ಬುದನ್ನು ಯೋಚನೆ ಮಾಡಬೇಕು ಮಂಡ್ಯ, ಮೈಸೂರು ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಹಾಲಿಗಾಗಿ ಹೆಚ್ಚು ಹಸುಗಳನ್ನು ಸಾಕುವುದಕ್ಕಿಂತ ಒಳ್ಳೆ ಜಾತಿ ಹೋರಿಗಳಿಗಾಗಿ ಹಸುಗಳನ್ನು ಸಾಕುತ್ತಾರೆ. ಅಂಥ ಮೈದಾನ ಜಿಲ್ಲೆಗಳ ಕಡೆ ಈ ಕಾನೂನು ಜಾರಿಯಾದರೆ ಭಾರಿ ಅನರ್ಥವಾಗುತ್ತದೆ. ಕಂಪ್ಲೋಲು ಬಂದು ಈಗ ಆಗುತ್ತಿರುವ ಕರುಕುಳಕ್ಕಿಂತ ಹೆಚ್ಚು ಕರುಕುಳ ಆಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಕೆಲವರು ಈ ಕಾನೂನಿನಲ್ಲಿ ಯಾವ ರೀತಿಯಲ್ಲಿ ಅವಕಾಶ ಇರಬೇಕೆಂಬುದನ್ನು ಕೂಡ ಅನುಭವದಿಂದ ಹೇಳಿದ್ದಾರೆ. ಸಾಮಾನ್ಯವಾಗಿ ನಮ್ಮ ಗ್ರಾಮಾಂತರಗಳಲ್ಲರತಕ್ಕ ಹೋರಿಕರುಗಳಿಗೆ ಎರಡು ಹಲ್ಲುಗಳಾದ ಮಾತ್ರಕ್ಕೇ ಅವುದೊಡ್ಡ ಹೋರಿಗಳೆಂದು ಯಾರೂ ಹೇಳುವುದಕ್ಕಾಗುವುದಿಲ್ಲ. ಇವುಗಳಿಗೆ ಎರಡುಹಲ್ಲುಗಳಾದ ಮೇಲೆಯೇ inseminate ಮಾಡುವ ಶಕ್ತಿ ಬರುವುದು. ರೈತರು ಇಂಥವುಗಳನ್ನು ಸಿಕ್ಕಿದ ಹಾಗೆ ಬಿಡುವುದಿಲ್ಲ. ಯಾವುದನ್ನು ಗೂಳಿಯಾಗಿಟ್ಟುಕೊಳ್ಳಬಹುದು, ಯಾವುದನ್ನು ಇಟ್ಟುಕೊಳ್ಳಬಾರದೆಂಬುದು ರೈತರಿಗೆ ಗೊತ್ತಿದೆ ಹಾಸ್ತಿದಿನ ಹಾಗೆಯೇ ಬಿಟ್ಟುಬಿಟ್ಟರೆ ಇವುಬೇರೆ ಕೆಲಸಕ್ಕೆ ಬರುವುದಿಲ್ಲವೆಂಬುದೂ ಅವರಿಗೆ ಗೊತ್ತಿದೆ. ಅದುದರಿಂದ ಎರಡು ಹಲ್ಲುಗಳ ಕರುಗಳಿಗೆಲ್ಲಾ ಬೀಜ ಹೊಡೆಸಬೇಕೆಂದು ಹೇಳುವುದು ನ್ಯಾಯವಲ್ಲ. ವಿಶೇಷವಾಗಿ ಗಿಡ್ಡ ಹೋರಿಗಳನ್ನು ಬಿಟ್ಟಿರುವ ಮಲೆನಾಡು ಪ್ರದೇಶಗಳಿಗೆ ಮಾತ್ರ ಈ ಕಾನೂನು ಅನ್ವಯಿಸಬಹುದು ಇದುವರೆಗೆ ಸಾಮಾನ್ಯವಾಗಿ ರೈತರು ಹೆದರಿಕೊಳ್ಳದೇಯಿದ್ದುದು ಒಂದು ಇರಾಖೆಗೆ. ಅವು ಯಾವುದೆಂದರೆ, ವೆಟರಿನೆರಿ ಇಲಾಖೆ. ಧೈರ್ಯವಾಗಿ ಹೋಗಿ ಅಲ್ಲ ಔಷಧಗಳನ್ನು ತಂದುಕೊಂಡು ಅದರ ಉಪಯೋಗ ಪಡೆಯುತ್ತಿದ್ದರು. ಇಂತಹ ಇಲಾಖೆಗೆ ಈ ರೀತಿಯ ಒಂದು ವಿಶೇಷ ಅಧಿಕಾರವನ್ನು ಕೊಟ್ಟರೆ ಈ ಇಲಾಖೆಗೂ ರೈತರು ಹೆದರಬೇಕಾಗುತ್ತದೆ ಮತ್ತು ಇದಕ್ಕೂಕೂಡ ಲಂಚದ ರೋಗ ಬರುತ್ತದೆ. ಕಾಲಕಾಲಕ್ಕೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೇ ಹೋಗಿ ಇನ್ಸ್‌ಪೆಕ್ಟ್ ಮಾಡುವಂತೆ ಏರ್ಪಾಡೇ ಮಾಡಬೇಕೆಂದು ಶ್ರೀ ಮಾದಯ್ಯಗೌಡರು ಹೇಳಿದರು. ನಮ್ಮಲ್ಲಿ ಅನೇಕ ಯುವಕರು ವೆಟರಿನೆರಿ ಶಿಕ್ಷಣ ಪಡೆದು ಬಂದಿರುವವರು ಪುಸ್ತಕಗಳನ್ನು ಓದಿ ಸರ್ಟಿಫಿಕೇಟುಗಳನ್ನು ಪಡೆದು ಬಂದಿರಬಹುದು ಆದರೆ ಅವರಿಗೆ ದನಗಳನ್ನು ಸಾಕುವ ಅನುಭವ ಯಾವಾಗ ಬಂದಿದೆ ಎಂದು ನಾನು ಕೇಳುತ್ತೇನೆ. ಅವರು ಅನುಭವವನ್ನು ಎಲ್ಲ ಪಡೆದುಬಂದಿದ್ದಾರೆ? ಸಾಮಾನ್ಯವಾಗಿ ಯಾವುದರಲ್ಲಿ ಹೆಚ್ಚು ವ್ಯವಹಾರ ಇರುತ್ತದೆಯೋ ಅದು ಒಳ್ಳೆಯದೆಂದು ಹೇಳುತ್ತಾರೆ, ಹಾಲು ಹೆಚ್ಚಾಗಿ ಕೊಡುವುದನ್ನು ಒಳ್ಳೆಯದೆಂದು ಹೇಳುತ್ತಾರೆ. ಕೆಲವು ಮಾನ್ಯ ಸದಸ್ಯರು ಬೊಂಬಾಯಿ, ಮದರಾಸು, ಸಂಯುಕ್ತ ಪ್ರಾಂತ್ಯ ಮುಂತಾದ ಕಡೆ ಈ ಕಾನೂನು ಜಾರಿಯಲ್ಲಿದೆಯೆಂದು ಹೇಳಿದರು. ಅಲ್ಲಿಗೆ ನಮ್ಮ ಕಡೆಯಿಂದ ದನಗಳು ಹೋಗದಿದ್ದರೆ ಅವರು ವ್ಯವಸಾಯ ಮಾಡುವುದಕ್ಕೇ ಸಾಧ್ಯವಿಲ್ಲ. ಇಲ್ಲಿಂದ ಹಾವೇರಿ, ಹುಬ್ಬಳ್ಳಿ, ಧಾರವಾಡ, ಬೀರಪ್, ಸತಾರ ಮತ್ತು ಮದರಾಸಿನ ಕಡೆಗೆ ಪ್ರತಿವರ್ಷವೂ ಸಾವಿರಾರು ದನಗಳು ಹೋಗುತ್ತವೆ. ಅದಕಾರಣ ನಮ್ಮ ರೈತರು ಅವರಿಂದ ಬುದ್ಧಿ ಕಲಿತುಕೊಳ್ಳುವ ಅವಶ್ಯಕತೆಯಿಲ್ಲ. ಶ್ರೀ ಗುಂಡಪ್ಪಗೌಡರು ಒಂದು ಸಲಹೆಯನ್ನು ಕೊಟ್ಟರು, ಎಲ್ಲೆಲ್ಲಿ ಗ್ರಾಮ ಪಂಚಾಯಿತಿಗಳಿರುತ್ತವೆಯೋ ಅಲ್ಲಿ ಪೋಲಿಗೂಳಿಗಳಿಂದ ತಮಗೆ ಬಹಳ ಕಷ್ಟವಾಗಿದೆ ಅದನ್ನು ತಪ್ಪಿಸಬೇಕೆಂದು ಅವರಿಂದ ದೂರು ಬಂದಿದ್ದರೆ ಇದನ್ನು ಮಾಡಬಹುದಾಗುತ್ತೆಂದು ಹೇಳಿದರು. ಈಗ ನಾನು ಮಲೆನಾಡು ಪ್ರಶ್ನೆಗೆ ಹೋಗುವುದಿಲ್ಲ. ಅಲ್ಲಿ ಬೇಕಾದರೆ ಪೋಲಿಗೂಳಿಗಳನ್ನು ತಡೆಗಟ್ಟಬೇಕೆಂದು ಮಾಡಲಿ. ಇನ್ನೊಬ್ಬರು ನಮ್ಮ ದನಗಳ ತಳಿಗಳನ್ನು ಅಭಿವೃದ್ಧಿ ಪಡಿಸಬೇಕೆಂದು ಹೇಳಿದರು ನಮ್ಮ ರೈತರಿಗೇ ಇದುಗೊತ್ತಿದೆ. ನಾರ್ಥ್‌ಬ್ರೂಕ್ ವರ್ಷಗಳ ಹಿಂದೆ ಸರ್‌ದಾತ್ತಾರ್ ಸಿಂಗರು ಚುಂಚನಕಟ್ಟೆ ಜಾತ್ರೆಗೆ ಬಂದಿದ್ದಾಗ ಅಲ್ಲಿ ಕೂಡಿದ್ದ ಎತ್ತುಗಳನ್ನೂ ಮತ್ತು ಹೋರಿಗಳನ್ನು ನೋಡಿ ಆಶ್ಚರ್ಯಪಟ್ಟರು. ಮೈಸೂರು ಡಿಸ್ಟ್ರಿಕ್ಟಿನಲ್ಲಿ ಕೃಷ್ಣರಾಜನಗರ, ಹುಣಸೂರು, ಪಿರಿಯಾಪಟ್ಟಣ ಮುಂತಾದ ಸ್ಥಳಗಳು ಮೊದಲಿನಿಂದಲೂ ಒಳ್ಳೆಯ ತಳಿಗಳಿಗೆ ಹೆಸರು ಪಾಸಿಯಾದ ಸ್ಥಳಗಳು. ಸರ್ದಾತ್ತಾರ್‌ಸಿಂಗರ ಸಲಹೆಯ ಮೇರೆ ಹುಣಸೂರಿನ ಹತ್ತಿರ ಒಂದು ಕ್ಯಾಟರ್ ಬ್ರೀಡಿಂಗ್ ಸ್ಟೇಷನ್ ಸ್ಥಾಪನೆ ಮಾಡುವುದಾಗಿ ಮಂತ್ರಿಗಳು ಹೇಳಿದ್ದರು. ಆದರೆ ಏಕೋ ಮಾಡಲಿಲ್ಲ. ಈಗ ಸರ್ಕಾರದವರ ಉದ್ದೇಶ ಸಾಧನೆಯಾಗಬೇಕಾದರೆ, ಎಲ್ಲಾದರೂ ಏನೂರು ಒಳ್ಳೆಯ ಜಾತಿಯ ಹಳ್ಳಿಕಾರ ಕಡಸುಗಳನ್ನು ಆರಿಸಿ ತಂದು ಹುಣಸೂರಿನಲ್ಲಿ ಒಂದು ಕ್ಯಾಟರ್ ಬ್ರೀಡಿಂಗ್ ಸ್ಟೇಷನ್ ಮಾಡಬೇಕು. ಹಾಗೆ ಮಾಡಿದರೆ ಒಳ್ಳೆಯ ಹೋರಿಗಳನ್ನು ಹೆಚ್ಚಿಸುವುದಕ್ಕೂ ಮತ್ತು ತಳಿಯನ್ನು ಅಭಿವೃದ್ಧಿ ಮಾಡುವುದಕ್ಕೂ ಅನುಕೂಲವಾಗುತ್ತದೆ. ಇದನ್ನು ಮಾಡದೆ ಈ ಕಾನೂನು ಮಾಡಿದರೆ ರೈತರಿಗೆ ಕಿರುಕುಳ ತಪ್ಪುವುದಿಲ್ಲ. ಈ ಕಾನೂನನ್ನು ಬೇಕಾದರೆ ಮಲೆನಾಡಿಗೆ ಮಾತ್ರ ಅನ್ವಯಿಸಲಿ. ಈ ಮಸೂದೆಯೆಲ್ಲ ರವೆನ್ಯೂ ಇನ್ಸ್‌ಪೆಕ್ಟರು ಹೋಗಿ ನೋಡಬೇಕೆಂದು ವಿಧಾಯಕ ಮಾಡಿದೆ. ಅವರಿಗೆ ದನಗಳ ವಿಚಾರ ಏನು ಗೊತ್ತಿದೆ? ಸಾಮಾನ್ಯವಾಗಿ ಸರ್ಕಾರದ ಇಲಾಖೆಗಳಲ್ಲಿರುವ ಮುಕ್ಕಾಲು ಭಾಗ ಅಧಿಕಾರಿಗಳಿಗೆ ಹಳ್ಳಿಗಾಡುಗಳ ಸ್ಥಿತಿಗಳು ಗೊತ್ತಿರುವುದಿಲ್ಲ, ಪುಸ್ತಕಗಳಲ್ಲಿ ಓದಿರುತ್ತಾರೆ, ಅಷ್ಟೆ. ಅದುದರಿಂದ ಈ ಎಲ್ಲ ವಿಚಾರಗಳನ್ನು ಆಲೋಚನೆ ಮಾಡಿ ನೋಡಿ ರೈತರಿಗೆ ತೊಂದರೆಯಾಗದೇ ಇರುವಂತೆ ಮಾಡಬೇಕು. ನಮ್ಮ ರೈತರಿಗೆ ಈ ವಿಚಾರದಲ್ಲಿ ಹೊಸದಾಗಿ ಏನೂ ಕಲಿಸಬೇಕಾಗಿಲ್ಲ. ಈ ವಿಚಾರವನ್ನು ನಾನು ಹೋದ ಬಡ್ಜೆಟ್ ಅಧಿವೇಶನದಲ್ಲೇ ಹೇಳಿದ್ದೇನೆ. ನಮ್ಮ ಮನೆಯಲ್ಲಿ ಒಂದು ಗೂಳಿಗೆ ಕಣ್ಣು ತೊತಾಗಿ ಅದನ್ನು ಆಸ್ಪತ್ರೆಗೆ ತೋರಿಸಲು ಅದು ಗುಣವಾಗಬೇಕಾದರೆ ಅದನ್ನು ಒಂದು ತಿಂಗಳ ಕಾಲ ಆಸ್ಪತ್ರೆಯಲ್ಲಿಟ್ಟು ಇರಾಜು ಮಾಡಿಸಬೇಕೆಂದು ಹೇಳಿದರು. ಆದರೆ ನಮ್ಮ ಹಳ್ಳಿಯಲ್ಲಿ ಒಬ್ಬ ರೈತ ಒಂದು ಹನರು ಔಷಧವನ್ನು ಕೊಟ್ಟ.

ಕೆಲವು ದಿನಗಳಲ್ಲೇ ಪಾಸಿಯಾಯಿತು. ಇದಕ್ಕೆ ಏನೂ ಹಣ ಖರ್ಚಾಗಲಿಲ್ಲ. ಹಾಗೆ ಹಳ್ಳಿಯವರಿಗೆ ದನಗಳನ್ನು ಅಭಿವೃದ್ಧಿ ಮಾಡುವ ಮಾರ್ಗ ಗೊತ್ತಿದೆ. ಅವರಿಗೆ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸುವುದರಿಂದ ಹೆಚ್ಚಿನ ಪ್ರಯೋಜನವೇ ಹೊರತು ಹೀಗೆ ಕಾನೂನು ಮಾಡುವುದರಿಂದ ಪ್ರಯೋಜನವಾಗಲಾರದು. ಅದುದರಿಂದ ಇದನ್ನು ಮರೆನಾಡಿಗೆ ಮಾತ್ರ ಅನ್ವಯಿಸಬಹುದೇ ಎಂಬ ವಿಚಾರವನ್ನು ಸೆರೆಕ್ಟ್ ಕಮಿಟಿಯವರು ಪರಿಶೀಲಿಸಿ ನೋಡಬೇಕೆಂದು ನನ್ನ ಸೂಚನೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಸ್ವಾಮಿ, ಈ ಮಸೂದೆಯನ್ನು ತಂದಿರುವುದಕ್ಕೆ ಕಾರಣ ಮತ್ತು ಉದ್ದೇಶವನ್ನು ನೋಡಿದರೆ ಸಮಂಜಸವಾಗಿ ಕಾಣುತ್ತದೆ. ನಮ್ಮ ದೇಶದಲ್ಲಿ ದನಗಳ ತಳಿಗಳನ್ನು ಅಭಿವೃದ್ಧಿ ಮಾಡಬೇಕೆಂದು ಇದನ್ನು ತಂದಿದ್ದಾರೆ. ಇದರಲ್ಲಿರುವ ಸಾಧಕಬಾಧಕಗಳನ್ನು ಕುರಿತು ಅನೇಕರು ಮಾತನಾಡಿದ್ದಾರೆ. ಆದಕಾರಣ ನಾನು ಹೆಚ್ಚು ವಿವರಿಸಬೇಕಾಗಿಲ್ಲ. ಆದರೂ ಕೂಡ ಒಂದೆರಡು ವಿಚಾರಗಳನ್ನು ನಥೆಯ ಮುಂದಿಡುತ್ತೇನೆ.

ದನಗಳನ್ನು ಬೆಳಸುವುದರಲ್ಲಿ ನಮ್ಮ ಮೈಸೂರು ದೇಶ ಇಡೀ ಇಂಡಿಯಾ ದೇಶದಲ್ಲೇ ಹೆಸರುವಾಸಿಯಾಗಿದೆ. ನಮ್ಮ ದನಗಳು ಇತರ ಯಾವ ಪ್ರದೇಶಗಳ ತಳಿಗಳಿಗೂ ಕಡಿಮೆಯಾಗಿಲ್ಲದಷ್ಟು ಉತ್ತಮವಾಗಿದ್ದವು. ಆದರೆ ಈಚೆಗೆ ಇದು ತಲೆಕೆಳಗಾಗಿದೆ. ಈ ತಳಿಗಳನ್ನು ಉತ್ತಮಪಡಿಸಬೇಕಾದರೆ ಬರೀ ಬೀಜ ಬದಲಾಯಿಸುವುದರಿಂದ ಆಗುತ್ತದೆಂದರೆ ನಾನು ಒಪ್ಪುವುದಿಲ್ಲ. ಬರೀ ಬೀಜದಿಂದಲೇ ಗಿಡ್ಡಗಳು ದೊಡ್ಡ ರಾಸುಗಳಾಗುತ್ತವೆಂದರೆ ಯಾರೂ ಒಪ್ಪತಕ್ಕ ಮಾತಲ್ಲ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದೊಂದರಿಂದಲೇ ಅಭಿವೃದ್ಧಿಯಾಗುತ್ತದೆಂದು ಯಾರೂ ಹೇಳಲಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಈ ಮಸೂದೆಯನ್ನು ತಂದಿರುವುದು ಕೂಸು ಹುಟ್ಟುವುದಕ್ಕಿಂತ ಮುಂಚೆ ಕುರಾವಿ ಹೊಲಿಸಿದ ಹಾಗಾಗಿದೆ. ಸರ್ಕಾರದವರು ಐದು ವರ್ಷಗಳ ಹಿಂದೆ ಒಂದು ಯೋಜನೆಯನ್ನು ಮಾಡಿದರು, ವರ್ಷಕ್ಕೆ ಇಪ್ಪತ್ತೈದು ಆಸ್ಪತ್ರೆಗಳಂತೆ ನಮ್ಮ ದೇಶದಲ್ಲಿ ದನಗಳ ಆಸ್ಪತ್ರೆಗಳನ್ನು ಹೆಚ್ಚಿಸಬೇಕೆಂದು ಮಾಡಿದರು. ಆದರೆ ಅದನ್ನು ನಾಲ್ಕು ವರ್ಷ ನಡೆಸಿ ಸರ್ಕಾರದವರೇ ನಿಲ್ಲಿಸಿದರು. ಹೋದ ವರ್ಷವೂ ಜಾರಿಗೆ ಕೊಡಲಿಲ್ಲ, ಈ ವರ್ಷವೂ ಕೊಡಲಿಲ್ಲ. ಹೋರಿಗಳನ್ನು ಕಸಿ ಮಾಡಬೇಕೆಂದು ಮಾಡುವುದರಿಂದ ದೇಶದಲ್ಲಿ ಸಾಕಾದಷ್ಟು ರಾಸುಗಳು ಸಿಕ್ಕುವುದಿಲ್ಲ. ನಮ್ಮ ಸಂಸ್ಥಾನದಲ್ಲಿ ಸುಮಾರು ಹನ್ನೆರಡು ಸಾವಿರ ಗ್ರಾಮಪಂಚಾಯಿತಿಗಳಿವೆ. ಸರ್ಕಾರದವರು ಹನ್ನೆರಡು ಸಾವಿರ ಹೋರಿಗಳನ್ನಾದರೂ ಕೊಟ್ಟಿದ್ದಾರೆಯೆ? ಒಟ್ಟು ಸುಮಾರು ನೂರು ಆಸ್ಪತ್ರೆಗಳಿವೆ. ಅವುಗಳಲ್ಲಿಯೂ ಒಂದೊಂದು ಆಸ್ಪತ್ರೆಯಲ್ಲಿ ಒಂದೊಂದು ಕೋಣ ಕೂಡ ಇಲ್ಲ. ನಮ್ಮಲ್ಲಿನ ಕೋಣಗಳೆಲ್ಲವೂ ಸುಬ್ರಹ್ಮಣ್ಯದ ಜಾತ್ರೆಗೆ ಹೊರಟುಹೋಗುತ್ತವೆ. ಇಲ್ಲಿ ಒಂದು ಸರಿಯಾದ ಕೋಣವೂ ಸಿಕ್ಕುವುದಿಲ್ಲ. ಯಾರಾದರೂ ವ್ಯವಸಾಯಕ್ಕಾಗಿ ಕೋಣಗಳು ಇಟ್ಟಿದ್ದರೆ ಅವುಗಳನ್ನು ಎಮ್ಮೆಗಳ ಮೇಲೆ ಹಾರಿಸಬೇಕಾಗುತ್ತದೆ. ನಮ್ಮಲ್ಲಿ ವ್ಯವಸಾಯದ ಕೆಲಸಕ್ಕೂ ಕೋಣಗಳನ್ನು ಹೆಚ್ಚಾಗಿ ಉಪಯೋಗಿಸುವುದಿಲ್ಲ, ಈ ಪದ್ಧತಿ ತಪ್ಪಿ ಹೋಗಿದೆ. ಆದ್ದರಿಂದ ಸರ್ಕಾರದವರು ಎಲ್ಲಾ ಕಡೆಯೂ ಇದರ ಸರಬರಾಯಿ ಸಾಕಾಗುತ್ತದೆಯೋ ಇಲ್ಲವೋ ಎಂಬುದನ್ನು ಮೊದಲೇ ಯೋಚನೆಮಾಡಿದ್ದರೆ ಚೆನ್ನಾಗಿತ್ತು. ನಮ್ಮ ದೇಶದಲ್ಲಿ ದನ ಸಾಕುವವರು ಬಹಳ ಕಷ್ಟಪಟ್ಟು ಇದನ್ನು ಒಂದು ಕಸಬನ್ನಾಗಿ ಇಟ್ಟುಕೊಂಡಿದ್ದಾರೆ. ಶ್ರೀ ಮಾದಯ್ಯಗೌಡರು ಹೇಳಿದ ಹಾಗೆ ವರ್ಷಕ್ಕೆ ಲಕ್ಷಾಂತರ ರೂಪಾಯಿಗಳನ್ನು ಈ ದನಗಳ ಮೇಲೆ ಹಾಕುತ್ತಾರೆ. ಹೊರಗಿನಿಂದ ಆಹಾರ ಪದಾರ್ಥಗಳನ್ನು ತರಿಸಲು ಎಷ್ಟು ಹಣ ಖರ್ಚು ಮಾಡುತ್ತೇವೆಯೋ ಅಷ್ಟೇ ಹಣ ಹೊರಗಿನಿಂದ ದನಗಳ ಮಾರಾಟದಿಂದ ಬರುತ್ತಾ ಇದೆ. ಆದ್ದರಿಂದ ಅನೇಕರು ತಳಿ ಅಭಿವೃದ್ಧಿ ಮಾಡುವುದನ್ನೇ ಮುಖ್ಯ ಕಸಬನ್ನಾಗಿಟ್ಟುಕೊಂಡು, ಅದು ಅವರ ಜೀವನಕ್ಕೆ ಅಶ್ರಯವಾಗಿದ್ದು ಬಹಳ ಶ್ರದ್ಧೆಯಿಂದ ಸಾಕುತ್ತಾ ಇದ್ದಾರೆ. ಅಂಥವರು ಹೋರಿಗಳನ್ನು ಕಸಿ ಮಾಡಬೇಕೆಂದು ಏನೂ ಇಲ್ಲ. ಸೆಕ್ಷನ್ 11(a) ನಲ್ಲಿ ರೈಸರ್ಜಿಸ್ ಕೇಳುವ ಅಧಿಕಾರಿಗಳು ಯಾರೆಂದರೆ ಮೆಟರಿನರಿ ಇನ್‌ಸ್ಪೆಕ್ಟರು, ಆಗ್ರಿಕಲ್ಚರಲ್ ಇನ್‌ಸ್ಪೆಕ್ಟರು ಅಥವಾ ರೆವೆನ್ಯೂ ಇನ್‌ಸ್ಪೆಕ್ಟರು ಎಂದು ಹೇಳಿದ್ದಾರೆ. ಆದರೆ ವಸ್ತುತಃ ಕಾಂಪೌಂಡರೇ ಇರುತ್ತಾರೆ. ಅವರಿಗೆ ಈ ವಿಷಯದಲ್ಲಿ ಎಷ್ಟುಮಟ್ಟಿಗೆ ತಿಳಿವಳಿಕೆ ಇರುತ್ತದೆ ಎಂಬುದನ್ನು ನೋಡಬೇಕು. ಅವರು ದನ ಸಾಕುವವರಿಗಿಂತಲೂ ಬುದ್ಧಿವಂತರು ಎಂಬುದನ್ನು ಖಂಡಿತ ಒಪ್ಪುವಹಾಗಿಲ್ಲ. ಈಗ ತಾನೇ ಮಾತನಾಡಿದ ಸ್ನೇಹಿತರುಗಳು ನಹ ನನ್ನ ಅಭಿಪ್ರಾಯವನ್ನು ಪುಷ್ಟೀಕರಿಸಿದ್ದಾರೆ. ಏದೂ ಅಲ್ಲದೆ ಇಂಥಾ ರಾಸುಗಳು ಇಂಥಾ ಕಡೆ ಇರಬೇಕು ಮತ್ತು ಇಂಥಾ ವಯಸ್ಸಿನ ರಾಸುಗಳನ್ನೇ ಕಸಿ ಮಾಡಬೇಕು ಎಂದು ಹೇಳುವ ಸಾಮರ್ಥ್ಯ ಅವರಿಗೆ ಇದೆ ಎಂದು ಹೇಳಿದರೆ ಅಭಾಸವಾಗುತ್ತದೆ. ವಯಸ್ಸಾದ ಮಾತ್ರಕ್ಕೇ ಹೋರಿಗಳು ಹಸುಗಳ ಮೇಲೆ ಹಾರುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ವಯಸ್ಸು ಆಗುತ್ತಾ, ಆಗುತ್ತಾ, ಕೆಲವು ಹೋರಿಗಳು ಹೆಚ್ಚಾಗಿ ಹಸುಗಳ ಮೇಲೆ ಹಾರುತ್ತವೆ. ಉದಾಹರಣೆಗೆ ನಮ್ಮ ಅಜ್ಜಂಪುರದ ಫಾರಂನಿಂದ ಎಷ್ಟೋ ಹೋರಿಗಳನ್ನು ನರಬರಾಯಿ ಮಾಡಿದ್ದಾರೆ. ಹೀಗಿರುವಾಗ ಸರ್ಕಾರದವರು ಈ ರೀತಿ ಒಂದು ಕಾನೂನು ಮಾಡಿದರೆ ರೈತರಿಗೆ ತೊಂದರೆಯೇ ಹೊರತು ಉಪಕಾರವೇನೂ ಇಲ್ಲ. ಎಷ್ಟೇ ಒಳ್ಳೆಯ ಉದ್ದೇಶವಿದ್ದರೂ ಕೂಡ, ಸನ್ನಿವೇಶ, ವಾತಾವರಣಕ್ಕನುಸಾರವಾಗಿ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಅನುಕೂಲಕ್ಕಿಂತ ಪ್ರತಿಕೂಲವೇ ಹೆಚ್ಚಾಗುತ್ತದೆ. ಇಂಥಾ ಅನೇಕ ಮಸೂದೆಗಳು ಅಂಗೀಕಾರವಾಗಿವೆ. ಅವೆಲ್ಲಕ್ಕಿಂತಲೂ ಇದು ಒಂದು ಅತ್ಯಂತ ಕಠಿಣವಾದದ್ದು ಎಂದು ಹೇಳಬೇಕಾಗಿದೆ. 19ನೇ ಸೆಕ್ಷನ್ ಪ್ರಕಾರ ಯಾರಿಗಾದರೂ ಅನಾನುಕೂಲವಾದರೆ ಸರ್ಕಾರದವರಿಗೆ ಅಪೀಲು ಮಾಡಬೇಕಾಗುತ್ತದೆ. ಒಂದು ಹೋರಿ ಅಥವಾ ಒಂದು ಗಿಡ್ಡ ಕಸಿ ಮಾಡುವ ವಿಚಾರದಲ್ಲಿ ಸರ್ಕಾರದವರಿಗೆ ಅಪೀಲು ಮಾಡುವುದು ಎಂದರೆ ಬಹಳ ಕಷ್ಟವಾಗಿ ಕಾಣುತ್ತದೆ. ಈಗ ನಮಗೆ ಬೇಕಾಗಿರುವುದು ತಳಿಗಳ ಅಭಿವೃದ್ಧಿಗೆ ಯಾವ ಸೌಕರ್ಯ ಮಾಡಬೇಕು, ದನ ಸಾಕುವವರಿಗೆ ಯಾವ ಅನಾನುಕೂಲ ಇದೆ ಎಂಬುದನ್ನು ವಿಚಾರ ಮಾಡಿ ಅದಕ್ಕೆ ತಕ್ಕ ಸೌಲಭ್ಯಗಳನ್ನು ಒದಗಿಸಿಕೊಡತಕ್ಕದ್ದು. ಈಗ ದನ ಸಂಪತ್ತು ಶಿಥಿಲವಾಗಿರುವುದಕ್ಕೆ ಕಾರಣ ಅವಕ್ಕೆ ಪುಷ್ಟಿಕರವಾದ ಆಹಾರ ಇಲ್ಲ. ಅವುಗಳಿಗೆ ಪುಷ್ಟಿಕರವಾದ ಮತ್ತು ಸಾಕಾದಷ್ಟು ಆಹಾರವನ್ನು ಒದಗಿಸುವ ಕಾರ್ಯಕ್ರಮ ಕೈಕೊಂಡರೆ ತಮ್ಮ ಉದ್ದೇಶ ನರಿಯಾಗಿ ನೆರವೇರುತ್ತದೆಂದು ನನ್ನ ಭಾವನೆ. ಮಲೆನಾಡಿನಲ್ಲಿ ಗಿಡ್ಡ ಹೋರಿಗಳು ಇರುತ್ತವೆ. ಮಲೆನಾಡಿನಲ್ಲಿ

(ಶ್ರೀ ಬಿ. ಹುಚ್ಚೇಗೌಡರು.)

ಬೇಕಾದಷ್ಟು ಹುಲ್ಲಿನ ಸೌಕರ್ಯ ಇದೆ, ಚೆನ್ನಾಗಿ ಬೆಳೆಯುತ್ತದೆ. ಬೇಸಿಗೆ ಕಾಲ ಬಂದರೆ ಅದೆಲ್ಲಾ ಒಣಗಿ ಹೋಗಿ ಕಡಿಯುವುದಕ್ಕೆ ನೀರೂ ಸಹ ಸಿಗುವುದಿಲ್ಲ. ಆಗ ಅವು ಕರಗಿ ಹೋಗುತ್ತವೆ. ಆನಸ್ನಿವೇಶ ಇರುವುದರಿಂದ ಗಿಡ್ಡ ದನಗಳಾಗುವುದಕ್ಕೆ ಅವಕಾಶ ವಿದೆ. ನಮ್ಮ ದೇಶದ ಅಮೃತಮಹಲ್ ಕಾವಲು ದನಗಳು ಜಗತ್‌ಪ್ರಸಿದ್ಧವಾದವು. ಆ ಜಾತಿಯ ದನಗಳು ಇವತ್ತು ನಶಿಸಿಹೋಗುತ್ತಾ ಇವೆ! ಸಾಮಿರಾರು ದನಗಳು ಕಡಿಮೆಯಾಗಿವೆ. ಆದ್ದರಿಂದ ಕಾಲಕ್ಕೆ ನರಿಯಾಗಿ ಯಾವ ತರಹ ಸೌಕರ್ಯ ಒದಗಿಸಿಕೊಟ್ಟು ಅವುಗಳನ್ನು ಅಭಿವೃದ್ಧಿ ಮಾಡಬೇಕು ಎಂಬುದೇ ಹೊರತು ಅವುಗಳನ್ನು ಕಸಿ ಮಾಡಿದ ಮಾತ್ರಕ್ಕೇ ತಳಿಗಳ ಅಭಿವೃದ್ಧಿಯಾಗುತ್ತದೆ ಎಂದು ಹೇಳುವುದರಲ್ಲಿ ಎಳ್ಳಷ್ಟೂ ನಿಜಾಂಶವಿಲ್ಲ. ಇನ್ನೊಂದು ವಿಷಯವೇ ನೆಂದರೆ ವೆಟರ್‌ನರಿ ಇಲಾಖೆಯವರಿಗೆ ಬಹಳ ಅಧಿಕಾರ ಕೊಟ್ಟಿದ್ದೀರಿ. ಸೆಕ್ಷನ್ 11 (a) ನಲ್ಲಿ ನಮೂದಿಸಿರುವಂತೆ ಬೀಜದ ಹೋರಿಗಳನ್ನು ಇನ್‌ಸ್ಪೆಕ್ಟರು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸಿಗೆ ಕರೆದುಕೊಂಡು ಬರಬೇಕೆಂದರೆ, ಅಲ್ಲಗೇ ಹೋಗಬೇಕು. ಇಲ್ಲವೇ ಇದ್ದರೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಈ ರೀತಿ ಆದರೆ ತಳಿ ಅಭಿವೃದ್ಧಿಯಾಗುವುದಕ್ಕೆ ಬದಲಾಗಿ ಹೀನ ಸ್ಥಿತಿಗೆ ಬರುತ್ತದೆ ಎಂದು ಹೇಳಿ ಈ ಮಸೂದೆಯನು ವಿರೋಧಿಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಸ್ವಾಮಿ, ದೇಶದಲ್ಲಿ ಪಶುಸಂಪತ್ತನ್ನು ಅಭಿವೃದ್ಧಿಗೊಳಿಸಬೇಕೆಂಬ ದೃಷ್ಟಿಯಿಂದ ಈ ಕಾನೂನನ್ನು ತರಲಾಗಿದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಗಿಡ್ಡ ಹೋರಿಗಳಿಂದ ತಳಿ ಕೆಟ್ಟುಹೋಗುತ್ತದೆ. ಅದನ್ನು ತಪ್ಪಿಸಬೇಕೆಂದು ಈ ಕಾನೂನನ್ನು ತರಲಾಗಿದೆಯೇ ಹೊರತು ಅಭಿವೃದ್ಧಿಯಾಗುತ್ತದೆ ಎಂದು ಅಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಇದೂ ಒಂದು ಸಾಧನ ಎಂದು ಹೇಳಬಹುದು. ತಳಿ ಅಭಿವೃದ್ಧಿ ಮಾಡುವುದಕ್ಕೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಭಾರತ ರಾಜ್ಯಾಂಗದಲ್ಲೂ ಸಹ ಹೇಳಿದ್ದಾರೆ. ಅಲ್ಲಿ ಏನು ಹೇಳಿದ್ದಾರೆ ಎಂದರೆ.—

"The State shall, in particular, take steps for preserving and improving the breeds, and prohibiting the slaughter of cows and calves and other milch and draught cattle."

ತಳಿಗಳನ್ನು ಅಭಿವೃದ್ಧಿ ಮಾಡತಕ್ಕಂಥ ವಿಷಯದಲ್ಲಿ ನಿರ್ದಿಷ್ಟವಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಡೈರೆಕ್ಟೀವ್ ಪಾಲಸಿ ಇದೆ. ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೋಸ್ಕರವೇ ಈಗ ಕಾನೂನನ್ನು ತರಲಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಡೈರೆಕ್ಟೀವ್ ಪಾಲಸಿಯಲ್ಲಿ ಕಾನೂನುಗಳನ್ನು ಮಾಡಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿಲ್ಲ. ಯಾವ ರೀತಿಯಲ್ಲಿ ಈ ತಳಿಗಳನ್ನು ಉತ್ತಮಪಡಿಸಲಿಕ್ಕೆ ಪ್ರಯತ್ನಪಟ್ಟರೆ ನಿಮ್ಮ ಗುರಿಯನ್ನು ಮುಟ್ಟಲಿಕ್ಕೆ ಸಾಧ್ಯವಾಗುತ್ತದೋ ಅಂಥ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಿ ಎಂದು ಹೇಳಿದ್ದಾರೆ.

ಇದಕ್ಕೆ ಅನೇಕ ಮಾರ್ಗಗಳಿವೆ. ಕಾನೂನು ಮಾಡಿ ತನ್ಮೂಲಕ ಅವುಗಳನ್ನು ಸಾಧಿಸುವುದು ಒಂದು ವಿಧಾನ. ಆದರೆ, ಸಾಮಾನ್ಯವಾಗಿ ಕಾನೂನುಗಳನ್ನು ಮಾಡುವುದರಲ್ಲಿ ಮುಖ್ಯವಾಗಿ ನಾವು ಒಂದಂಶವನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ಅನೇಕ ರಾಜಕೀಯ ವೇತ್ತರು ಹೇಳಿರುವಂತೆ 'Least governed State is the best governed State". ಎಲ್ಲಿ ಹೆಚ್ಚು ಹೆಚ್ಚು ಶಾಸನಗಳ ಮೇಲೆ ರಾಜ್ಯವಾಳುತ್ತಾರೋ ಅದು ಅಷ್ಟು ಉತ್ತಮವಾದ ಆಳ್ವಿಕೆಯಲ್ಲ. ಕೇವಲ ಕಡಿಮೆ ಶಾಸನಗಳಿಂದ ರಾಜ್ಯವಾಳುವುದೇ ಉತ್ತಮ ಆಳ್ವಿಕೆ. ಶಾಸನ ಕಡತಗಳ ರಾಜ್ಯಭಾರ ಉತ್ತಮ ರಾಜ್ಯಭಾರವೆಂದು ನಾನು ನಂಬುವುದಿಲ್ಲ. ಬಹುಶಃ ಮಾನ್ಯ ಸದಸ್ಯರೆಲ್ಲರೂ ಇದನ್ನೊಪ್ಪುತ್ತಾರೆಂದು ನಾನು ನಂಬಿದ್ದೇನೆ. ಆದ್ದರಿಂದ ಶಾಸನಗಳನ್ನು ಮಾಡುವ ವಿಧಾನವನ್ನು ಬಿಟ್ಟು ಇನ್ನಾವ ಮಾರ್ಗಗಳಿಂದಲಾದರೂ ತಳಿಗಳನ್ನು ಉತ್ತಮಪಡಿಸುವುದನ್ನು ಯೋಚನೆ ಮಾಡಿ ಅದರಂತೆ ಕಾರ್ಯಕ್ರಮ ತೆಗೆದುಕೊಂಡು, ಅದರಲ್ಲಿ ಕಂಡು ಬರತಕ್ಕ ನ್ಯೂನಾತಿರಿಕ್ತಗಳನ್ನು ಸರಿಪಡಿಸಿಕೊಂಡು ಹೋಗುವುದು ಎರಡನೆಯ ವಿಧಾನ. ಈ ಯಾವ ಮಾರ್ಗದಿಂದಲೂ ನಮ್ಮ ಉದ್ದೇಶ ಸಾಧನೆಯಾಗದಿದ್ದರೆ ಆಂಥ ಕಾಲದಲ್ಲಿ ಶಾಸನವನ್ನು ಕೈಕೊಳ್ಳುವುದು ಅತ್ಯಗತ್ಯವೆಂದು ಕಂಡುಬಂದರೆ ಆಗ್ಗೆ ಶಾಸನವನ್ನು ಮಾಡುವುದು ನ್ಯಾಯಮಾವ ನೀತಿಯೆಂದು ತಿಳಿದುಕೊಂಡಿದ್ದೇನೆ. ಆದಕಾರಣ ಇಂಥಾ ಒಂದು ಶಾಸನವನ್ನು ನಾವೀಗ ಮಾಡಬೇಕಾದರೆ ಅದಕ್ಕೆ ಬೇಕಾದ ಅಂಕಅಂಶಗಳ ಆಧಾರಗಳನ್ನು ಮುಂದಿಟ್ಟುಕೊಂಡು ಸೂಕ್ತಾಸೂಕ್ತತೆಯನ್ನು ಪರಿಗಣಿಸಿ ಮುಂದುವರಿಯಬೇಕು. ಇವೆಲ್ಲಕ್ಕಿಂತಲೂ ಮೇಲಾಗಿ ಪ್ರಜಾಪ್ರಭುತ್ವದಲ್ಲಿ ಶಾಸನಗಳನ್ನು ಮಾಡತಕ್ಕದ್ದು ಸರ್ಕಾರದವರ ಅನುಕೂಲಕ್ಕಲ್ಲ, ಪ್ರಜೆಗಳ ಅನುಕೂಲಕ್ಕಾಗಿ ಎಂಬುದನ್ನು ಅರಿತುಕೊಂಡು, ಆ ಶಾಸನ ಯಾರ ಮೇಲೆ ಹೆಚ್ಚಿಗೆ ಪರಿಣಾಮವನ್ನುಂಟು ಮಾಡುತ್ತದೆಯೋ ಅವರುಗಳ ಅಭಿಪ್ರಾಯವನ್ನೂ ನಾವು ನೋಡಬೇಕು.

ಜನಾಬ್ ಮಹಮದ್ ಇಮಾಂರವರು.—ಪ್ರತಿನಿಧಿಗಳಾಗಿ ನೀವೇ ಇದ್ದೀರಲ್ಲಾ ಇಲ್ಲ ಬಹುಮತದಲ್ಲಿ!!

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಹೌದು; ನಾವೆಲ್ಲರೂ ಪ್ರತಿನಿಧಿಗಳಾಗಿಯೇ ಬಂದಿದ್ದೇವೆ. ಅಂದ ಮಾತ್ರಕ್ಕೇ ನಮ್ಮ ಅಭಿಪ್ರಾಯವೇ ದೇಶದ ಎಲ್ಲಾ ಜನರ ಅಭಿಪ್ರಾಯವೆಂದು ಹೇಳುವುದಕ್ಕಾಗುವುದಿಲ್ಲ. ಯಾವ ಯಾವ ಕ್ಷೇತ್ರದಲ್ಲಿ ನಾವು ಪರಿಣತಿಯನ್ನು ಹೊಂದಿದ್ದೇವೋ ಅದರ ಮಟ್ಟಿಗೆ ನಾವು ಅಭಿಪ್ರಾಯ ಕೊಡಬಹುದು, ಅಷ್ಟೆ. ಆದ್ದರಿಂದ ಯಾರ ಮೇಲೆ ಅದರ ಪರಿಣಾಮ ಉಂಟಾಗುತ್ತದೋ ಅವರು ತಮ್ಮ ಅಭಿಪ್ರಾಯವನ್ನು ಹೇಳುವುದಕ್ಕೆ ಅಧಿಕಾರ ಅವರಿಗೆ ಎಂದೂ ಇದ್ದೇ ಇದೆ. ಆ ಹಕ್ಕನ್ನು ಯಾರೂ ದೂರೀಕರಿಸಲಾವುದಕ್ಕಾಗುವುದಿಲ್ಲ. ಇದು ಒಂದನೆಯ ಅಂಶ. ಎರಡನೆಯದಾಗಿ, ಈ ಶಾಸನದ ಬಗ್ಗೆ ನಮ್ಮ ಮುಂದಿರುವ ಅಂಕಅಂಶಗಳೇನು, ಅದರ ಪ್ರಕಾರ ಇಂಥಾ ಶಾಸನಕ್ಕೆ ಅವಶ್ಯಕತೆಯಿದೆಯೇ, ಹಾಗೆ ಮಾಡಿದರೆ ನಮ್ಮ ಗುರಿ ಮುಟ್ಟುತ್ತದೆಯೇ, ಇದರ ಮೇಲೆ ಪ್ರಜಾಭಿಪ್ರಾಯವೇನು—ಇವಿಷ್ಟೂ ನಮ್ಮ ಮುಂದಿದ್ದರೆ ನಮ್ಮ ಅಭಿಪ್ರಾಯ ಕೊಡುವುದಕ್ಕೆ ಸಾಧ್ಯ. ಈಗಾಗಲೇ ಇದರಮೇಲೆ ನಡೆದ ಚರ್ಚೆಯಲ್ಲಿ ಈ ಕಾನೂನು ಅದರಲ್ಲೂ ಈಗ ನಮ್ಮ ಮುಂದಿರತಕ್ಕ ಕಾನೂನು.....

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ತಮ್ಮ ಅಭಿಪ್ರಾಯದಲ್ಲಿ ನೀವು ದೇಶದ ಪ್ರಜೆಗಳ ಅಭಿಪ್ರಾಯವನ್ನು ಪ್ರತಿನಿಧಿಸುವುದಿಲ್ಲವೆಂದು ಹೇಳುತ್ತೀರಾ?

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಹಾಗಲ್ಲ. ಈಗ ನಾವು ಕಾನೂನು ಮಾಡುತ್ತಿರುವುದು ದೇಶದಲ್ಲರ

ತಕ್ಕ 75-80 ಲಕ್ಷ ಪ್ರಜೆಗಳಿಗೆ ಅನ್ವಯಿಸತಕ್ಕದ್ದಾಗಿದೆ. ಅದರಲ್ಲೂ ಅವರ ದಿನಚರಿ ವ್ಯವಹಾರಗಳಿಗೆ ಸಂಬಂಧಪಟ್ಟದ್ದು. ಆದ್ದರಿಂದ ಮುಖ್ಯಾಲು ಪಾಲಿಗೆ ಮೇಲ್ಪಟ್ಟಷ್ಟು ಜನರು ವ್ಯವಸಾಯವನ್ನು ಅವಲಂಬಿಸಿರತಕ್ಕ ಈ ದೇಶದಲ್ಲಿ ಅವರ ವ್ಯವಹಾರಗಳಿಗೆ ಸಂಬಂಧಪಟ್ಟಂಥ ಈ ಕಾನೂನನ್ನು ತರುವಾಗ ಅವರ ಅಭಿಪ್ರಾಯವನ್ನೂ ತಿಳಿದುಕೊಂಡು ಮಾಡುವುದು ಉತ್ತಮವೆಂದು ನನ್ನ ಅಭಿಪ್ರಾಯ. ಸಾಮಾನ್ಯವಾಗಿ ಪ್ರಜಾಪ್ರಭುತ್ವ ಸರಿಯಾಗಿ ನಡೆಯುತ್ತಿರತಕ್ಕ ದೇಶಗಳಲ್ಲಿ ಇಂಥ ಒಂದು ಕಾನೂನಾಗುತ್ತದೆಂದು ಗೊತ್ತಾದ ತಕ್ಷಣ, ಅದಕ್ಕೆ ಸಂಬಂಧಪಡುವ ಜನರೆಲ್ಲಾ ಅಲ್ಲಲ್ಲೇ ಸಭೆ ಸೇರಿ ತಮ್ಮ ಅಭಿಪ್ರಾಯವನ್ನು ಶಾಸನ ಸಭೆಗಳಿಗೆ ತಿಳಿಸುವ ಪದ್ಧತಿಯಿದೆ. ಆದರೆ ನಮ್ಮ ದೇಶದಲ್ಲಿ ಇನ ಆ ಮಟ್ಟಕ್ಕಿನ್ನೂ ಬಂದಿಲ್ಲ. ಬಹುತೇಕ ಜನರು ಅವಿದ್ಯಾವಂತರೆಂಬುದನ್ನು ನಾವು ಮನಗಾಣಬೇಕು. ಆದ್ದರಿಂದ ಸಾಧ್ಯವಾದಮಟ್ಟಿಗೂ ಅವರುಗಳೇ ಇಂಥಾದ್ದನ್ನು ಮಾಡುವುದಕ್ಕೆ ಬಿಟ್ಟುಬಡಬೇಕು. ಇವನ್ನೆಲ್ಲಾ ದೃಷ್ಟಿಯಲ್ಲಟ್ಟುಕೊಂಡು ಇದನ್ನು ಮಾಡದೆ ಹೋದರೆ ಜನರಿಗೆ ಅಹಿತವಾಗುತ್ತದೆಂದು ಸರ್ಕಾರದವರು ತಿಳಿಯಬೇಕು. ಆದ್ದರಿಂದ ಈ ಕಾನೂನನ್ನು ಏಮಿರ್ಶೆಮಾಡಬೇಕಾದರೆ ಅದಕ್ಕೆ ಬೇಕಾದ ಎಲ್ಲಾ ಅಂಕಿಅಂಶಗಳೂ ಇವೆಯೇ ಎಂಬುದನ್ನು ನೋಡಬೇಕು. ಹಾಗೆ ಮಾಡದೆ ಇಂಥ ಒಂದು ಮಹತ್ವರವಾದ ಮತ್ತು ಹೆಚ್ಚಿನ ಪರಿಣಾಮವನ್ನುಂಟುಮಾಡುವ ಕಾನೂನನ್ನು ಮಾಡುವುದು ನಾವು ಅಷ್ಟು ಜವಾಬ್ದಾರಿಯಿಂದ್ದ ಮಾಡಿದ್ದೆಂದು ಹೇಳುವುದಕ್ಕಾಗುವುದಿಲ್ಲ.

ಈಗ ಮೊದಲನೆಯ ಪ್ರಶ್ನೆಯನ್ನು ತೆಗೆದು ಕೊಳ್ಳೋಣ. ನಾನು ತಿಳಿದಮಟ್ಟಿಗೆ ತಳಿಗಳ ಅಭಿವೃದ್ಧಿ ಕಾರ್ಯ ಅನೇಕ ಪಾರ್ಗಗಳಿಂದ ಕೇವಲ ಕಾರ್ಯಪಟ್ಟಿಯಲ್ಲಿ ಮಾತ್ರವಿದ್ದು ಅದರ ವಿಷಯದಲ್ಲಿ ತೀವ್ರವಾದ ಅಭಿರಾಷೆಯನ್ನು ವ್ಯಕ್ತಪಡಿಸಿ ಕೆಲಸ ನಡೆಸಿಲ್ಲವೆಂದು ಹೇಳಬರ್ಲೆ. ಇದಕ್ಕೆ ಒಂದು ನಮದಾಯಿಷಿ ಹೇಳುತ್ತೇನೆ. 1949ನೆಯ ಇಸವಿಯ ಬಡ್ಜೆಟ್‌ನಲ್ಲಿ ಈ ಬಾಬಿಗಾಗಿ 20,05,000 ರೂಪಾಯಿಗಳನ್ನು ಒದಗಿಸಿದ್ದಾರೆ. ಇದರಲ್ಲಿ ತಳಿಗಳನ್ನು ಉತ್ತಮಪಡಿಸುವುದಕ್ಕಾಗಿ 84,300 ರೂಪಾಯಿಗಳನ್ನು ಒದಗಿಸಿದೆ. ಈ ಹಣದ ಪೈಕಿ ಕೇವಲ ಅಡಳಿತ ಸಿಬ್ಬಂದಿಗೇ 59,300 ರೂಪಾಯಿ ಖರ್ಚಾಗಿದೆ. ಉಳಿದ 25,000 ರೂಪಾಯಿಗಳು ಮಾತ್ರ ವಾಸ್ತವವಾಗಿ ತಳಿಗಳ ಅಭಿವೃದ್ಧಿಗಾಗಿ ಖರ್ಚಾಗಿರುವುದು. ಈ ಅಂಕಿಗಳನ್ನು ನೋಡಿದರೆ ಸರ್ಕಾರದವರು ನ್ಯಾಯವಾಗಿ ಎಷ್ಟು ಉತ್ಪೇಜನ ಕೊಡಬೇಕಾಗಿತ್ತೋ ಅಷ್ಟು ಕೊಟ್ಟಿಲ್ಲವೆಂಬುದು ವ್ಯಕ್ತಪಡುತ್ತದೆ.

ಆಮೇಲೆ, ಈ ಶಾಸನವನ್ನು ಮಾಡುವಾಗ ಹಾಲನ್ನುಳ್ಳ ಎಷ್ಟು ಹೋರಿಗಳು ಮತ್ತು ಹಸುಗಳಿವೆ, ಅಪ್ರಯೋಜಕವಾದ ಗಿದ್ದಡನಗಳೆಷ್ಟಿವೆ ಎಂಬುದನ್ನು ತಿಳಿದುಕೊಂಡು ಮಾಡಬೇಕು. ಈಗ ಆ ಅಂಶಗಳು ನಮ್ಮಲ್ಲಿಲ್ಲ. ನನ್ನ ಅನುಭವವನ್ನು ಹೇಳಬೇಕಾದರೆ, ಸಾಮಾನ್ಯವಾಗಿ ನಮ್ಮ ದೇಶದ ರೈತರು ನಾವು ತಿಳಿದುಕೊಂಡಿರುವಷ್ಟುಮಟ್ಟಿಗೆ ದಡ್ಡಿನವರಲ್ಲ. ಇವತ್ತಿಗೂ ಮೈಸೂರು ದೇಶದಲ್ಲಿ ಅತ್ಯುತ್ತಮ ತಳಿಗಳನ್ನು ನಮ್ಮ ರೈತರು ಬೆಳೆಸುತ್ತಿದ್ದಾರೆ ಅಂದರೆ ಅದೇನೂ ನಮ್ಮ ವ್ಯವಸಾಯದ ಇಲಾಖೆಯವರ ಬುದ್ಧಿಶಕ್ತಿಯ ಅಥವಾ ವೆ ಹನತ್ತಿನ ಪ್ರಭಾವದಿಂದಲ್ಲ. ವಾಸ್ತವಿಕವಾಗಿ ರೈತರು ನೂರಾರು ವರ್ಷಗಳಿಂದ ಬೆಳೆಸಿಕೊಂಡು ಬಂದಿರತಕ್ಕ ತಿಳಿವಳಿಕೆಯು ಮಹಿಮೆಯೇ ಹೊರತು ಇನ್ನೇನೂ ಅಲ್ಲ. ಆದ್ದರಿಂದ ಅವರ ಸ್ವಾಭಾವಿಕ ಗುಣಗಳನ್ನು ಸ್ವಾಭಾವಿಕ ರೀತಿಯಲ್ಲಿ ಉತ್ತಮಪಡಿಸುವುದಕ್ಕೆ ಯೋಚನೆ ಮಾಡಬೇಕೇ ಹೊರತು ಅವರ ಇದ್ದತಿಗೆ ಪ್ರತಿಕೂಲವಾಗುವ ರೀತಿಯಲ್ಲಿ ಹೋಗಕೂಡದು. ಈಗ ನೀವು ಹೇಳಿದಂತೆ ಶಾಸನ ಮಾಡಿದೆವೆನ್ನೋಣ. ಇದು ಮುಖ್ಯವಾಗಿ ಗೂಳಿ ಸಾಕುವವರಿಗೆ ನೇರವಾಗಿ ಅನ್ವಯಿಸುತ್ತದೆ. ಗೂಳಿಗಳನ್ನು ಸಾಮಾನ್ಯವಾಗಿ ಎಲ್ಲರೂ ಸಾಕುವುದಿಲ್ಲ. ಅದನ್ನೇ ಕಸಬು ಮಾಡಿಕೊಂಡಿರುವವರು ಮಾತ್ರ ಅದನ್ನು ಸಾಕುತ್ತಾರೆ. ಅವರಿಗೆ ಗೂಳಿ ಸಾಕುವುದೇ ಒಂದು ಹೆಮ್ಮೆಯಾಗಿರುತ್ತದೆ. ಅಂಥವರ ಮೇಲೆ ಈ ರೆಸ್ಟ್ರಿಕ್ಷನ್ ಪದ್ಧತಿ ಮಾಡಿ ಅವರು ನೀವು ಹೇಳಿದಂತೆ ಹೋರಿ ಇಟ್ಟುಕೊಳ್ಳಬೇಕು, ನೀವು ಹೇಳಿದಾಗ ತಂದು ತೋರಿಸಬೇಕು ಎಂಬ ಇವುಗಳನ್ನೆಲ್ಲಾ ಹೇರಿದರೆ, ಇವೆಲ್ಲಾ ತಂಟೆ ಏಕೆಂದು ಹೇಳಿ ಆಮೇಲೆ ಗೂಳಿ ಸಾಕುವುದನ್ನೇ ಕೈಬಿಡಬಹುದು. ಗೂಳಿ ಸಾಕುವ ಮನೋಭಾವ, ಸ್ಫೂರ್ತಿ ಆಸಕ್ತಿಯೇ ಅವರಿಗೆ ಹೋಗಿ ದೇಶದಲ್ಲಿ ಗೂಳಿ ಸಾಕುವಿಕೆಯೇ ಕಡಿಮೆಯಾಗಬಹುದು. ಆಮೇಲೆ ಗಿದ್ದ ಹೋರಿಗಳನ್ನೆಲ್ಲಾ ಇಡಮಾಡಿನಬೇಕೆಂದು ಆಜ್ಞೆಮಾಡಿದರೆ, ನಿಮ್ಮ ಇಲಾಖಾಧಿಕಾರಿಗಳು ಬಂದು ಯಾವ್ಯಾವುದು ಲಾಯಕ್ಕಾಗಿಲ್ಲವೆಂದು ಹೇಳುತ್ತಾರೋ ಅವುಗಳನ್ನೆಲ್ಲಾ ಇಡವಾಡಿನಬೇಕಾಗುತ್ತದೆ. ಹೀಗೆ ಅವುಗಳನ್ನೆಲ್ಲಾ ಇಡವಾಡಿದ ಮೇಲೆ ಉಳಿಯುವ ಹೋರಿಗಳು ನಮಗೆ ಸಾಕಾಗುತ್ತವೆಯೇ ಎಂಬುದನ್ನು ನೋಡಬೇಕು.

ಈಗ ಎಷ್ಟೆಷ್ಟು ಡೆದುರ ಮೈಲಿಗೆ ಒಂದೊಂದು ಬೀಜದ ಹೋರಿಯನ್ನು ಒದಗಿಸಲಾಗಿದೆ? ಬೆದೆಗೆ ಬಂದ ಹಸುಗಳಿಗೆ ಹೋರಿಗಳನ್ನು ಕೊಡಬೇಕೆಂಬುದು ನ್ಯಾಯವಾದ ವಿಷಯವೇ ಸರಿ. ಆದರೆ ಕಾನೂನು ರಚಿಸುವಾಗ ಅದಕ್ಕೆ ತಕ್ಕ ಅನುಕೂಲತೆಗಳನ್ನೆಲ್ಲಾ ಕಲ್ಪಿಸಲಾಗಿದೆಯೇ ಎಂಬುದನ್ನೂ ಸ್ವಲ್ಪ ತಾವು ಗಮನಕ್ಕೆ ತೆಗೆದುಕೊಳ್ಳಬೇಕು. ತಮ್ಮ ಉತ್ಸಾಹದಲ್ಲಿ ತಳಿಗಳ ಉತ್ಪತ್ತಿ ತಗ್ಗಿಹೋಗುವಂತೆ ಆಗಬಾರದು. ಈಗಾಗಲೇ ನಾವು ಬತ್ತ, ರಾಗಿ ಇತ್ಯಾದಿ ಧಾನ್ಯಗಳ ಬಗ್ಗೆ ಉತ್ತಮ ತರಹದ ಬೀಜಗಳನ್ನು ಕಂಡುಹಿಡಿದಿದ್ದೇವೆ. ಮುಂದೆ ಇದರ ಬಗ್ಗೆ ಅಂಥ ಬೀಜದ ರಾಸುಗಳನ್ನು ಕಂಡುಹಿಡಿಯುವ ಪರಿಸ್ಥಿತಿ ಒದಗಬಹುದು. ಆದರೆ ನಾವು ಏನೊಂದಾ ಗುರಿ ಮುಟ್ಟಬೇಕೆಂದು ಹೋಗುತ್ತೇವೋ ಅದನ್ನು ಮುಟ್ಟದೆ ಮರಳಿ ಹಿಂದಕ್ಕೆ ಬಾರದಿರುವಂತೆ ಇರಬೇಕೆಂದೇ ನಾನು ಈ ವಿಚಾರಗಳನ್ನೆಲ್ಲಾ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಒಂದು ಜಾನುವಾರು ಎರಡು ಹಲ್ಲು ಹಾಕಿದ ಕೂಡಲೇ ಅದರ ಮಾಲೀಕನಾದವನು ಅದನ್ನು ತಕ್ಷಣ ಸಂಬಂಧಪಟ್ಟ ಅಧಿಕಾರಿ ಮುಂದೆ ನಿಲ್ಲಿಸಿ ಅದರ ಪರೀಕ್ಷೆ ವಗೈರೆ ಮಾಡಿಸಿ ತಾನು ರೆಸ್ಟ್ರಿಕ್ಷನು ಪಡೆದರೇ ಸರಿ, ಇಲ್ಲದಿದ್ದರೆ ಅತನು ಶಿಕ್ಷೆಗೆ ಗುರಿಯಾಗುತ್ತಾನೆಂದು ಹೇಳಲಾಗಿದೆ. ಆದರೆ ಆ ಮಾಲೀಕನ ಅಭಿಪ್ರಾಯದಲ್ಲಿ ಕೆಲವು ಹೋರಿಗಳಿಗೆ ಒಂದು ಎರಡು ಹಲ್ಲುಗಳು ಒಂದೆರಡು ತಿಂಗಳು ಆದಮೇಲೂ ಆದರಿಂದ ಅಷ್ಟೇನೂ ಬಾಧಕವಾಗುವುದಿಲ್ಲವೆಂದು ಅತನಿಗೆ ಅನುಭವದಲ್ಲಿ ಕಂಡು ಬಂದಿದ್ದರೂ ಹಾಗೆ ನಿಧಾನಮಾಡಲಿಕ್ಕೆ ಕಾನೂನಿನಲ್ಲಿ ಅವಕಾಶವೇ ಇಲ್ಲ. ಇದೂ ಅಲ್ಲದೆ ಅಂಥ ರೆಸ್ಟ್ರಿಕ್ಷನು ಪಡೆಯದೆ ಇದ್ದ ಗೂಳಿಯನ್ನು ಇತರ ಹಸುಗಳೊಂದಿಗೆ ಸಂಪರ್ಕಮಾಡಲು ಅವಕಾಶ ಕೊಟ್ಟಮಾತ್ರದಿಂದಲೇ ಅಂಥ ಸಂಪರ್ಕದಿಂದ ಹುಟ್ಟತಕ್ಕ ಕರುಗಳು ನಾಲಾಯಕ್ಕಾದವುಗಳೆಂದು ಹೇಳುವುದಕ್ಕೆ ಏನು ಆಧಾರವಿದೆ? ಒಬ್ಬರು ಲಾಯಕ್ಕಾಗಿರುತ್ತೆಂದರೆ, ಮತ್ತೊಬ್ಬರು

(ಶ್ರೀ ಎಚ್. ಎಂ. ಚನ್ನಬಸಪ್ಪನವರು.)

ನಾರಾಯಣಕ್ಕಾಗಿದೆ ಎನ್ನಬಹುದು. ಇದನ್ನು ತೀರ್ಮಾನಿಸತಕ್ಕವರು ಯಾರು? ಆದರೆ ನಾನೂ ರೈತನೆ, ದನಗಳನ್ನು ನಾನೂ ಸಾಕುತ್ತಿದ್ದೇನೆ. ನನಗೂ ಹತ್ತಾರು ವರ್ಷಗಳ ಅನುಭವ ಈ ವಿಚಾರದಲ್ಲಿ ಉಂಟು. ನನಗೂ ಒಂದೆರಡು ಉತ್ತಮವಾದ ಅಂಶಗಳು ಈ ಸಂಬಂಧವಾಗಿ ಗೊತ್ತಿರುತ್ತವೆ. ಆದರೆ ಇಂಥಾ ವಿಚಾರಗಳಲ್ಲಿ ಕೇವಲ ಯಾರೋ ಒಬ್ಬ ಪೆಟರಿನರಿ ಇನ್‌ಸ್ಪೆಕ್ಟರೋ ಅಥವಾ ಶೇಕ್‌ದಾರರೋ ಈ ಸಂಬಂಧವಾಗಿ ಪೂರ್ಣ ಅಧಿಕಾರ ಕೊಡಲಾಗಿದೆ. ಇದರಿಂದ ಹತ್ತಾರು ವರ್ಷಗಳ ಪೂರ್ಣಾನುಭವವುಳ್ಳವನು ಕೇವಲ 2—3 ವರ್ಷಗಳ ಅನುಭವದ ಅಧಿಕಾರಿಗಳ ಮುಂದೆ ಬೆರೆಯಿಲ್ಲದವನಾಗುವ ಸಂಭವ ಒದಗಿದೆ. ಇದೆಲ್ಲ ಕೇವಲ ತರ್ಕಕ್ಕೆ ದಾರಿಕೊಡುತ್ತದೆಯೇ ಶಿವಾಯಿ ಫಲ ಮಾತ್ರ ಖಂಡಿತ ದೊರೆಯುವುದಿಲ್ಲ. ಆದರೆ ಈ ಕಾನೂನಿನ ಮೂಲೋದ್ದೇಶವೇನೋ ಬಹಳ ಒಳ್ಳೆಯದೇ. ದೇಶದಲ್ಲಿ ಗೋಸಂಪತ್ತನ್ನು ಅಭಿವೃದ್ಧಿಪಡಿಸಬೇಕೆಂದು ವಾದಿಸತಕ್ಕದ್ದು ನರಿಯಿಲ್ಲವೆಂದು ನಾನು ಹೇಳುತ್ತಿಲ್ಲ. ತಳಿಗಳನ್ನು ಉತ್ತಮಪಡಿಸಬೇಕೆಂಬುದು ನ್ಯಾಯವಾದ ವಿಷಯವೂ ಹೌದು. ಇದಕ್ಕೆ ಸರಿಯಾದ ವಾತಾವರಣವೂ ಬೇಕು. ಆದರೆ ನಾನು ಮಾನ್ಯ ಸದಸ್ಯರ ಮುಂದೆ ಇಷ್ಟೆಲ್ಲಾ ವಿತಕ್ಕಾಗಿ ವಾದ ಮಾಡುತ್ತಿದ್ದೇನೆಂಬುದನ್ನು ಯಾರೂ ಅನ್ಯಥಾ ಭಾವಿಸಬಾರದು. ನನ್ನ ಮಿತಸ್ವಿನಲ್ಪರತಕ್ಕ ಅಭಿವ್ಯಾಯಗಳನ್ನು ಮಾನ್ಯ ಸದಸ್ಯರೆದುರಿನಲ್ಲಿ ಇಟ್ಟು, ಅವುಗಳನ್ನು ತಮಗೆ ಮನನಮಾಡಿಕೊಡಬೇಕೆಂಬುದೇ ನನ್ನ ಉದ್ದೇಶ.

ಎರಡು ಹಲ್ಲುಹಾಕಿದ ಕೂಡಲೇ ಆ ಜಾನುವಾರನ್ನು ಕಸೀ ಮಾಡಬೇಕು ಇಲ್ಲವೇ ರೈಸ್‌ಕಸ್ ಪಡೆಯಬೇಕು ಎಂದು ಈಗ ವಿಧಾಯಕಮಾಡಲಾಗಿದೆ. ಆದರೆ ಈಗ ಬೀಜ ಹೊಡೆಯುವ ವಿಚಾರ ತೆಗೆದುಕೊಳ್ಳೋಣ. ಅದಕ್ಕೆ ಪ್ರಾಧಾನ್ಯವಾಗಿ ಬೇಕಾದ್ದು ಬೀಜ ಹೊಡೆಯಬೇಕಾದ ಕಾಲ ಸಕಾಲವೇ ಅಥವಾ ಅಕಾಲವೇ ಎಂಬುದು. ಇಲಾಖೆಯವರು ಹೇಳುವುದು ಯಾವ ಕಾಲವಾದರೂ ಚಿಂತೆಯಿಲ್ಲ ಅದು ಎರಡು ಹಲ್ಲು ಹಾಕಿದ ಕೂಡಲೇ ಅದನ್ನು ಇಡಾ ಮಾಡಲು ಕತ್ತರಿ ತಂದು ಬಿಡುತ್ತಾರೆ. ಆದರೆ ಅನೇಕರಿಗೆ ಗೊತ್ತಿರುವ ವಿಷಯ—ಹೀಗೆ ಇಡಾ ಮಾಡಲು ಉತ್ತಮವಾದ ಕಾಲವೆಂದರೆ ಗೌರೀ ಹಬ್ಬ ಅಥವಾ ದೀಪಾವಳಿ ಋತುಗಳಲ್ಲಿ ಇದಕ್ಕೆ ಪ್ರಾಶಸ್ತ್ಯ ಹೆಚ್ಚು ಎಂಬತಕ್ಕದ್ದು. ಹಾಗೆ ಇಡಾ ಮಾಡತಕ್ಕ ಕಾಲದಲ್ಲಿ ಅದಕ್ಕೆ ಉತ್ತಮವಾದ ಮತ್ತು ಪೌಷ್ಟಿಕವಾದ ಆಹಾರ ಬೇಕು ಇದೂ ಬಹಳ ಮುಖ್ಯವಾದ ಅಂಶ. ಆದರೆಎರ್ನಾ ಋತುಗಳಲ್ಲಿಯೂ ಅಂಥ ಅನುಕೂಲತೆಗಳಿರುವುದಿಲ್ಲ. ಈ ಸಂಬಂಧವಾಗಿ ಶ್ರೀ ಎಚ್. ಬಿ ಗುಂಡಪ್ಪಗೌಡರು ಚೆನ್ನಾಗಿ ವಿವರಿಸಿದ್ದಾರೆ. ಹೀಗೆರ್ನಾ ಆಜ್ಞೆಗಳನ್ನು ಹೊರಡಿಸುತ್ತಾ ಹೋದರೆ ಎಲ್ಲರೂ ದನಗಳನ್ನು ಸಾಕಲಕ್ಕೆ ಸಾಧ್ಯವಾದೀತೆ! ನೋಡತಕ್ಕವರಿಗೇನೋ ಇದು ಬಹಳ ಚೆನ್ನಾಗಿದ್ದಂತೆಯೇ ಕಾಣುತ್ತದೆ. ಆದರೆ ಇದು ಕಾರ್ಯತಃ ಮಾತ್ರ ಆಗುವುದಿಲ್ಲ. ಅಂದರೆ ಗೋಸಂಪತ್ತಿನ ಆಸೆಯೇ ಆಗಲಿ, ಅಥವ ದಿವ್ಯವಾದ ವಾತಾವರಣವನ್ನು ಕಟ್ಟಿಕೊಂಡು ಅದರಲ್ಲಿ ಸೂರಾರು ದನಗಳನ್ನು ಸಾಕಲು ಜನಗಳಿಗೆ ಆಸೆ, ಅಪೇಕ್ಷೆಗಳಾಗಲೀ ಇರುವುದಿಲ್ಲವೆಂಬುದು ನನ್ನ ಅಭಿಪ್ರಾಯವಲ್ಲ. ಎಲ್ಲರಿಗೂ ಆಸೆ ಇದ್ದೇ ಇದೆ. ಇದಕ್ಕೆ ನಮ್ಮೆಲ್ಲರ ಸಹಕಾರವೂ ಇದೆ. ಆದರೆ ಇದರ ಸಂಬಂಧವಾಗಿ ಒಬ್ಬರಿಗೆ ತೊಂದರೆಯಾಗದಾರದೆಂಬುದೇ ನನ್ನ ಮುಖ್ಯೋದ್ದೇಶ. ಈ ವಿಷಯಗಳನ್ನೆರ್ನಾ ಕಾನೂನಿನಿಂದಲೇ ನರಿಪಡಿಸಬೇಕೆಂದು ತಮ್ಮ ಭಾವನೆಯಾಗಿದ್ದ ಭಾಗದಲ್ಲಿ ಅದರಿಂದ ಅನುಕೂಲಕ್ಕಿಂತ ಪ್ರತಿಕೂಲವೇ ಹೆಚ್ಚು. ಇಷ್ಟೇ ಅಲ್ಲದೆ ಜನರೂ ಚಿತ್ರವಿಚಿತ್ರ ಹಿಂಸೆಗೆ ಗುರಿಯಾಗುತ್ತಾರೆ. ಇದು ಖಂಡಿತ. ಆದುದರಿಂದ ಇದನ್ನು ಶಾಸನವಾಗಿ ಪರಿಗಣಿಸುವ ಮೊದಲೇ ಎಲ್ಲವನ್ನೂ ಪರಿಶೀಲನೆ ಮಾಡಬೇಕೆಂದು ನಾನು ಸೂಚಿಸುತ್ತಿದ್ದೇನೆ.

ಇದೇ ಸಂದರ್ಭದಲ್ಲಿ ನಾನು ಸೂಚಿಸಬೇಕೆಂದಿರುವ ಮತ್ತೊಂದು ಅಂಶವೇನೆಂದರೆ—ತಾವು ಕಾನೂನು ಮಾಡುವ ಪೂರ್ವ ಒಳ್ಳೆಯ ತಳಿಗಳನ್ನು 10 ಮೈಲಿಗೊಂದರಂತೆಯೋ ಅಥವಾ 5 ಮೈಲಿಗೊಂದರಂತೆಯೋ ಒದಗಿಸಿ, ನಂತರ ಇಂಥಾ ಕಾನೂನು ಮಾಡಿ, ಬೇಡವೆನ್ನುವುದಿಲ್ಲ. ಹಾಗೆ ಮಾಡಿದನಂತರ ಉತ್ತಮ ತಳಿಗಳನ್ನು ಕಾಪಾಡಿಕೊಂಡು ಬರಲು ಅದಕ್ಕೆರ್ನಾ ತಕ್ಕ ವ್ಯವಸ್ಥೆಗಳನ್ನೆ ಏರ್ಪಾಡುಮಾಡಿ. ಅನಂತರ ಬೇಕಾದರೆ ಇಂಥಾ ಒಂದು ಆಜ್ಞೆಯನ್ನು ಹೊರಡಿಸಿ, ಅನುಕೂಲವಾದೀತು. ಹಾಗೆ ಮಾಡದೆ ತಾವು ಏಕ್‌ದಂ ಇಂಥಾ ಕಾನೂನು ತಂದರೆ ತಮ್ಮ ಅಭಿರಾಷೆಯಂತೆ ಗೋಸಂಪತ್ತು ಸಂವೃದ್ಧಿ ಹೊಂದುವ ಬದಲು ಅದು ಕ್ಷೀಣಿಸಲೆಗೆ ಬರಲು ಕಾರಣವಾಗುತ್ತದೆ. ಇದರಿಂದ ಅಷ್ಟು ಪ್ರಯೋಜನವಾಗುವುದಿಲ್ಲ. ಅದರಲ್ಲೂ ಎರಡು ಹಲ್ಲು ಹಾಕಿದ ಕೂಡಲೇ ರೈಸ್‌ಕಸ್ ಪಡೆಯಲೇಬೇಕೆಂದು ಹೇಳಿರುವುದು ಖಂಡಿತ ಸಾಧ್ಯವಾಗದವಾತು. ಹಾಗೂ ಒಂದುವೇಳೆ ಎರಡು ಹಲ್ಲು ಹಾಕಿದಮೇಲೂ ಒಂದು ರಾಸು ರೈಸ್‌ಕಸ್ ಪಡೆಯಲು ಅನರ್ಹವಾಗಿದೆಯೆಂದು ಅಧಿಕಾರಿ ಹೇಳಲುಪಕ್ರಮಿಸಿದಾಗ, ಪಾರ್ಟ್ ಅದು ಅರ್ಹವಾಗಿರುತ್ತೆ, ರಾಮಕ್ಕಾಗಿದೆ ಎಂದು ತರ್ಕ ಹೂಡಿದಾಗ ಅದನ್ನು ತೀರ್ಮಾನಿಸತಕ್ಕವರು ಯಾರು!

ಈ ಸಂದರ್ಭದಲ್ಲಿ ಒಂದು ಅಂಶ ತಮ್ಮ ಗಮನಕ್ಕೆ ತರಬೇಕಾಗಿದೆ. ಇದೇ ರೀತಿಯ ಆಜ್ಞೆಯನ್ನು ಆಹಾರ ನಿಯಂತ್ರಣ ಆಜ್ಞೆಯ ಸಂಬಂಧದಲ್ಲಿ ತಂದಿದ್ದಾಗ, ಆಗಲೂ ನಾನು ಹೀಗೆ ವಾದಮಾಡಿರುತ್ತೇನೆ. ಆಗ ನಾನೇ ಹೇಳಿದ್ದೇನೆ—ಆ ರೀತಿಯ ಆಜ್ಞೆಗಳನ್ನು ತರುವುದರಿಂದ ಕೇವಲ ಕಾಳಸಂತೆಕೋರರಿಗೂ ರಾಭ ಹೊಡೆಯಬೇಕೆಂದು ದುರಾಸೆಯುಳ್ಳ ಜನರಿಗೂ ಅನುಕೂಲವಾಗುತ್ತೆ, ಶಿವಾಯಿ ಅವುಗಳಿಂದ ನಿರಪರಾಧಿಗಳಾದ ರೈತರಿಗೆ ಅನುಕೂಲಕ್ಕೆ ಪ್ರತಿಯಾಗಿ ವಿಪರೀತ ಕಿರುಕುಳ ಕೊಡಲು ಅವಕಾಶ ಕಲ್ಪಿಸಿಕೊಟ್ಟಂತಾಗುತ್ತದೆ ಎಂದು. ಮೊನ್ನೆ ತಾನೆ ಮಾನ್ಯಮಂತ್ರಿಗಳು ಮೈಸೂರಿಗೆ ಬಂದಿದ್ದಾಗ್ಯೆ ಅವರ ನಿದರ್ಶನಕ್ಕೆ ತಂದಿದ್ದೇನೆ—ಎಷ್ಟೋ ಹಳ್ಳಿಗಳಲ್ಲಿ ರೈತನು ತಾನು ಬೆಳೆದಿದ್ದ ದವನದ ಮೆದೆಗಳನ್ನು ರೈಸ್‌ಕಸ್ ಪಡೆಯದೆ ಯಾರೂ ಬಡಿಯಲೇ ಕೂಡದೆಂದು ಆಜ್ಞೆ ಹೊರಡಿಸಿ ಮೆದೆಗಳಿರುವ ಕತೆಗಳಲ್ಲೆರ್ನಾ ಆ ರೀತಿ ಬೋರ್ಡುಗಳನ್ನು ತಗುಲಿಹಾಕಿದ್ದಾರೆ. ಆದರೆ ಆಹಾರ ನಿಯಂತ್ರಣ ಆಜ್ಞೆಯಲ್ಲಿ ಹೀಗೆರ್ನಾ ಮಾಡಲು ಅವಕಾಶವೇ ಇರುವುದಿಲ್ಲ. ಅದರಲ್ಲಿ ಏನು ಹೇಳಿದೆಯೆಂದರೆ—ಯಾರು ಸರ್ಕಾರಕ್ಕೆ ಕೊಡಬೇಕಾಗಿದ್ದ ದವನವನ್ನು ಕೊಡದೆ ಇರುತ್ತಾನೋ ಅಂಥವನ ವಿಚಾರದಲ್ಲಿ ಏನೇನು ಕಾರ್ಯಕ್ರಮ ಕೈಗೊಳ್ಳಬೇಕೆಂಬುದನ್ನು ಅದರಲ್ಲಿ ತಿಳಿಸಿದೆ. ಆದರೂ ಈ ರೀತಿ ಕಿರುಕುಳ ಈಗಲೂ ಲಕ್ಷಾಂತರ ಜನರಿಗೆ ಉಂಟಾಗಿದೆ. ಷೇಕ್‌ದಾರನ ಆಟವೇ ಆಟ. ಹೀಗಾಗಿ ರೈತನು ತಾನು ನಿರ್ದೋಷಿಯಾಗಿದ್ದರೂ ಏನಾ ಕಾರಣಕ್ಕಾಗಿ ಆ ರೈಸ್‌ಕಸ್ ತರಲು ಷೇಕ್‌ದಾರ, ಶ್ಯಾನುಭೋಗ, ಗುಮಾಸ್ತ ಇತ್ಯಾದಿಯವರಿಗೆರ್ನಾ ವಿಶೇಷ

ವಾಗಿ ಲಂಚ ಕೊಡಬೇಕಾದ ಪರಿಸ್ಥಿತಿಗೊಳಗಾಗಿದ್ದಾನೆ. ಆದರೆ ಆ ಕಾನೂನಿನ ಉದ್ದೇಶವೇನೋ ಒಳ್ಳೆಯದೆ. ಆದರೆ ಕಾರ್ಯತಃ ಆಗುತ್ತಿರುವುದು ಜನರಿಗೆ ಉಪಕಾರವಲ್ಲ—ಅಪಕಾರ. ಈ ಒಂದು ಅಂಶವನ್ನು ಕೇವಲ ಒಂದು ಉದಾಹರಣೆಗೋಸ್ಕರ ಹೇಳಬೇಕಾಗಿ ಬಂದಿತು.

ಈ ಕಾನೂನಿನ ಬಗ್ಗೆ ಅದೇ ಸಂಶಯ, ಸಂದೇಹಗಳು ಇಲ್ಲಿಯೂ ತಲೆದೋರುತ್ತಿವೆ. ಇದರಲ್ಲಿ ಭಿನ್ನಾಭಿಪ್ರಾಯಗಳಿಗೆ ವಿಶೇಷವಾಗಿ ಅವಕಾಶವಿದೆ. ನೂರಾರು ವರ್ಷದ ಅನುಭವದ ವಿಚಾರಗಳು ಇಂದು ಕೇವಲ ನನ್ನೆ ಮೊನ್ನೆ ಓದಿಕೊಂಡು ಪುಸ್ತಕದ ಅನುಭವದ ಅಧಿಕಾರಿಯಮುಂದೆ ಬೆರೆಯಿಲ್ಲದೆ ಹೋಗತಕ್ಕ ಪರಿಸ್ಥಿತಿ ಒದಗಿದೆ. ಇದು ತೀರಾ ಅನ್ಯಾಯ.

ಇನ್ನು ಫೀನರ್ ಕ್ಯಾಜುಗಳ ಕಡೆ ನೋಡಿದರೆ ಪೂರಾ ಹೆದರಿಕೆಯಾಗುತ್ತದೆ. ಎಷ್ಟೋ ಸಂದರ್ಭಗಳಲ್ಲಿ ದೊಡ್ಡದಾಗಿರುವ ಗೂಳಿಗಳು ಸಣ್ಣಪುಟ್ಟ ಹಸುಗಳ ಮೇಲೆ ಹಾರಿಸಲು ತುಂಬಾ ಕಷ್ಟ—ಏಕೆ ಆಗುವುದೇ ಇಲ್ಲ. ಮಲೆನಾಡು ಪ್ರದೇಶದಲ್ಲಿರತಕ್ಕ ರಾಸುಗಳೆಲ್ಲಾ ಬಹಳ ಪೀಚಾದವು. ಆಗ ಈ ಕಾನೂನು ಜಾರಿಯಲ್ಲಿದ್ದು, ಹಾಗೆ ಅಸಾಧ್ಯವೆಂದು ತೋರಿದಾಗ ಮಾಲೀಕನ ಗತಿಯೇನು? ಆದರೆ ಈಗ ಈ ಮಸೂದೆಯನ್ನು ಸೆರೆಕ್ಟ್ ಸಮಿತಿಗೆ ಹಾಕಬೇಕೆಂಬ ವಾದ ಎದ್ದಿದೆ. ನನ್ನ ಅಭಿಪ್ರಾಯ ಇದನ್ನು ಸೆರೆಕ್ಟ್ ಸಮಿತಿಗೆ ಹಾಕಬೇಕೆಂದೂ ಅಲ್ಲ, ಹಾಕಬಾರದೆಂದೂ ಅಲ್ಲ. ತಮಗೆ ಇಷ್ಟಬಂದಂತೆಮಾಡಿ ಆದರೆ ನಾನು ಹೇಳತಕ್ಕದ್ದಿಷ್ಟೆ—ಇದನ್ನು ತಾವು ಸೆರೆಕ್ಟ್ ಸಮಿತಿಗೆ ಹಾಕುತ್ತೇವೆಂದು ಹೇಳಿದಾಗ್ಯೂ ನನಗೆ ಆದರಿಂದ ಸಮಾಧಾನವಿಲ್ಲ; ಆದರೆ ಈ ಬಗ್ಗೆ ಪ್ರಜಾಭಿಪ್ರಾಯ ವೇನಿದೆಯೆಂಬುದನ್ನು ತಾವು ತಿಳಿದು ಮುಂದುವರಿಯುವುದಾದರೆ ಪರವಾಗಿಲ್ಲ.

ಹಾಗೆ ಮಾಡುವಾಗ ಈ ಅಂಶಗಳನ್ನೆಲ್ಲಾ ದೃಷ್ಟಿಯಲ್ಲಿಡಬೇಕು. ಈಗ ಸೆರೆಕ್ಟ್ ಸಮಿತಿಗೆ ಕಳುಹಿಸಿ ಕಾನೂನನ್ನು ಈ ರೀತಿಯಾಗಿ ಮಾರ್ಪಾಡು ಮಾಡಬೇಕೆಂದು ಹೇಳಿದರೆ ಸಾಲದು. ಆ ಸಮಿತಿಯವರು ಈಗಿನ ಪರಿಸ್ಥಿತಿಯಲ್ಲಿ ಕಾನೂನು ಅವಶ್ಯಕವೇ ಎಂಬುದನ್ನು ಪರಿಶೀಲಿಸಬೇಕು. ಇದೂ ಅಲ್ಲದೆ ಜನರ ಅಭಿಪ್ರಾಯ ವೇನಿದೆ ಯೆಂಬುದನ್ನು ತಿಳಿದು ಮುಂದುವರಿಯುವುದು ಒಳ್ಳೆಯದು.

ಶ್ರೀ ಎಲ್. ಸಿದ್ದಪ್ಪನವರು.—ಅದಕ್ಕೆ ತಾವು ತಿದ್ದುಪಡಿಯನ್ನು ಸೂಚಿಸಬಹುದಾಗಿತ್ತು.

Janab J. MOHAMED IMAM.—We would have supported him.

Sri H. M. CHANNABASAPPA.—This is not a thing which we can pass off. This is a question which is going to affect millions of people and the working of the measure will result in harassment to the people.

ಸೆರೆಕ್ಟ್ ಸಮಿತಿಯವರು ರೈತರಿಗೆ ಈ ವಿಚಾರವು ತಿಳಿಯುವಂತೆ ಗ್ರಾಮಾಂತರಗಳಲ್ಲಿ ಟಾಂ ಟಾಂ ಮಾಡಿಸಬೇಕು, ಅಲ್ಲ ಅನೇಕ ತಿಳಿವಳಿಕಸ್ತರೂ ಇದ್ದಾರೆ. ಅವರು ತಮ್ಮ ಅಭಿಪ್ರಾಯಗಳನ್ನು ಕೊಡುತ್ತಾರೆ, ಅವರಿಗೆ ಈ ವಿಷಯ ಗೊತ್ತಿಲ್ಲ. ಶಾಸನದಮೇಲೆ ಗೊತ್ತಾಗುವುದಕ್ಕಿಂತ ಮುಂಚೆಯೇ ತಿಳಿಯಪಡಿಸುವುದು ಉತ್ತಮ, ಹಳ್ಳಿಯಲ್ಲಿ ರೈತರ ಪ್ರತಿನಿಧಿಗಳು, ಸಂಘದವರು ಮತ್ತು ಸಂಸ್ಥೆಗಳು—ಇವರಿಂದ ಅಭಿಪ್ರಾಯಗಳನ್ನು ಏನಿದೆಯೆಂದು ತಿಳಿದು ಅಮೇಲೆ ಕಾಳಿತುಕೊಂಡು ಯೋಚನೆಮಾಡಿ ಶಾಸನವು ಅತ್ಯಾವಶ್ಯಕವೆಂದು ಕಂಡರೆ ಆಗ ಮಾಡುವುದಕ್ಕೆ ಅಡ್ಡಿಯಿಲ್ಲ. ಆದರೆ ಸೆರೆಕ್ಟ್ ಸಮಿತಿಯವರಿಗೆ ಅಷ್ಟು ಅಧಿಕಾರವಿದೆಯೇ ಎಂಬ ಅನುಮಾನವಿದೆ.

Mr. SPEAKER.—The House will now rise for lunch and reassemble at 4-5 P. M.

The Assembly adjourned for Lunch at Thirty Five Minutes past Three of the Clock and reassembled at Five Minutes past Four of the Clock. Mr. Speaker (The Hon'ble Sri V. Venkatappa) in the Chair.

ಅಧ್ಯಕ್ಷರು.—ಇದರ ಮೇಲೆ ಇನ್ನೂ ಚರ್ಚೆ ಅವಶ್ಯಕವೆ?

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ನಾನು ಕೊಂಚ ಮಾತನಾಡಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ. ಸಾಮಾನ್ಯವಾಗಿ ಹಳ್ಳಿಗಾಡಿನಲ್ಲಿ ದನಗಳನ್ನ ಸಾಕುವವರಲ್ಲಿ ಎರಡು ಪಂಗಡಗಳಿರುತ್ತವೆ. ಹೆಚ್ಚು ದನಗಳನ್ನು ಸಾಕುವ ಅನುಕೂಲಸ್ಥರು ಮತ್ತು ಎರಡು ಮೂರು ದನಗಳನ್ನು ಮಾತ್ರ ಸಾಕಬಲ್ಲ ಬಡವರು ಇಬ್ಬರೂ ಇರುತ್ತಾರೆ. ಹೆಚ್ಚು ದನ ಸಾಕುವವರು ಸಾಮಾನ್ಯವಾಗಿ ಅನುಕೂಲಸ್ಥರೇ ಆಗಿರುತ್ತಾರೆ. ಅಂಥವರು ಅವರ ದನಗಳ ಅಭಿವೃದ್ಧಿಗಾಗಿ ತಕ್ಕ ಕಾರ್ಯಕ್ರಮ ತೆಗೆದುಕೊಂಡೇ ಇರುತ್ತಾರೆ. ಅವರು ಸಣ್ಣ ರಾಸುಗಳ ಸಂಪರ್ಕ ಮಾಡಿಸುವುದಿಲ್ಲ. ಅವರು ಸ್ವಂತ ಖರ್ಚಿನಿಂದ ಉತ್ತಮವಾದ ರಾಸುಗಳನ್ನು ಬೆಳೆಸುತ್ತಾರೆ. ಅವರು ಆರ್ಥಿಕ ಮಟ್ಟದಲ್ಲಿ ಮೇಲುದರ್ಜೆಯಲ್ಲಿರುವುದರಿಂದ ಎಂದಿಗೂ ಸಣ್ಣಪುಟ್ಟ ಗಿಡ್ಡಗಳನ್ನು ಹಾರಿಸುವುದಿಲ್ಲ. ಒಳ್ಳೆಯ ಬೀಜದ ಹೋರಿಗಳನ್ನು ಸಾಕಬೇಕೆಂಬ ಆಸೆ ಅವರಿಗೆ ಇದ್ದೇ ಇರುತ್ತದೆ. ಅದೇ ಬಡವರು ಗಿಡ್ಡರಾಸುಗಳನ್ನೇ ಉಪಯೋಗಿಸುತ್ತಾರೆ. ಆದ್ದರಿಂದ ಇದನ್ನು ಯೋಚನೆ ಮಾಡಿ ಗಿಡ್ಡಗಳನ್ನಿಡುವುದಕ್ಕೆ ಯೋಚನೆ ಮಾಡಿದಲ್ಲಿ ಅದರಲ್ಲಿ ಸ್ವಲ್ಪಮಟ್ಟಿಗೆ ಸಾಧುತ್ವವಿದೆಯೆಂದು ಒಪ್ಪಬಹುದು.

ಎರಡನೆಯದಾಗಿ, ಹಸುಗಳು ಬೆದೆಗೆ ಬರುವ ವಿಚಾರ. ಅದು ಒಂದು ಕಾಲವನ್ನು ಅನುಸರಿಸುತ್ತದೆ. ಎಲ್ಲಾ ಕಾಲದಲ್ಲೂ ಇರುವುದಿಲ್ಲ; ಋತುಧರ್ಮಕ್ಕನುಸಾರವಾಗಿರುತ್ತದೆ. ಮೊದಲೇ ಹೇಳಿದ ಹಾಗೆ ಕೆಲವರು ಲೈಸೆನ್ಸ್ ತೆಗೆದುಕೊಳ್ಳುವುದಿಲ್ಲವೆಂದು ಹೇಳಬಹುದು. ಆಗಲೂ ಸರ್ಕಾರದವರು ಶಾಸನ ಮಾಡಬೇಕಾಗುತ್ತದೆ. ಈಗ ಬೀಜದ ಹೋರಿಗಳನ್ನು ಸಾಕುವುದನ್ನು ನಿಲ್ಲಿಸುವುದಕ್ಕೆ ಸರ್ಕಾರದವರು ಕಾನೂನಿನಲ್ಲಿ ಅವಕಾಶಮಾಡಿಲ್ಲ. ಅದೂ ಮಾಡಿದರೆ ಅನುಕೂಲವಾಗಿರುತ್ತದೆ. ಇವನ್ನೆಲ್ಲಾ ಹೇಳುತ್ತಿರುವುದು ಸೆರೆಕ್ಟ್ ಸಮಿತಿಯವರು ಯೋಚನೆ ಮಾಡಬೇಕೆಂದು. ಒಂದು ವೇಳೆ ಎಲ್ಲಾದರೂ ಜನರಲ್ಲಾ ಲೈಸೆನ್ಸ್ ತೆಗೆದುಕೊಳ್ಳುವುದಿಲ್ಲವೆಂದು, ನಿರ್ಣಯಮಾಡಿಸುವುಎಂದ್ದರೆ ಸರ್ಕಾರದವರು ತಮ್ಮ ಸಿಬ್ಬಂದಿ ಇಟ್ಟು ಸರಿಯಾದ ಹೋರಿಗಳನ್ನಿಡಲು ಏರ್ಪಾಡು ಮಾಡಬೇ

(ಶ್ರೀ ಎಚ್. ಎಂ. ಚನ್ನಬಸಪ್ಪನವರು.)

ಕಾಗುತ್ತದೆ. ಹಾಗೆ ಮಾಡದೇ ಇದ್ದರೆ ತಳಿ ಉತ್ತಮ ಪಡಿಸುವುದಕ್ಕೆ ಬದಲಾಗಿ ಅನರ್ಥವಾಗುತ್ತದೆ.

ಎಲ್ಲಾ ಹೋರಿಗಳನ್ನು ಉಪಯೋಗಿಸಬಾರದು, ಒಳ್ಳೆಯ ಜಾತಿಯನ್ನೇ ಉಪಯೋಗಿಸಬೇಕೆಂದು ನಿರ್ಬಂಧ ಮಾಡಿದರೆ ಕೆಲವು ಕಡೆ ಬಹಳ ಕಷ್ಟವಾಗುತ್ತದೆ ಮಲೆನಾಡು ಪ್ರದೇಶದಲ್ಲಿ ಎಂಥ ಒಳ್ಳೆಯ ಹೋರಿ ಬಂದರೂ ಸೊಳ್ಳೆಯ ಹೊಡೆತಕ್ಕೆ ಕೆಟ್ಟು ಹೋಗುತ್ತದೆ. ಆದ್ದರಿಂದ ಅಲ್ಲೇ ಬೆಳೆದು ಅಲ್ಲೇ ಇರುವ ಗೂಳಿಗಳನ್ನೇ ಅಲ್ಲಿಯ ಸ್ಥಳವಂದಿಗರು ಇಟ್ಟುಕೊಳ್ಳಬೇಕೇ ಹೊರತು ಹೀಗೆ ಒತ್ತಾಯ ಮಾಡುವುದನ್ನು ಇಟ್ಟುಕೊಳ್ಳಬಾರದು. ಅದರಿಂದ ಕಷ್ಟವಾಗುತ್ತದೆ. ಸಾಮಾನ್ಯ ಜನರಿಗೆ ಒಳ್ಳೆಯ ಗೂಳಿಗಳನ್ನಿಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಬಹಳ ಹಣ ಬೇಕು. ಸುಮಾರು 1,500 ರೂಪಾಯಿ ಬೇಕಾಗುತ್ತದೆ. ಆದ್ದರಿಂದ ಅನೇಕರು ಇದನ್ನು ಒಪ್ಪುವುದಿಲ್ಲ.

ಕೊನೆಯದಾಗಿ ನನ್ನ ನಲಹೆ ಇಷ್ಟೆ: ಸೆಲೆಕ್ಟ್ ಕಮಿಟಿಯವರು ಇದನ್ನು ಪರಿಶೀಲಿಸಿ ಇದರಲ್ಲಿರುವ ಎಲ್ಲ ಕ್ಲಾಜುಗಳನ್ನು ತೆಗೆದುಹಾಕಿ ಪೂರ್ತಿ ದನಗಳನ್ನು ಕ್ಯಾಸ್ಟ್ರೇಟ್ ಮಾಡುವುದಕ್ಕೆ ಏರ್ಪಾಡುಮಾಡುವ ಒಂದು ಕ್ಲಾಜನ್ನು ಇಟ್ಟರೇ ಸಾಕು. ಎರಡನೆಯದಾಗಿ, ಎಲ್ಲೆಲ್ಲಿ ಸರ್ಕಾರದವರು ತಮ್ಮ ಸ್ವಂತ ಸಿಬ್ಬಂದಿಯನ್ನಿಟ್ಟು ಸರ್ವಿಸ್ ಹೋರಿಗಳನ್ನಿಡುತ್ತಾರೆಯೋ ಆ ಪ್ರದೇಶಗಳಲ್ಲಿ ಮಾತ್ರ ಕಾನೂನು ಅನ್ವಯಿಸುವಂತೆ ಮಾಡಿದರೆ ಸಾಕು. ಅಂತಹ ಪ್ರದೇಶಗಳಲ್ಲಿ ಯಾವಾಗ ಬೇಕಾದರೂ ಸಿದ್ಧವಾಗಿ ಬೀಜದ ಹೋರಿ ಸಿಕ್ಕುವುದರಿಂದ ಮಿಕ್ಕಹೋರಿಗಳನ್ನು ಕ್ಯಾಸ್ಟ್ರೇಟ್ ಮಾಡುವುದರಿಂದ ದೇಶದ ಹಿತಕ್ಕೆ ಧಕ್ಕೆಬರುವುದಿಲ್ಲ. ಇಂತಹ ಒಂದು ಏರ್ಪಾಡನ್ನು ಮಾಡದೇ ಇರುವಾಗ ಹೀಗೆ ಒಂದು ಕಾನೂನು ಮಾಡುವುದು ನ್ಯಾಯವಲ್ಲ. ಆದರೂ ಮಾಡಿದರೆ ಯಾವ ಉದ್ದೇಶದಿಂದ ಇದನ್ನು ಮಾಡುತ್ತಿದ್ದೇವೋ ಅದು ಸಫಲವಾಗುವುದು ಕಷ್ಟವೆಂದು ಕಾಣುತ್ತದೆ. ಈ ಎಲ್ಲ ವಿಚಾರಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸೆಲೆಕ್ಟ್ ಕಮಿಟಿಗೆ ಕಳುಹಿಸಲು ಸರ್ಕಾರದವರು ಒಪ್ಪಿದರೆ, ಕಳುಹಿಸಬಹುದು. ಪ್ರಜೆಗಳ ಅಭಿಪ್ರಾಯವನ್ನು ಮನಗಂಡು ಸರ್ಕಾರದವರು ಕೆಲಸ ಮಾಡರೆಂದು ನನ್ನ ಆಶಯ. ಕಾನೂನು ಇಲ್ಲದೆ ಈ ಕೆಲಸ ಮಾಡಲು ಸಾಧ್ಯವಾದರೆ ಅದನ್ನೂ ಸರ್ಕಾರದವರೂ ಸಮಿತಿಯವರೂ ಯೋಚನೆ ಮಾಡಲಿ. ಇಷ್ಟು ವಿನಂತಿ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋರಾರ ಜಿಲ್ಲೆ).— ಸ್ವಾಮಿ ನಿನ್ನೆಯ ದಿವಸದಿಂದಲೂ ಈ ಮಸೂದೆಯನ್ನು ವಿರೋಧಿಸಿದ ಜನಾಬ್ ಇಮಾಂದಾರವರು, ಶ್ರೀ ಸಿದ್ದಪ್ಪನವರು ಮತ್ತು ಇನ್ನು ಕೆಲವು ಮಿತ್ರರು ನಮ್ಮ ದೇಶದ ಪಶುಸಂಪತ್ತನ್ನು ಅಭಿವೃದ್ಧಿಗೊಳಿಸುವ ವಿಷಯದಲ್ಲಿ ನಮ್ಮಷ್ಟೇ ಆಶೆ ಮತ್ತು ಪ್ರೀತಿಯನ್ನಿಟ್ಟುಕೊಂಡೇ ವಿರೋಧಿಸಿದ್ದಾರೆಂದು ನನ್ನ ಭಾವನೆ. ಆದರೆ ವಿರೋಧ ಮಾಡುವಾಗ ಆ ಸ್ನೇಹಿತರು ತಮ್ಮ ಮನಸ್ಸಿನಲ್ಲಿ ಒಂದು ಅನಾವಶ್ಯಕವಾದ ಭೀತಿ ಅಥವಾ ಭಯವನ್ನಿಟ್ಟುಕೊಂಡು ಮಾಡಿದಂತೆ ವ್ಯಕ್ತವಾಗುತ್ತದೆ. ಪಶುಸಂಪತ್ತಿನ ಅಭಿವೃದ್ಧಿಯ ವಿಷಯದಲ್ಲಿ ಭಿನ್ನಾಭಿಪ್ರಾಯ ಲವಲೇಶವೂ ಇಲ್ಲವೆಂದು ಅವರೇ ಹೇಳಿದ್ದಾರೆ. ಆದರೆ ಅವರ ಮನಸ್ಸಿನಲ್ಲಿರುವ ಭಯಭೀತಿಯೇನೆಂದರೆ ಸರ್ಕಾರದವರು ಈ ಕಾನೂನನ್ನು ಮೈಸೂರು ದೇಶದ ಎಲ್ಲ ಭಾಗಗಳಲ್ಲಿಯೂ ಜಾರಿಗೆ ತರುತ್ತಾರೆ. ಅದರ ಪರಿಣಾಮವಾಗಿ ರೈತರಲ್ಲಿ ಹೆಚ್ಚು ದನಗಳಿರುವ ಕಾರಣದಿಂದ ಅವರು ಕಷ್ಟಕ್ಕೊಳಗಾಗುತ್ತಾರೆಂಬುದು. ಈ ಮಸೂದೆಯ ಮೊದಲನೆಯ ಸೆಕ್ಷನ್‌ನಲ್ಲಿ ಮೂರನೆಯ ಪ್ಯಾರಾದಲ್ಲಿ:

"This section shall come into force at once and the State Governments may, from time to time, by notification in the Mysore Gazette, apply all or any of the remaining provisions of this Act to the whole or any portion of the State from such date and for such period, if any, as may be specified in the notification, and may cancel or modify any such notification."

ಎಂದು ಹೇಳಿದೆ. ಇದನ್ನು ಮೈಸೂರು ದೇಶದ ಕೆಲವು ಭಾಗಗಳಿಗೆ ಅನ್ವಯಿಸುವಂತೆ ಮಾಡಬಹುದು ಅಥವಾ ಒಂದೇ ತಾಲ್ಲೂಕಿನ ಒಂದೇ ಪ್ರದೇಶದಲ್ಲಿ, ಎಲ್ಲಿ ಬೀಜದ ಹೋರಿಗಳವೆಯೋ ಅಲ್ಲಿಗೆ ಮಾತ್ರ ಅನ್ವಯಿಸುವಂತೆ ಮಾಡಬಹುದು; ಸರ್ಕಾರದವರು. ಪಶುಸಂಪತ್ತನ್ನು ಅಭಿವೃದ್ಧಿ ಮಾಡಬೇಕಾದ ಅವಶ್ಯಕತೆಯನ್ನು ಕುರಿತು ಅನೇಕರು ಮಾತನಾಡಿದ್ದಾರೆ. ಈ ವಿಷಯವನ್ನು ನಾವು ಅಖಿಲ ಭಾರತ ದೃಷ್ಟಿಯಿಂದ ಯೋಚನೆ ಮಾಡಬೇಕು. ನಮ್ಮ ಭರತ ಖಂಡ ವ್ಯವಸಾಯದ ದೇಶ. ಬೇರೆ ದೇಶಗಳಲ್ಲಿ ವ್ಯವಸಾಯಕ್ಕೆ ಅಶ್ವಶಕ್ತಿಯನ್ನು ಪ್ರಯೋಗ ಮಾಡುತ್ತಾರೆ. ಆದರೆ ನಮ್ಮ ದೇಶದಲ್ಲಿ ಎತ್ತುಗಳ ಶಕ್ತಿಯನ್ನು ಪ್ರಯೋಗಿಸುತ್ತಾರೆ. ನಮ್ಮ ದನಗಳು, ಪಶುಸಂಪತ್ತು ಎಷ್ಟು ಹೀನಸ್ಥಿತಿಗೆ ಬಂದಿದೆ ಎಂಬುದನ್ನು ನಾನು ಹೆಚ್ಚು ಹೇಳಬೇಕಾಗಿಲ್ಲ. ಹಿಂದೆ ನಮ್ಮ ದೇಶದ ರೈತರು ಎತ್ತುಗಳನ್ನು ನೇಗಿಲಿಗೆ ಕಟ್ಟಿ ವಿಮಾನವನ್ನು ಹುರಿಮಾತಿಕೊಂಡು ಜಿಮಾನು ಉಳುತ್ತಿದ್ದರೆ, ಆ ದೃಶ್ಯವನ್ನು ನೋಡುವುದಕ್ಕೇ ನಮಗೆ ಎಷ್ಟೋ ಸಂತೋಷವಾಗುತ್ತಿತ್ತು. ಆದರೆ ಈ ದಿವಸ ಅದೇ ಗ್ರಾಮಗಳಲ್ಲಿ ಪರಿಸ್ಥಿತಿ ಏನಾಗಿದೆ ಎಂಬುದನ್ನು ನೋಡಿದರೆ ವ್ಯಸನವಾಗುತ್ತದೆ. ಶ್ರೀ ಗುಂಡಪ್ಪಗೌಡರು ಹೇಳಿದ ಹಾಗೆ ಹಿಂದೆ ಗ್ರಾಮಗಳಲ್ಲಿ ಜನರು ತಮ್ಮ ಪಿತೃಗಳಿಗೆ ಸ್ವರ್ಗಪ್ರಾಪ್ತಿಯಾಗುತ್ತದೆಂಬ ನಂಬಿಕೆಯನ್ನಿಟ್ಟುಕೊಂಡು ಬಸವನನ್ನು ಬಿಡುತ್ತಿದ್ದರು. ಆದರೆ ಈಗ ಹಾಗೆ ಬಸವನನ್ನು ಬಿಟ್ಟರೆ ಅಂಥವರಿಗೆ ಮಾರನೆಯ ದಿನವೇ ರಾಯರು ನೋಟೀಸು ಬರುತ್ತದೆ. ಆ ಬಸವ ತಮ್ಮ ಹೊಲ ಮೇಯಿತೆಂದು ಹೇಳಿ tresspass ಆಯಿತೆಂದು ಹೇಳಿ ಪೊಲೀಸ್ ಕೇಸು ಹೂಡುತ್ತಾರೆ. ಆದಕಾರಣ ಈಗ ಯಾವ ಗ್ರಾಮದಲ್ಲಿಯೂ ಬಸವನನ್ನು ಬಿಡುವುದಿಲ್ಲ. ಎಲ್ಲೋ ಕೆಲವು ಗ್ರಾಮಗಳಲ್ಲಿ ಹೀಗೆ ಬಿಟ್ಟು ಉಪಯೋಗ ಪಡೆಯುತ್ತಿದ್ದಾರೋ ಏನೋ ಗೊತ್ತಿಲ್ಲ. ಈ ಹೊತ್ತು ನಮ್ಮ ರೈತರು ಕುರುಡು ಎತ್ತು ಕುಂಟ ಎತ್ತುಗಳನ್ನು ಇಟ್ಟುಕೊಂಡು ವ್ಯವಸಾಯ ಮಾಡುತ್ತಿರುವ ಪರಿಸ್ಥಿತಿ ಬಂದಿದೆ. ಹಿಂದೆ ನಮ್ಮ ದೇಶ ನೇಗಿಲು ಬಂಡಿ ಎಳೆಯತಕ್ಕ ಪ್ರಾಣಿಗಳಿಗೆ ಪ್ರಸಿದ್ಧವಾಗಿತ್ತು. ಅಮೃತಮಹಲ್ ಮತ್ತು ಹಳ್ಳಿಕಾರ ದನಗಳು ಬಹಳ ಚುರುಕಾಗಿದ್ದವು. ಈಗಿನ ಯುದ್ಧಗಳಲ್ಲಿ ಜೀಪ್ ಹೇಗೋ ಹಾಗೆ ಪೂರ್ವದಲ್ಲಿ ನಮ್ಮ ದೇಶದ ಹೋರಿಗಳು ಕೆಲಸ ಮಾಡುತ್ತಿದ್ದವು. ಯುದ್ಧಕಾಲದಲ್ಲಿ ನಮ್ಮ ಅಮೃತಮಹಲ್ ಎತ್ತುಗಳು ಬಹಳ ಉಪಯುಕ್ತವಾಗಿದ್ದವೆಂದು ನಾನು ಕೇಳಿದ್ದೇನೆ. ಅಖಿಲ ಭಾರತ ದನಗಳ ಪ್ರದರ್ಶನದಲ್ಲಿ ನಮ್ಮ ಅಮೃತಮಹಲ್ ದನಗಳಿಗೆ ಮೊದಲನೆಯ ಬಹುಮಾನ ಬಂದಿದೆ. ಈಗ ಇವುಗಳನ್ನು ಅಭಿವೃದ್ಧಿಸ್ಥಿತಿಗೆ ತರಬೇಕೆಂಬುದು ಎಲ್ಲರಿಗೂ ಮನವರಿಕೆಯಾಗಿದೆ. ಹಳ್ಳಿಕಾರ ದನಗಳೂ ಬಹಳ ಪ್ರಸಿದ್ಧಿ ಪಡೆದಿವೆ. ನಮ್ಮ ದೇಶದಲ್ಲಿ ಹೆಚ್ಚು ಹಾಲು ಕೊಡುವ ದನಗಳು ಕಡಿಮೆ. ಈ ಪ್ರಾಣಿಗಳ ವಿಷಯವನ್ನು ಮಾತನಾಡುವಾಗ ನಾನು ಪಾಕಿಸ್ತಾನದ ವಿಷಯ

ವನ್ನು ಹೇಳಿದೆ. ನಾನು ಯಾರ ಮನಸ್ಸನ್ನೂ ನೋಯಿಸುವ ಉದ್ದೇಶದಿಂದ ಹಾಗೆ ಹೇಳಲಿಲ್ಲ. ಈಗ ಯಾವ ಅನುಭವಸ್ಥರನ್ನಾದರೂ ಕೇಳಿದರೆ ಗೊತ್ತಾಗುತ್ತದೆ, ನಮ್ಮ ದೇಶದ ಹೆಚ್ಚು ಹಾಲು ಕೊಡುವ ಜಾತಿಯ ಹಸುಗಳೆಲ್ಲವೂ ಪಾಕಿಸ್ತಾನಕ್ಕೆ ಸೇರಿವೆ. ಈ ಹೊತ್ತು ನಮಗೆ ಒಳ್ಳೆಯ ಸಿಂಧಿ ಹಸುಗಳು ಬೇಕೆಂದರೆ ನಾವು ಪಾಕಿಸ್ತಾನಕ್ಕೆ ಹೋಗಬೇಕು. ಈ ಉದ್ದೇಶದಿಂದ ನಾನು ಹೇಳಿದೆನೇ ಹೊರತು ಅವರ ಮನಸ್ಸನ್ನು ನೋಯಿಸಲು ಹೇಳಿದ ಮಾತಲ್ಲ. ಸಿಂಧಿ ಹಸು ಬಹಳ ಹಾಲು ಕೊಡುವ ಪ್ರಾಣಿ. ನಮ್ಮಲ್ಲಿ ಪರಿಸ್ಥಿತಿ ಹೀಗಿರುವಾಗ ನಾವು ಹೆಚ್ಚು ಹಾಲು ಕೊಡುವ ಪ್ರಾಣಿಗಳನ್ನು ಅಭಿವೃದ್ಧಿಪಡಿಸಬೇಕು. ಸಾಮಾನ್ಯವಾಗಿ ಅನೇಕರು ಮಾತನಾಡುವಾಗ ಹಸುಗಳನ್ನೂ ಎತ್ತುಗಳನ್ನೂ ಪಾತ್ರ ತಮ್ಮ ಮನಸ್ಸಿನಲ್ಲಿಟ್ಟುಕೊಂಡು ಮಾತನಾಡಿದಂತೆ ಕಾಣುತ್ತದೆ. ಎಮ್ಮೆಗಳ ವಿಷಯ ಅವರು ಹೇಳಲಿಲ್ಲ. ಎಮ್ಮೆಗಳೂ ಹಾಲಿಗೆ ಮುಖ್ಯ. ಪುಷ್ಟಿಕರವಾದ ಆಹಾರ ನಮಗೆ ಸಿಕ್ಕಬೇಕಾದರೆ ಎಮ್ಮೆಗಳನ್ನೂ ಉತ್ತಮಸ್ಥಿತಿಗೆ ತರಬೇಕು. ಎಮ್ಮೆಗಳೂ ಬಹಳ ಹೀನಸ್ಥಿತಿಯಲ್ಲಿವೆ.

ಸಾಮಾನ್ಯವಾಗಿ ನಮ್ಮ ದೇಶದಲ್ಲಿ ಹೋರಿಗಳಿಗೆ ಎರಡು ಹಲ್ಲು ಆದ ತಕ್ಷಣವೇ ನೇಗಿಲಿಗೆ ಕಟ್ಟುವುದು ಪದ್ಧತಿ. ಅಂತಹ ಕರುಗಳು ಮಿಕ್ಕ ದನಗಳ ಜೊತೆಗೆ ಸುಮ್ಮನೆ ಓಡಾಡುತ್ತಿರುತ್ತವೆ. ಆದರಲ್ಲಿಯೂ ಗಂಡು ಎಮ್ಮೆಯನ್ನು (ನಗು!!) ಎಂದರೆ, ಕೋಣವನ್ನು ನೇಗಿಲಿಗೆ ಉಪಯೋಗಿಸುವುದೇ ಇಲ್ಲ. ಗಾಡಿಗೆ ಕಟ್ಟಲು ಉಪಯೋಗಿಸುವಾಗ ಅವಕ್ಕೆ ಕ್ಯಾಸ್ಟ್ರೇಟ್ ಮಾಡುತ್ತಾರೆ. ಹೀಗೆ ಉಪಯೋಗಿಸದೇ ಇರುವುದರಿಂದ ಹೀನ ದೆಸೆಗೆ ಬರುತ್ತಿವೆ. ದನಗಳ ವಧೆಯನ್ನು ನಿಷೇಧಿಸುವ ಕಾನೂನು ಜಾರಿಯಲ್ಲಿ ಬರುವುದಕ್ಕೆ ಹಿಂದೆ ಕೋಣಗಳನ್ನು ಮಾರಮ್ಮನಿಗೆ ಬಲಿ ಕೊಡಲು ಉಪಯೋಗಿಸುತ್ತಿದ್ದರು. ಈಗ ಎಮ್ಮೆಗಳ ವಂಶವೇ ಕ್ಷೀಣವಾಗುತ್ತಿದೆ. ಅದನ್ನು ತಡೆದು ಅಭಿವೃದ್ಧಿಪಡಿಸಬೇಕು. ಒಟ್ಟಿನಲ್ಲಿ ಈ ಕಾನೂನನ್ನು ತಕ್ಷಣವೇ ಸಂಸ್ಥಾನದ ಎಲ್ಲ ಭಾಗಗಳಲ್ಲಿಯೂ ಜಾರಿಗೆ ತರುತ್ತಾರೆಂಬ ಭಯಕ್ಕೆ ಕಾರಣವಿಲ್ಲ. ಕೋಣಗಳು ಬೇಕಾದವೆ ಜನರು ಮಂಡ್ಯ, ಕಾರ್ಕಳ ಹಳ್ಳಿ ಈ ಪ್ರದೇಶಗಳಿಂದ ತರುತ್ತಾರೆ. ನಮ್ಮ ಮಿತ್ರರು ಹೇಳಿದ ಹಾಗೆ ಸರ್ಕಾರದವರು ಕೊಡುವುದು ಸರಿಯಾಗಿರುವುದಿಲ್ಲ. ನಮ್ಮ ರೈತರಿಗೆ ಹೋರಿಗಳನ್ನು ತರುವುದರಲ್ಲಿ ಅನುಭವವಿರುತ್ತದೆ. ಪ್ರಾಯಶಃ ಸರ್ಕಾರದವರಿಗೆ ಅವರೇ ಸಲಹೆ ಕೊಡಬೇಕೆಂದು ಕಾಣುತ್ತದೆ. ಸರ್ಕಾರದವರೇ ಕೊಡುವುದು ಬೇರೆ ಯಾವ ದೇಶದಲ್ಲಿಯೂ ಇಲ್ಲವೆಂದು ಕಾಣುತ್ತದೆ. ಗ್ರಾಮಪಂಚಾಯತಿಯವರು ಹೋರಿಗಳನ್ನಿಡಬಹುದು, ಸಮಗ್ರಸೇವಾ ಸಹಕಾರ ಸಂಘಗಳ ರು ಈ ಕೆಲಸ ಮಾಡಬಹುದು. ಜನರಿಗೆ ತಳಿಗಳ ಅಭಿವೃದ್ಧಿಗೆ ಏನು ಮಾಡಬೇಕೆಂಬ ವಿಷಯ ತಿಳಿಯಲೆಂಬ ಘನವಾದ ಉದ್ದೇಶದಿಂದ ಇದನ್ನು ತಂದಿದ್ದಾರೆ. ಇಂತಹ ಒಂದು ಕಾನೂನಿದ್ದರೆ ಜನ ಭಯದಿಂದ ಸರಿಯಾಗಿ ವರ್ತಿಸುತ್ತಾರೆ

ಇನ್ನು ಕೆಲವು ಸದಸ್ಯರು scrub bulls ರೈತರಲ್ಲಿ ಇರುವುದೇ ಇಲ್ಲವೆಂದು ಹೇಳಿದರು. ಹಾಗೆ ಇಲ್ಲದಿದ್ದರೆ ಭಯವೇಕೆ! ಈ ಕಾನೂನಿನಿಂದ ತೊಂದರೆಯೇ ಇಲ್ಲ, ಭಯಪಡಬೇಕಾಗಿಲ್ಲ. ನಿಜವಾಗಿಯೂ ನಾನೇ ನೋಡಿದ್ದೇನೆ, ಹಳ್ಳಿಗಳಲ್ಲಿ ಇಂತಹ scrub bulls ಗಳನ್ನು ದನಗಳ ಹಿಂಡಿನ ಜೊತೆಗೆ ಬಿಡುತ್ತಾರೆ, ಯಾವಾಗ cross ಆಯಿತು ಎಂಬುದೇ ಗೊತ್ತಾಗುವುದಿಲ್ಲ. ರೈತನಿಗೆ ತನ್ನ ಹಸು ಫಲಕ್ಕೆ ಬಂದಾಗ ಸರಿಯಾದ ಕಾಲಕ್ಕೆ ಒಳ್ಳೆಯ ಹೋರಿ ಕೊಡಿಸಬೇಕೆಂಬ ಆಸೆ ಇರುತ್ತದೆ' ಆದರೆ ಅವನಿಗೆ ಗೊತ್ತೇ ಆಗದೆ cross ಆಗಿ ಹೋಗಿರುತ್ತದೆ, ಆಮೇಲೆ ತಿಳಿಯುತ್ತದೆ, ಆಗ ವ್ಯಸನ ಪಡುತ್ತಾನೆ.

ಈ ರೀತಿ ರೈತರಿಗೆ ಗೊತ್ತಿಲ್ಲದ ಹಾಗೆ ಹೋರಿಗಳು ಹಾರುವ ಪರಿಸ್ಥಿತಿ ಇರುತ್ತದೆ. ಅದಕ್ಕೆ ಕಾರಣ ಈ ಗಿಡ್ಡ ಹೋರಿಗಳಿರುವುದೇ ಆಗಿದೆ. ಈ ಗಿಡ್ಡಗಳನ್ನು ಕ್ಯಾಸ್ಟ್ರೇಟ್ ಮಾಡುವುದರಿಂದ ರೈತರಿಗೆ ತೊಂದರೆ ಆಗುವುದಿಲ್ಲ. ಆದರೆ ಕೆಲವು ನಿಯಮಗಳನ್ನು ಸಡಿಲ ಮಾಡಬೇಕಾಗುತ್ತದೆ ಅದನ್ನು ಬೇಕಾದರೆ ಮಾಡಬಹುದು. ಶ್ರೀ ಹುಚ್ಚೇಗೌಡರು "ಕೂಸು ಹುಟ್ಟುವುದಕ್ಕಿಂತ ಮುಂಚೆ ಕುಲಾವಿ ಹೊಲಿಸಿದರು" ಎಂದು ಹಾಸ್ಯಾಸ್ಪದವಾಗಿ ಹೇಳಿದರು. ಈಗಿನ ಕಾಲದ ಹೆಂಗಸರು ನೆಟ್ಟಿಂಗ್ ಕಲಿತುಕೊಂಡ ಮಗು ಹುಟ್ಟುವುದಕ್ಕೆ ಮುಂಚೆಯೇ ಅದಕ್ಕೆ ಬೇಕಾಗುವ ಅಂಗಿ ಮುಂತಾದುವುಗಳನ್ನು ದಾರದಿಂದ ಹಾಕುತ್ತಾರೆ. ಯಾವ ಉದ್ದೇಶದಿಂದ ಹಾಕುತ್ತಾರೆ ಎಂದರೆ ಮಗು ಸಂತೋಷದಿಂದ ಬದುಕಲಿ, ಚಳಿಗಾಲದಲ್ಲಿ ಉಪಯೋಗವಾಗಲೀ ಎಂಬ ಹಿರಿಯಾಸೆ ಇರುತ್ತದೆ. ಆದ್ದರಿಂದ ಇದೇನೂ ಹಾಸ್ಯಾಸ್ಪದವಾದ ವಿಚಾರವಲ್ಲ. ಇನ್ನೊಂದು ವಿಷಯ. ಒಳ್ಳೆಯ ತಳಿ ಬೀಜ ಒಂದರಿಂದರೇ ಅಭಿವೃದ್ಧಿಯಾಗುವುದಿಲ್ಲ ಎಂದು ಹೇಳಿದರು. ನಮ್ಮ ಹಳ್ಳಿಯವರು ಗ್ರಾಮ್ಯ ಭಾಷೆಯಲ್ಲಿ "ಹಂದಿ ಎಷ್ಟು ಕಾಲವಾದರೂ ಅನೆ ಆಗುವುದಿಲ್ಲ" ಎಂದು ಹೇಳುತ್ತಾರೆ. ಒಳ್ಳೆಯ ಬೀಜ ಇದ್ದರೆ ಅಮೃತಮಹಲ್ ಹಸುವಿನ ಮೇಲೆ ಹಾರಿಸಿದರೆ, ಬಹಳ ಒಳ್ಳೆಯ ಶ್ರೇಷ್ಠವಾದ ದನ, ಹೋರಿ ಹುಟ್ಟುತ್ತದೆ. ಅದು ಇಲ್ಲದೇ ಇದ್ದರೆ ಮೆರುಗು ಕೊಡುವುದಿಲ್ಲ. ನಿಜ, ಬೀಜ ಪ್ರಾಮುಖ್ಯವಾದುದು, ಬೀಜವಿಲ್ಲದೇ ಒಳ್ಳೆಯ ಸಂತತಿ ಅಭಿವೃದ್ಧಿಯಾಗುವುದಿಲ್ಲ. ಆದ್ದರಿಂದ ಒಳ್ಳೆಯ ಬೀಜ ಇರಬೇಕು. ಇದಕ್ಕೆರ್ಾ ನಮ್ಮ ಸ್ನೇಹಿತರು ಸ್ಪಷ್ಟವಾಗಿ ಉತ್ತರಕೊಟ್ಟಿದ್ದಾರೆ. ಈ ಮಸೂದೆಯಲ್ಲಿ ಇದನ್ನು ಯಾವ ಯಾವ ಪ್ರಾಂತ್ಯದಲ್ಲಿ ಜಾರಿಗೆ ಕೂಡಬೇಕೋ ಆ ಪ್ರಾಂತ್ಯದಲ್ಲಿ ಒಂದು ತಾಲ್ಲೂಕಿನಲ್ಲಿ ತರಬೇಕು ಅಥವಾ ಕೆಲವು ಗ್ರಾಮಗಳಲ್ಲಿ ತರಬೇಕು ಎಂಬುದೂ ಸಹ ಸ್ಪಷ್ಟವಾಗಿದೆ. ಆದ್ದರಿಂದ ಈ ಮಸೂದೆ ಎರ್ಾ ವಿಧದಲ್ಲೂ ಉತ್ತಮವಾಗಿದೆ ಎಂದು ಹೇಳಿ ಇದನ್ನು ಪುಷ್ಟೀಕರಿಸುತ್ತೇನೆ.

Sri M. GOVINDA REDDY (Chitaldrug District—General).—Sir, I wish to accord my support to this Bill and to the amendment proposed by the Hon'ble Member Sri S. Rangaramiah. The object of the Bill is clear. For any country which has an agricultural economy, cattle wealth is a very important thing and specially for Mysore which is blessed with very good pedigrees famous all over the world it is very important. Hon'ble Member Sri Hutche Gowda has spoken as to how Mysore breeds have won battles in South Africa and how they were praised by commanders for their qualities of endurance, for their qualities of sustaining under all sorts of difficulties and how they have become so famous in the

(SRI M. GOVINDA REDDY.)

whole world. When we have such breeds it of course logically follows that we should give every encouragement. If the Government try to make an attempt to provide facilities for breeding such pedigrees it must be welcomed by all who are interested in the agricultural economy of the country. There are difficulties and those have been pointed out and I am not referring to the points already referred to.

There are two points which I would bring to your notice and I believe they are quite new. I do not agree that scrub bulls of all kinds should be castrated. There are some indigenous breeds which are very good indeed, and they have not come to the notice of the Veterinary Department simply because nobody has studied the pedigree. Nobody has tried to trace the pedigree. I have seen varieties of scrub bulls which are not in any way inferior to any stud bull in strength, endurance, beauty or form except in bulk. I have got one bull with me. Some Hon'ble Members have seen it. It is a bull which is only three feet in height. But it has the strength of a giant. It draws a cart load of twelve people and it draws that cart for any length of time and distance, at a speed which no bull can excel. We have therefore nicknamed it as "Our Jeep Motor Car". That cannot be sold and that bull has a beauty or form which, I am sure, if the Hon'ble Home Minister looks at, he will fall in love with it (Laughter). I have been cursing the man who castrated it because it would have been very good to encourage the progeny of that kind. If scrub bulls could give us the same kind of work and show the same strength and endurance as other bulls, why should we not have scrub bulls? It is not a thing which should be taken to an exhibition or to shows for any prize. If we have the work of the agriculturist in view and if scrub bulls can be useful in the same manner as the best of bulls, why should we not have scrub bulls is my point. That is point number one.

Point number two is that we must look at the cost of maintenance. In our agricultural economy, the cost of maintenance for a poor country like ours is a very great thing. Those friends who have had to maintain these stud bulls know fully well that it is like maintaining a white elephant. I know of instances where the Government were willing to give them free but were not availed of simply because they could not meet the cost of maintenance. For a country like ours, if a scrub bull is good enough in every respect, it is very easy to maintain and the cost of maintenance of that scrub bull will be very low. For instance the scrub bull which I have, does not cost me as much as a small cow costs. The maintenance cost of a stud bull is ten times that of scrub bull.

Sri H. K. VEERANNA GOWDA.—Is it a bull or bullock?

Sri M. GOVINDA REDDY.—It is a bullock. It was a bull and it has now become a bullock unfortunately. I am regretting for it.

For a poor country where we cannot supply all the raiyats with bulls of first class pedigree we should entertain the possibility of having scrub bulls of good quality.

Mr. SPEAKER.—Then it will not be called as scrub bull!

Sri M. GOVINDA REDDY.—It can, for this reason that we have not listed it as a bull. In the known pedigree, scrub bulls do not come at all; they have no place. The Hallikars, Amrit Mahal or Ghir which have been classified, come under stud bulls, but these native bulls, however good they may be, are not classed because they have not been studied by the Veterinary Department people. Hon'ble Member Sri H. B. Gundappa Gowda was referring to cows which give 2 or 2½ seers of milk. These cows would be very small and to maintain them, it will be very cheap. These cows will cost us certainly less than the Sindhi cows but give almost equal quantity of milk or a little less. Therefore, in the interest of the country we must encourage breeding by these scrub bulls wherever we have them. Simply because they are scrub bulls, there is no point in eliminating them. The department must make a

study of these scrub bulls and if they belong to a good pedigree, they must not be put out of function and breeding by them must be encouraged. By this I do not mean to say that stud bulls should not be encouraged. I do belive that the Department and the Government must make every attempt to encourage breeding of bulls of good pedigree. I do conceed, Sir, that wherever a stud bull of a good pedigree could be supplied and scrub bulls are not desirable, they may not be allowed because they may mix with cows, as Sri M V. Krishnappa was referring. If there is a scrub bull, even if there is a stud bull of good pedigree, the whole quality would be spoiled. This Act must be made applicable only to places where stud bulls of good pedigree could be given and not to places where they are not supplied by Government, and I once again repeat that wherever scrub bulls of good pedigree are found, Government should not try to bring them under the purview of the Act. They should be encouraged.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ನಾನು ಈ ಮಸೂದೆಯನ್ನು ವಿರೋಧಿಸಬೇಕಾಗಿದೆ. ಏಕೆಂದರೆ, ಇಂಥಾ ಕಾನೂನಿನಿಂದ ನಮ್ಮ ದೇಶದಲ್ಲಿ ನಿಜವಾಗಿಯೂ ಗೋ ಸಂಪತ್ತು ಹೆಚ್ಚುವುದಾಗಿದ್ದರೆ ನಾವೆಲ್ಲರೂ ಏಕ ಮನಸ್ಸಿನಿಂದ ಒಪ್ಪಬಹುದಾಗಿತ್ತು. ಹಾಲ ನಮ್ಮ ದೇಶದಲ್ಲಿ ಏನು ಗೋಸಂಪತ್ತಿದೆ ಅದೆಲ್ಲಾ ಅವರವರೇ ಬೆಳಸಿದ್ದಾಗಿದೆಯೇ ಹೊರತು ಸರ್ಕಾರದವರು ಬೆಳಿಸಿದ್ದಲ್ಲ. ನಮ್ಮ ದೇಶದಲ್ಲಿರುವ ಗೋಸಂಪತ್ತು ಪರದೇಶಗಳಲ್ಲೂ ಸಹ ಹೆಸರುವಾಸಿಯಾಗಿದೆ. ಆದ್ದರಿಂದ ಈಗೇನೂ ಕಾನೂನು ಮಾಡಿ ನಿರ್ಬಂಧಕವಾಗಿ ಅವರಿಗೇನೂ ಹೊಸದಾಗಿ ಹೇಳಿಕೊಡಬೇಕಾದ್ದೇನೂ ಅಷ್ಟಾಗಿಲ್ಲ. ಅಂಥಾದ್ದರಲ್ಲಿ ಈಗ ಕಾನೂನು ತಂದಿರುವುದರಲ್ಲಿ ನಮ್ಮ ದೇಶದ ಗೋಸಂಪತ್ತು ಹೇಗೆ ಅಭಿವೃದ್ಧಿಯಾಗುತ್ತಿದೆಯೆಂಬದನ್ನಾದರೂ ತೋರಿಸಿದ್ದೀರಾ ? ಉದಾಹರಣೆಗೆ, ವ್ಯವಸಾಯದ ಇಲಾಖೆಯಲ್ಲಿ ಒಳ್ಳೆಯ ಬೀಜಗಳನ್ನೂ ಗೊಬ್ಬರವನ್ನೂ ಒದಗಿಸಿಕೊಟ್ಟು ಅವುಗಳನ್ನು ಉಪಯೋಗಿಸಿದರೆ ಉತ್ಪತ್ತಿ ಜಾಸ್ತಿಯಾಗುತ್ತದೆ, ಅನುಕೂಲ ಜಾಸ್ತಿಯಿದೆ. ಕಡಿಮೆ ಬತ್ತನೆಯ ಕಾಳನ್ನು ಬಿತ್ತಿ ಹೆಚ್ಚು ಕಾಳನ್ನು ಪಡೆಯುತ್ತೀರೆಂದು ಪ್ರಚಾರ ಮಾಡಿ ತೋರಿಸಿದ ಮೇಲೆ ರೈತರು ಅದನ್ನು ಒಮ್ಮೆ ನೋಡಿ ತಿಳಿದುಕೊಂಡ ಮೇಲೆ ತಾವಾಗಿಯೇ ಬಂದು ಕೊಂಡು ಹೋಗುತ್ತಿಲ್ಲವೆ ? ಅದರಂತೆಯೇ ಇದಕ್ಕೇನೂ ಕಾನೂನು ಬೇಕಾಗಿಲ್ಲ. ಹೆಚ್ಚಿನ ಅನುಕೂಲಗಳಿವೆಯೆಂದು ಗೊತ್ತುಪಡಿಸಿದರೆ ರೈತರು ತಮ್ಮಷ್ಟಕ್ಕೆ ತಾವೇ ಬರುತ್ತಾರೆ. ಆಗ ನಿಮಗೇ ತಕ್ಕಷ್ಟು ಒದಗಿಸಿಕೊಡುವುದಕ್ಕಾಗುವುದಿಲ್ಲ. ಈಗ ಬತ್ತನೆ ಬೀಜಗಳಾದ H22 ರಾಗಿ, ಬಂಗಾರಕಡ್ಡಿ ಬತ್ತ ಇವುಗಳನ್ನು ರೈತರು ಗಳು ಕೇಳಿದರೂ ಇಲಾಖೆಯವರಿಗೇ ಸಾಕಾದಷ್ಟು ಕೊಡುವುದಕ್ಕೆ ಸಾಧ್ಯವಿಲ್ಲದೆ ಹೋಗಿದೆ. ಆದ್ದರಿಂದ ನಮಗೇನು ಗೊತ್ತಾಗುತ್ತದೆಂದರೆ ನಿಮ್ಮ ಇಲಾಖೆಯವರು ಹೆಚ್ಚಿಗೆ ಪ್ರಚಾರಮಾಡಿ ಇದರಿಂದ ಪ್ರಯೋಜನ ಲಭಿಸುತ್ತದೆಂದು ತೋರಿಸಿಕೊಟ್ಟರೆ ರೈತರು ತಾವೇ ಮುಂದೆ ಬರುತ್ತಾರೆ. ಈಗ ನೀವು ಗಿಡ್ಡ ಎತ್ತುಗಳಿಂದ ನಮ್ಮ ದೇಶಕ್ಕೆ ಪ್ರಯೋಜನವಿಲ್ಲವೆಂದು ಹೇಳುತ್ತಿದ್ದೀರಿ. ನಮ್ಮ ದೇಶದ ರೈತರಲ್ಲಿ ಹೆಚ್ಚು ಜನ ಬಡಜನರೆಂಬುದನ್ನು ತಾವು ನೆನಪಿಡಬೇಕು ಅವರುಗಳಿಗೆ ಈಗಿನ ಸಂದರ್ಭಗಳಲ್ಲಿ 200, 300 ರೂಪಾಯಿಗಳಿಗಿಂತ ಹೆಚ್ಚಿಗೆ ಬೆಲೆಯ ಎತ್ತುಗಳನ್ನು ಕಟ್ಟುವುದಕ್ಕೆ ಚೈತನ್ಯವಿಲ್ಲ. ಸೇಕಡ 75ರಷ್ಟು ಜನ ಇಂಥವರೇ ಆದ್ದರಿಂದ ನಮಗೆ ಗಿಡ್ಡ ರಾಸುಗಳೂ ಬೇಕೇ ಬೇಕು. ಆಲ್ಲದೆ, ಈಗಲೂ ನಮ್ಮ ರೈತರಿಗೆ ಯಾವ ಹಸುಗಳಿಗೆ ದೊಡ್ಡ ಹೋರಿ ಕೊಡಿಸಬೇಕೆನಿಸುತ್ತದೆಯೋ ಅವರೇ ಮೂರು ನಾಲ್ಕು ಮೈಲಿಗಳಾದರೂ ಕೂಡ ಹೋಗಿ ಒಳ್ಳೆಯ ಹೋರಿಯನ್ನೇ ಕೊಡಿಸಿಕೊಂಡು ಬರುತ್ತಿದ್ದಾರೆ. ಸುಮ್ಮನೆ ಸಿಕ್ಕಾಪಟ್ಟೆ ರೈತರೇನೂ ಮಾಡುತ್ತಿಲ್ಲ. ಸಾಮಾನ್ಯವಾದ ಸಣ್ಣ ದನಗಳಿಗೆ ಮಾತ್ರ ಗಿಡ್ಡ ಹೋರಿಗಳನ್ನು ಕೊಡಿಸುತ್ತಾರೆ ಅಷ್ಟೆ. ಆಲ್ಲದೆ ಈ ಗಿಡ್ಡ ರಾಸುಗಳೂ ಕೂಡ ನಮ್ಮ ವ್ಯವಸಾಯಕ್ಕೆ ಬಹಳ ಅವಶ್ಯಕವೆಂಬದನ್ನು ತಿಳಿಯಬೇಕು. ಅದರಲ್ಲೂ ಗದ್ದೆಕೆಲಸಕ್ಕೆ ಗಿಡ್ಡ ರಾಸುಗಳೇಬೇಕು. ಆದ್ದರಿಂದ ಅವುಗಳ ಜಾತಿಯನ್ನು ತೆಗೆದುಹಾಕಿ ಬಿಡುವುದು ಸರಿಯಲ್ಲ. ಆದಕಾರಣ ಇಂಥಾ ಕಾನೂನುಗಳನ್ನು ಜಾರಿಗೆ ತರುವುದರಿಂದ ರೈತರಿಗೇನೂ ಹೆಚ್ಚು ಪ್ರಯೋಜನವಿಲ್ಲ. ಒಟ್ಟಿನಲ್ಲಿ ವ್ಯವಸಾಯದ ಇಲಾಖೆಯಲ್ಲಿ ಫಿಷರಿ ಶಾಖೆಯನ್ನು ಏರ್ಪಡಿಸಿದ್ದರಿಂದ ಯಾವ ರೀತಿ ರೈತರಿಗೆ ಪ್ರಯೋಜನವಾಗುತ್ತಿದೆಯೋ ಇದರಿಂದಲೂ ಅಷ್ಟೇ ಎಂದು ಕಾಣುತ್ತೆ. ಯಾವ ಇಲಾಖೆಯವರು ಲಂಚ ತೆಗೆದುಕೊಂಡರೂ ವಿದ್ಯಾಭ್ಯಾಸ ಮತ್ತು ವ್ಯವಸಾಯದ ಇಲಾಖೆಯವರು ಲಂಚ ತೆಗೆದುಕೊಳ್ಳುವದು ಇದುವರೆಗೂ ಕಂಡುಬರುತ್ತಿರಲಿಲ್ಲ. ಈಗ ಫಿಷರಿ ಶಾಖೆಯನ್ನು ತಂದಿಟ್ಟು ರೈತರಿಗೆ ಕಿರುಕುಳ ಕೊಟ್ಟು ಸಂಪಾದನೆ ಮಾಡಿಕೊಳ್ಳುವುದಕ್ಕೆ ದಾರಿಯಾಯಿತು. ಕೆರೆಗಳು ಸ್ವಲ್ಪ ಒಣಗಿ ರೈತರು ಎಲ್ಲಿಗಾದರೂ ಬೇರೆ ಊರಿಗೆ ಬೇಗ ಹೋಗಬೇಕೆಂದು ಕೆರೆಯ ಒಳಭಾಗದಲ್ಲಿ ಹೋಯಿತೆಂದರೆ ಈ ಫಿಷರಿ ಇಲಾಖೆಯವರು ಹಿಡಿದುಕೊಂಡು ಮೀನು ಹಿಡಿಯಲು ಬಂದರೆಂದು ಕೇನು ಹಾಕುತ್ತೇವೆಂದು ಹೆದರಿಸಿ 5—10 ರೂಪಾಯಿಗಳನ್ನು ಕಿತ್ತುಕೊಳ್ಳುತ್ತಾರೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಅದೇಕೆ ಹಾಕುತ್ತಾರೆ ? ಮೀನಿರುವ ಕಡೆಯಲ್ಲಿ ನಡೆಯುವುದಕ್ಕಾಗುವುದಿಲ್ಲ : ಎಲ್ಲರೂ ನಡೆಯುವ ಕಡೆಯಲ್ಲಿ ಮೀನುಗಳಿರುವುದಿಲ್ಲ .

ಶ್ರೀ ಬಿ. ಚನ್ನಬೈರೇಗೌಡರು.—ಮೀನು ಹಿಡಿಯಲು ಬಂದರೆಂದು ಹೆದರಿಸುತ್ತಾರೆ. ಅಂತೂ ಇಷ್ಟು ಮಾತ್ರ ಹೇಳಬಹುದು. ಈ ಕಾನೂನಿನಿಂದ ಅಷ್ಟಾಗಿ ಪ್ರಯೋಜನವಾಗುವುದರ ಬದಲು ರೈತರಿಗೆ ಇನ್ನೂ ತೊಂದರೆ ಗಳುಂಟಾಗಲು ಅವಕಾಶವಾಗಬಹುದು. ಯಾವ ರೀತಿ ಕಷ್ಟಗಳುಂಟಾಗುತ್ತವೆಂಬದನ್ನು ಶ್ರೀ ಚನ್ನಬಸಪ್ಪನವರೂ ಹೇಳಿದ್ದಾರೆ. ಒಂದು ಉದಾಹರಣೆ ಹೇಳುವುದಾದರೆ, ಈಗ ಸಾಮಾನ್ಯವಾಗಿ ನಮ್ಮಲ್ಲಿ ಹೋರಿಗಳನ್ನು ಇಡ ಹಾಕುವುದು ದೀವಳಿಗೆ ಅಂದರೆ ಸುಗ್ಗಿಯ ಕಾಲದಲ್ಲಿ; ಬೇಸಿಗೆಯಲ್ಲಿ ಮಾಡಿಸುವುದಿಲ್ಲ. ಹೀಗಿರುವಾಗ, ವೆಟರಿನರಿ ಡಾಕ್ಟರು ಬಂದು ಬೇಸಗೆಯಲ್ಲೇ ಇಡಹಾಕುತ್ತೇವೆಂದು ಬಂದರೆ ಏನು ಮಾಡುವುದು ?

(ಶ್ರಿ ಬಿ. ಚನ್ನಬೈರೇಗೌಡರು)

ರೈತರು ಹೆದರಿ ಏನಾದರೂ ಡಾಕ್ಟರಿಗೆ ಕೈಬೆಚ್ಚಗೆ ಮಾಡಿ ಕಳುಹಿಸಿಕೊಡಬೇಕಾಗುತ್ತದೆ. ಹೀಗಾಗಿ ರೈತರು ಲಂಚ ತೆರಲಕ್ಕೆ ಒಂದು ದಾರಿ ಮಾಡಿ ಕೊಟ್ಟ ಹಾಗಾಯಿತು. ಇತ್ತ ಸರ್ಕಾರದವರ ಹತ್ತಿರ ಸಾಕಾದಷ್ಟು ಗಳಿಗಳೂ ಕೂಡ ಇಲ್ಲ. ಹಿಂದೆ ಸರ್ಕಾರದ ವತಿಯಲ್ಲಿ 30—40 ಸಾವಿರದಷ್ಟು ಅವ್ಯಾತಮಹರ್ ದನಗಳಿದ್ದುವು. ಈಗ ಮೂರು ಸಾವಿರ ಮಾತ್ರ ಇರುತ್ತೆ. ಅವುಗಳನ್ನೇ ನಿಮಗೆ ಸಾಕುವುದಕ್ಕಾಗದೆ ಹೋಗಿದೆ. ಹೀಗಿರುವಲ್ಲಿ ಎಲ್ಲಾ ದೊಡ್ಡ ರಾಸುಗಳೇ ಆದಲ್ಲಿ ರೈತರುಗಳು ಅವುಗಳನ್ನು ಸಾಕುವುದಕ್ಕೆ ಸಾಧ್ಯವೇ? ಅವರ ಆರ್ಥಿಕಸ್ಥಿತಿ ಉತ್ತಮಗೊಳ್ಳಲಕ್ಕೆ ಬದಲು ಇನ್ನೂ ಕ್ಷೀಣದೆಸೆಗೆ ಬರುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ನಿರ್ಲಕ್ಷ್ಯಮಿತಿಗೆ ಹಾಕುವ ಬದಲು ಈಗಲೇ ಪಾಪವು ತೆಗೆದುಕೊಂಡು ಇನ್ನೂ ನಾಲ್ಕಾರು ವರ್ಷಗಳ ಮೇಲೆ ದೇಶದಲ್ಲೇನಾದರೂ ಗೋಸಂಪತ್ತಿಗೆ ಜ್ಯೋತಿ ಬಂದರೆ ಆಗ ಇದನ್ನು ತರಲಿ. ನಮ್ಮಕ್ಕೆ ಇದು ನಿಜವಾಗಿಯೂ ರೈತರಿಗೆ ಹೆಚ್ಚಿನ ಪ್ರಯೋಜನಕಾರಿಯಿಲ್ಲ. ಹೆಚ್ಚಿನ ಬಹುಮತವಿರುವ ಈ ಸಭೆಯಲ್ಲಿ ಅವರ ಕತೆಯವರೆಲ್ಲೇ ಇದನ್ನು ವಿರೋಧಮಾಡುತ್ತಿದ್ದಾರೆ. ಮಾನ್ಯ ಚನ್ನಬಸಪ್ಪನವರು ಮುಂತಾದವರೆಲ್ಲರೂ ಈ ಮಸೂದೆಯಲ್ಲರುವ ರೊಪದೋಷಗಳನ್ನು ತೋರಿಸಿದರೂ ಕೇವಲ ಪಾರ್ಟಿ ಶಿಸ್ತಿಗಾಗಿ ಮಸೂದೆಯನ್ನು ವಿರೋಧಿಸುವಲ್ಲ, ಅಷ್ಟೆ. ಆದ್ದರಿಂದ ಸರ್ಕಾರದವು ಜನರ ಮೇಲೆ ತೆರಿಗೆಗಳನ್ನು ಹೇರಿರುವ ಹಾಗೆ ಮಾತು ಮಾತಿಗೂ ಕಾನೂನುಗಳನ್ನು ಜನರ ಮೇಲೆ ಹೇರಿ ಜನರನ್ನು ಕಷ್ಟಕ್ಕೀಡುಮಾಡುವುದನ್ನು ಬಿಟ್ಟು ಜನರಿಗೆ ಅದಷ್ಟುವಟ್ಟಿಗೆ ತೊಡಕುಗಳನ್ನು ತಪ್ಪಿಸಿ ಸರಳ ರೀತಿಯಲ್ಲಿ ಜನರು ಹೋಗುವಂತೆ ಮಾಡಬೇಕೆಂದು ಹೇಳಿ ಈ ಮಸೂದೆಯನ್ನು ವಿರೋಧಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ನಮ್ಮ ದೇಶದ ಜಾನುವಾರುಗಳನ್ನು ಉತ್ತಮಪಡಿಸುವ ಉದ್ದೇಶದಿಂದ ತಂದಿರತಕ್ಕ ಈ ಮಸೂದೆಯ ಮೇಲೆ ಇಷ್ಟೊಂದು ದೀರ್ಘವಾದ ಭಾಷಣಗಳಾಗುತ್ತವೆಂದು ನಾನು ನಂಬಿರಲಿಲ್ಲ. ನಿನ್ನೆಯಿಂದ ಅನೇಕರು ಎದುರ ಮೇಲೆ ಮಾತನಾಡಿದ್ದಾರೆ. ಕೆಲವರಂತೂ ಪಶುವೈದ್ಯ ಇಲಾಖೆಯ ವಿಷಯದಲ್ಲಿ ದೊಡ್ಡ ಒಡ್ಡೋಟ್ ಭಾಷಣವನ್ನೇ ಮಾಡಿದಂತೆ ಮಾಡಿದ್ದಾರೆ.

ಈ ಮಸೂದೆಯ ಬಗ್ಗೆ ಜನಾಬ್ ಜೆ. ಮಹಮ್ಮದ್ ಇಮಾಂರವರು ನಿನ್ನೆ ಮಾತನಾಡುತ್ತಾ ಗೂಳಿಗಳನ್ನು ಸಾಕುವ ಮತ್ತು ಇದಾ ಮಾಡತಕ್ಕ ಪದ್ಧತಿಯನ್ನು ಬಹು ಹಿಂದಿನ ಕಾಲದಿಂದಲೇ ಅನೇಕರು ಹಳ್ಳಿಗಳಲ್ಲಿ ಜಾರಿಯಲ್ಲಿಟ್ಟುಕೊಂಡಿರುತ್ತಾರೆಂದು ವಾದಿಸಿ ಈಗ ಇದರ ಆವಶ್ಯಕತೆ ಅಷ್ಟಾಗಿರುವುದಿಲ್ಲವೆಂದು ವಿರೋಧಿಸಿದ್ದಾರೆ. ಮತ್ತು ಅದೇ ವಾದನರಣಿಯಲ್ಲಿ ಅವರು ಇನ್ನೂ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡುತ್ತಾ ಸಾಕಷ್ಟು ಗೂಳಿಗಳನ್ನು ಹಳ್ಳಿಗಳಿಗೆಲ್ಲಾ ಒದಗಿಸಲು ಸರ್ಕಾರದವರಿಗೆ ಸಾಧ್ಯವಿಲ್ಲವೆಂದೂ ಮತ್ತು ಅಂಥಾ ಅಸಾಧ್ಯವಾದ ಬದುಕಿಗೆ ಕಾನೂನನ್ನು ಜಾರಿಮಾಡಿದರೆ ಅದರಿಂದ ಅಷ್ಟು ಪ್ರಯೋಜನ ಕೂಡ ದೊರೆಯಲಾರದೆಂದೂ ತಿಳಿಸಿದ್ದಾರೆ. ಒಳ್ಳೆಯ ಗೂಳಿಗಳನ್ನು ಪ್ರತಿಯೊಂದು ಹಳ್ಳಿಗೂ ಸಾಧ್ಯವಾದರೆ ಒದಗಿಸಬೇಕೆಂಬುದು ಒಳ್ಳೆಯ ಅಭಿಪ್ರಾಯವೇ ಸರಿ ಎಂಬುದಾಗಿ ಮಾನ್ಯ ಆ ಮಿತ್ರರೂ ತಿಳಿದುಕೊಂಡಿದ್ದಾರೆ. ಆ ವಾದವನ್ನು ಅವರೂ ಒಪ್ಪುತ್ತಾರೆ ಹೀಗೆ ಅವರ ವಾದ ಸರಣಿಯಲ್ಲಿ ಅಡಕವಾಗಿರತಕ್ಕ ಅಭಿಪ್ರಾಯಗಳು ಒಂದಕ್ಕೊಂದಕ್ಕೆ ಸಮಂಜಸವಾಗಿದಂತಿವೆ.

ಮತ್ತೊಬ್ಬ ನನ್ನ ಮಾನ್ಯ ಮಿತ್ರರಾದ ಶ್ರೀ ಎಚ್. ಎಂ. ಚನ್ನಬಸಪ್ಪನವರು ವಾದ ಮಾಡುತ್ತ ಈ ಮಸೂದೆಯ ಧ್ಯೇಯ ಒಳ್ಳೆಯದೆಂದು ಒಪ್ಪಿಕೊಂಡು ಆದರೆ ಇದನ್ನು ಜಾರಿಗೆ ತರುವ ಮುನ್ನ ಪ್ರಜಾಭಿಪ್ರಾಯ ಪಡೆಯಬೇಕೆಂದು ತಿಳಿಸಿದ್ದಾರೆ. ಈವರೆಗೆ ಈ ಸಭೆಯಲ್ಲಿ ಈಗಾಗಲೇ ಅನೇಕ ಮಸೂದೆಗಳು ಬಂದು ಅವುಗಳೆಲ್ಲಾ ಪಾಸಾಗಿ ಹೋಗಿವೆ. ಅಂದರೆ ಆ ಮಸೂದೆಗಳೆಲ್ಲವೂ ಪ್ರಜಾಭಿಪ್ರಾಯಕ್ಕೆ ಮನ್ನಣೆ ಕೊಡದೆ ಹಾಗೆಯೇ ಪಾಸು ಮಾಡಲ್ಪಟ್ಟವಗಳಾಗಿವೆಯೇನು? ಇಲ್ಲ, ಈ ಎಲ್ಲಾ ಮಸೂದೆಗಳನ್ನೂ ಸರ್ವತೋಮುಖವಾಗಿ ವಿಮರ್ಶೆಮಾಡಿದನಂತರವೇ ಅದಕ್ಕೆ ಸದಸ್ಯರೆಲ್ಲರ ಅನುಮತಿ ದೊರೆತಿರುತ್ತೆ. ಈ ತಹರ್ ವರೆಗೂ ಅನುಸರಿಸಲಾಗುತ್ತಿದ್ದ ಪದ್ಧತಿಯಲ್ಲೆಲ್ಲಾ ಪ್ರಜಾಭಿಪ್ರಾಯಕ್ಕೆ ಮನ್ನಣೆ ಕೊಡದೆ ಮಾಡಲಾಗುತ್ತಿತ್ತೆಂದೂ ಈಗ ಈ ಒಂದು ಮಸೂದೆಯ ವಿಷಯದಲ್ಲಿ ಹಾಗೆ ಮಾಡದೆ ಪ್ರಜಾಭಿಪ್ರಾಯ ಪಡೆದೇ ಮಾಡಬೇಕಾಗಿರುತ್ತದೆಂಬ ಭಾವನೆ ಮೂಡುವಂತೆ ಅವರು ವಾದಿಸಿದ್ದಾರೆ. ಈಗಾಗಲೇ ಪಾಸಾಗಿರುವ ಸಾಲ ತೀರ್ವೆಗೆ ಸಂಬಂಧಪಟ್ಟ ಮಸೂದೆ, ಇನ್ಯಾಂಡ್ ರಿಕಾರ್ಡ್ ಆಫ್ ರೈಟ್ಸ್ ಮಸೂದೆ ಮತ್ತು ಸೇಲ್ಸ್‌ಟ್ಯಾಕ್ಸ್ ಮಸೂದೆ ವಗೈರೆಗಳು ಜನರ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡದೆ, ಈಗ ಸಭೆಯ ಮುಂದಿರತಕ್ಕ ಮಸೂದೆಯೊಂದೇ ಜನರ ಮೇಲೆರಲ್ಲಾ ಹೆಚ್ಚಿನ ಪರಿಣಾಮವನ್ನುಂಟುಮಾಡುವುದಾಗಿದ್ದಂತೆಯೂ ಅಭಿಪ್ರಾಯವಾಗುತ್ತದೆ. ಈ ತರಹದ ವಾದ ಹೊಸ ರೀತಿಯದಾಗಿದೆ. ಹಿಂದೆ ಪದೇ ಪದೇ ಇಸ್ಟೇ ಮಾನ್ಯ ಶ್ರೀ ಎಚ್ ಎಂ. ಚನ್ನಬಸಪ್ಪನವರು ಬೆಂತ್ಯಾಯ ಶಿಕ್ಷಣ ಪದ್ಧತಿಯನ್ನು ಸಂಸ್ಥಾನಾಮಳೆ ಜಾರಿಗೆ ತರಬೇಕೆಂದು ವಾದಿಸುತ್ತಿದ್ದಾಗ, ಅವರು ಇಡೀ ದೇಶದಲ್ಲಿರುವ ಪ್ರಜೆಗಳ ಮನೋಭಿಪ್ರಾಯವೆತ್ತ ಕಡೆಗಿದೆಯೆಂಬುದನ್ನು ಆಗ ಗಮನಿಸದೇ ಇದ್ದವರು ಇಂದು ಈ ಮಸೂದೆಯ ಬಗ್ಗೆ ಅವರೆಲ್ಲರ ಅಭಿಪ್ರಾಯ ಕೇವಲ ಅವಶ್ಯಕವಾಗಿದೆಯೆಂದು ವಾದಿಸಿರುವುದು ಅಷ್ಟು ಸಮರ್ಪಕವಾದ ವಾದವೆಂದು ನಾನು ಭಾವಿಸಲಾರೆ. ನಾವು ಯಾವ ಮಸೂದೆಯನ್ನೇ ಪಾಸ್ ಮಾಡಲು ಅದು ದೇಶದಲ್ಲರತಕ್ಕ 70 ಲಕ್ಷ ಪ್ರಜೆಗಳಿಗೂ ಅನ್ವಯಿಸತಕ್ಕದ್ದಾಗೇ ಇರಬೇಕು. ಅದು ಎಲ್ಲರಿಗೂ ಅನ್ವಯಿಸೇ ಅನ್ವಯಿಸುತ್ತದೆ. ಹಿಂದೆ ಈ ಮಾನ್ಯ ಸ್ನೇಹಿತರು ಈ ರೀತಿಯಾಗಿ ಎಂದೂ ವಾದಿಸಿರಲಿಲ್ಲ. ಸ್ವಾಭಾವಿಕವಾಗಿ ಹೋರಿಗಳನ್ನು ಸಾಕುವ ವಿಧಾನ ಪ್ರತಿಯೊಬ್ಬರಿಗೂ ಗೊತ್ತೇ ಇದೆ. ಯಾವ ಕಾಲದಲ್ಲಿ ಅದರ ಬೀಜ ತೆಗೆಯಬೇಕು, ಅದರ ಆರೈಕೆ ಆಗ ಹೇಗೆ ನೋಡಿಕೊಳ್ಳಬೇಕು ಎಂಬ ವಿಚಾರಗಳೆಲ್ಲ ಗೊತ್ತಿವೆ. ಆದರೆ ಈ ಬಗ್ಗೆ ಇಷ್ಟೆಲ್ಲಾ ಗೊತ್ತಿರುವಾಗ್ಯೆ ಇಂಥಾ ಮಸೂದೆಯ ಆವಶ್ಯಕತೆಯೇ ಇಲ್ಲವೆನ್ನುವುದು ಅಥವಾ ಮಸೂದೆ ತರುವ ತರುವಾಯದಲ್ಲೇ ನಾವು ಇಷ್ಟೇ ಗೂಳಿಗಳನ್ನೇ ಇಡಲಾಗುತ್ತೆ, ಹೀಗೆ ಮಾಡಲಾಗುತ್ತೆ, ಹಾಗೆ ಮಾಡಲಾಗುತ್ತೆಂದು ಕಂಡಿಷನ್ ಹಾಕಿ ತಿಳಿಸಬೇಕೆಂದು ಕೇಳತಕ್ಕದ್ದಾಗಲೀ ಅಷ್ಟು ನ್ಯಾಯವಾದುದೆಂದು ಹೇಳುವುದಕ್ಕಾಗುವುದಿಲ್ಲ. ಪ್ರತಿಯೊಂದು ಕೆಲಸದಲ್ಲೂ ಅದಕ್ಕೆ ತಕ್ಕಷ್ಟು ಕಷ್ಟಗಳಿದ್ದೇ ಇರುತ್ತವೆ. ಅಲ್ಲದೆ ಕಾನೂನು ಮಾಡತಕ್ಕದ್ದರ ಮುಖ್ಯೋದ್ದೇಶ ಈ ಸಂಬಂಧವಾಗಿ ಯಾರು ಯಾರು ವ್ಯವಹಾರ ನಡೆಸು

ತ್ತಾರೋ ಅಂಥವರಿಗೋಸ್ಕರ ಮಾಡಲಾಗುತ್ತ ದೆಯೇ ಏನಾ, ಎಲ್ಲರಿಗೂ ಸಾರ್ವತ್ರಿಕವಾಗಿ ಅನ್ವಯಿ ಸುವಂತೆ ಮಾಡಬೇಕೆಂಬುದು ಈ ಮಸೂದೆಯ ಉದ್ದೇ ಶವಲ್ಲ. ಇದರಲ್ಲಿ ಅನೇಕ ಲೋಪದೋಷಗಳಿವೆ, ಆದುದರಿಂದ ಈ ಕಾನೂನೇ ಅನಾವಶ್ಯಕವೆಂದು ಹೇಳಿರುವ ವಾದದಲ್ಲಿ ಏನೂ ತಿರುಳಿಲ್ಲವೆಂದು ನಾನು ಹೇಳುತ್ತೇನೆ.

ಇನ್ನು ಮೂರನೆಯದಾಗಿ ಹಲವರಲ್ಲಿ ಇನ್ನು ಮುಂದಕ್ಕೆ ಹಳ್ಳಿಗಳಲ್ಲಿ ಈ ನಾಟೀ ಗೂಳಿಗಳು ಇರಲಿಕ್ಕೇ ಅವಕಾಶವಿರುವುದಿಲ್ಲವೆಂಬ ಒಂದು ಶಂಕೆ ಮೂಡಿರು ವ್ತಿದೆ. ನಾಟೀ ಗೂಳಿಗಳೇ ಇರಕೂಡದೆಂದೆಲ್ಲೂ ಹೇಳಿಲ್ಲ. ಆದರೆ ಅವುಗಳನ್ನು ಬೀಜದ ಕೋರಿಗಳಿಗೆ ಉಪಯೋಗಿಸಿದ್ದರೆ ಆ ಬಗ್ಗೆ ಲೈಸನ್ಸು ಪಡೆಯಬೇ ಕೆಂದೂ, ಅಥವಾ ಅಂಥ ಉಪಯೋಗಿಗಿಲ್ಲವೆಂದು ತೀ ರ್ಮಾನಮಾಡಿದ್ದರೆ, ಆಗ ಅದಕ್ಕೆ ಬೀಜ ಹೊಡೆಸಬೇ ಕೆಂದೂ ಇದರಲ್ಲಿ ತಿಳಿಸಲಾಗಿದೆಯೇ ಹೊರತು ನಾಟಿ ಗೂಳಿಗಳೇ ಇರಬಾರದೆಂದೆನೂ ಹೇಳಿಲ್ಲ.

ಇನ್ನು ಈ ಮಸೂದೆಯಲ್ಲಿ, ಹೋರಿ 2ಹಲ್ಲು ಹಾಕಿದ ಕೂಡಲೇ ರೈತನು ಅದನ್ನು ಪಶುವೈದ್ಯ ಇಲಾಖೆಯ ಅಧಿಕಾರಿ ಳ ಬಳಿಗೆ ಕರೆದುಕೊಂಡು ಹೋಗಬೇಕೆಂದು ತಿಳಿಸಲಾಗಿದೆ. ಆದರೆ ಹಾಗೆ ಮಾಡುವುದಕ್ಕೆ ಬದಲಾಗಿ ಆ ಪಶುವೈದ್ಯ ಇಲಾಖೆಯವರೇ ಆಯಾ ಸ್ಥಳಕ್ಕೆ ಆಗಿಂದಾಗ್ಗೆ ಭೇಟಿಕೊಟ್ಟು ಅವರೇ ಹೋಗಿ ಅದನ್ನೆಲ್ಲಾ ನೋಡಿಕೊಳ್ಳುವಂತೆ, ಆ ಜವಾಬ್ದಾರಿಯನ್ನು ಇಲಾಖೆಯವರಿಗೇ ವಹಿಸತಕ್ಕದ್ದು ಯುಕ್ತವಾದುದೆಂದು ನಾನು ಸಲಹೆಮಾಡುತ್ತೇನೆ. ಹೀಗೆ ಬೀಜದ ಗೂಳಿ ಗಳನ್ನೇ ಸಾಕತಕ್ಕವರ ಸಂಖ್ಯೆಯಾದರೂ ಕೇವಲ ನೂರಕ್ಕೆ 15ರಷ್ಟು ಗ್ರಾಮಗಳಲ್ಲದ್ದರೆ ಹೆಚ್ಚಾಯಿತು. ಇದನ್ನೇ ಇನ್ನೂ ಹೆಚ್ಚಿಸಬೇಕೆಂದು ನೂಚಿಸಿ ನಾನು ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ನಿಮ್ನ ಪಂಗಡ).—ಮಾನ್ಯ ಅಧ್ಯಕ್ಷರೇ, ಈ ಮಸೂದೆಯ ವಿಷಯದಲ್ಲಿ ಬಹಳ ವಿಪುಲವಾದ ಚರ್ಚೆಗಳಾಗಿವೆ. ಆದರೆ ಯಾವ ಚರ್ಚೆಯಲ್ಲೇ ಆಗಲೀ ಈ ಗೋಸಂಪತ್ತನ್ನು ಹೆಚ್ಚಿಸಬಾರದೆಂದು ಯಾರೂ ವಾದಿಸಿಲ್ಲ. ಹಾಗೆ ಉದ್ದೇಶಪಿದ್ದಂತೆ ಯಾರ ಭಾಷಣದಲ್ಲೂ ಕಂಡುಬರಲಿಲ್ಲ. ನಮ್ಮ ಮೈಸೂರು ದೇಶದಲ್ಲಿ ಈ ಗೋಸಂಪತ್ತನ್ನು ಅಭಿವೃದ್ಧಿಪಡಿಸಲು ಬಹುಕಾಲದಿಂದಲೂ ನಾವು ಒಂದು ವೈಶಿಷ್ಟ್ಯವನ್ನು ಕಾಪಾಡಿಕೊಂಡು ಬಂದಿದ್ದೇವೆ. ಇನ್ನುಮುಂದೆಯೂ ನಾವು ಇದನ್ನು ಕಾಪಾಡಿಕೊಂಡೇ ಬರಬೇಕು. ಹೀಗೆ ನಾವು ಒಂದು ವೈಶಿಷ್ಟ್ಯವಿಟ್ಟು ಕೊಂಡು ಬಂದಿದ್ದರಿಂದಲೇ ಇಡೀ ಭಾರತದಲ್ಲೇ ಮತ್ತೆ ಯಾವ ಪ್ರದೇಶದ ಜಾನುವಾರುಗಳಿಗೂ ದೊರೆಯದಿರುವಂಥ ಬಹುಮಾನ ನಮ್ಮ ಸಂಸ್ಥಾನಕ್ಕೆ ಲಭಿಸಲು ಅನುಕೂಲವಾಯಿತು. ದೆಹಲಿಯಲ್ಲಿ ನಡೆದ ಜಾನುವಾರುಗಳ ಪ್ರದರ್ಶನದಲ್ಲಿ ಕೂಡ ಪ್ರಥಮ ಬಹುಮಾನ ನಮ್ಮ ದೇಶದ ಜಾನುವಾರುಗಳಿಗೆ ಬಂದಿದೆ. ಆಂದಮೇಲೆ ನಮ್ಮ ವೈಶಿಷ್ಟ್ಯ ಎಂತಹದಾಗಿದೆಯೆಂಬುದು ಈ ಒಂದರಿಂದಲೇ ಎದ್ದುಕಾಣುತ್ತಿದೆ. ಆದರೆ ನಾನು ಹೇಳುತ್ತಿರುವುದು ಈ ಮಸೂದೆಯಲ್ಲಿ ದೋಷಗಳೇ ಇಲ್ಲವೆಂದೇನೂ ಅಲ್ಲ. ಕೆಲವು ಅಲ್ಪಸ್ವಲ್ಪ ನ್ಯೂನತೆಗಳಿರಬಹುದು. ಅಂಥ ಕೆಲವು ದೋಷದೋಷ ಗಳಿದ್ದ ಕಾರಣಕ್ಕಾಗಿಯೇ ಇದನ್ನು ದೇಶದಲ್ಲಿ ಜಾರಿಗೆ ತಂದರೆ ಆದರಿಂದ ಜನರಿಗೆ ಹೆಚ್ಚಿನ ತೊಂದರೆಯಾಗು ತ್ತದೆ, ಆದ್ದರಿಂದ ಇದನ್ನು ಜಾರಿಗೆ ತರುವುದೇ ಬೇಡ ವೆಂದು ವಾದಿಸುವುದು ಸರಿಯಲ್ಲ. ನಮ್ಮಲ್ಲಿರತಕ್ಕ ಗಿಡ್ಡರಾಸಿನ ಬೆಲೆ ಕೇವಲ ಹೆಚ್ಚೆಂದರೆ 50—60 ರೂಪಾಯಿಗಳಾಗಬಹುದು. ಆದರೆ ಸರಿಯಾದ ಜಾನು ವಾರುಗಳನ್ನು ಬೆಳಸಿದರೆ ಒಂದೊಂದು ಜೊತೆ ಜಾನು ವಾರುಗಳ ಬೆಲೆ ಸುಮಾರು 10 ಸಾವಿರದವರೆಗೂ ದೊರೆಯುವ ಅವಕಾಶವಿದೆ. ಈಗಲೂ ಅಂಥ ಬೆಲೆ ಯಾದ ಜಾನುವಾರುಗಳಿವೆ ನಮ್ಮ ಸಂಸ್ಥಾನದಲ್ಲಿ.

ಕೆಲವು ಸದಸ್ಯರು.—ಅಂಥ 10 ಸಾವಿರ ರೂಪಾಯಿ ಬೆಲೆ ಬಾಳುವಂಥ ಜಾನುವಾರುಗಳು ಎಲ್ಲಿವೆ!

ಶ್ರೀ ಟಿ. ಹನುಮಯ್ಯನವರು.—ನಮ್ಮ ಮೈಸೂರು ಸಂಸ್ಥಾನದಲ್ಲೇ ಇವೆ. ನಮ್ಮ ದೇಶದ ಸಂಪತ್ತು ಹೆಚ್ಚಬೇಕಾಗಿದ್ದರೆ, ಈ ಗೋಸಂಪತ್ತು ಮೊದಲು ಹೆಚ್ಚಬೇಕು. ಆದು ಹೆಚ್ಚಾದ ಏನಾ ದೇಶದ ಸಂಪತ್ತು ಖಂಡಿತ ಹೆಚ್ಚಲಾರದು. ರೈತನು ಒಳ್ಳೆಯ ತಳಿಗಳನ್ನು ಹೊಂದುವಂತೆ ಮಾಡಿದರೆ 50—10 0 ರೂಪಾಯಿಗಳ ಬೆಲೆ ಬರುವುದಕ್ಕೆ ಬದಲಾಗಿ ಅದೇ ಜಾನುವಾರುಗಳಿಗೆ ಸಾವಿರಾರು ರೂಪಾಯಿ ಬೆಲೆ ದೊರೆಯಲು ಅವಕಾಶ ಉಂಟಾಗುತ್ತದೆ. ಇದಕ್ಕಾಗಿ ಒಳ್ಳೆ ಬೀಜದ ಹೋರಿಗಳನ್ನು ಸಾಕುವ ಮತ್ತು ಅಭಿ ವೃದ್ಧಿ ಮಾಡುವ ಅವಶ್ಯಕತೆ ನಮಗೆ ಅಧಿಕವಾಗಿದೆ. ಕೇವಲ 5–10 ರೂಪಾಯಿಗಳ ಖರ್ಚಿನಲ್ಲಿ ಒಳ್ಳೆ ಬೀಜದ ಹೋರಿಗಳಿರುವ ಸ್ಥಳಕ್ಕೆ ಹೋಗಿ ಆಕಳುಗಳಿಗೆ ಅಂಥ ಬೀಜದ ಹೋರಿಗಳಿಂದ ಹಾರಿಸಿಕೊಂಡು ಬಂದು ಒಳ್ಳೆ ಕರುಗಳನ್ನು ಪಡೆದು ಹೆಚ್ಚು ಲಾಭ ಹೊಂದಲು ಇದರಿಂದ ತುಂಬಾ ಅನುಕೂಲವಿದೆ. ಕಾನೂನಿ ನಲ್ಲಿ ಸಾಧಕ ಬಾಧಕಗಳೆರಡೂ ಇವೆ ಇದರಿಂದ ಉಂಟಾಗುವ ಬಾಧಕಗಳಿಗಿಂತ ಸಾಧಕವೇ ರೈತರಿಗೆ ಅಧಿಕವಾಗಿರುತ್ತೆಂದು ಮಾನ್ಯ ಮಂತ್ರಿಗಳು ಇದನ್ನು ದೀರ್ಘವಾಗಿ ಆಲೋಚಿಸಿ ಈಗ ಈ ಮಸೂದೆಯನ್ನು ಸಭೆಯ ಮುಂದೆ ತಂದಿದ್ದಾರೆ. ಹಾಗೆ ಈ ಮಸೂದೆ ಯಲ್ಲಿರುವ ಲೋಪದೋಷಗಳನ್ನೆಲ್ಲಾ ಮಾನ್ಯ ಸದಸ್ಯರು ಸೂಚಿಸಿದಂತೆ, ಈ ಮಸೂದೆ ಸೆಲೆಕ್ಟ್ ಸಮಿತಿಯವರ ಮುಂದೆ ಹೋದಾಗ ಪರಿಶೀಲನೆಯಾಗುತ್ತದೆ. ಆದ್ದ ರಿಂದ ಇದನ್ನು ಕೂಡಲೆ ಸೆಲೆಕ್ಟ್ ಸಮಿತಿಗೆ ಹಾಕಬೇ ಕೆಂದು ಒತ್ತಾಯಪಡಿಸುತ್ತಾ, ನಾನು ಈ ಮಸೂ ದೆಗೆ ಬೆಂಬಲ ನೀಡುತ್ತೇನೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—ಮಾನ್ಯ ಅಧ್ಯಕ್ಷರೇ, ಈವ ಮಸೂದಾ ಕಾನೂ ನಿನ ಮೇರೆ ಇಷ್ಟೊಂದು ಚರ್ಚೆಯಾಗುತ್ತದೆಂದು ನಾನು ತಿಳಿದಿರಲಿಲ್ಲ. ಆದರೆ ಈ ಕಾನೂನಿನ ಚರ್ಚೆಯ ನೆಪ ದಲ್ಲಿ ಅನೇಕ ವಿಷಯಗಳನ್ನು ಸದಸ್ಯರು ಪ್ರತಿಪಾದಿ ಸಿದ್ದಾರೆ. ನಮ್ಮ ದೇಶದ ಗೋಸಂಪತ್ತಿನ ಬಗ್ಗೆ ಸರ್ಕಾರದವರು ಏನೇನು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ, ಸಂಸ್ಥಾನದಲ್ಲಿ ಎಷ್ಟೆಷ್ಟು ಬೀಜದ ಹೋರಿಗಳನ್ನಿಟ್ಟಿದ್ದಾರೆ, ನಮ್ಮ ದೇಶದಿಂದ ಈ ಸಂಬಂಧವಾಗಿ ಪ್ರತಿವರ್ಷವೂ ಎರಡು ಕೋಟಿ ರೂಪಾ ಯಿಗಳು ಹೊರಗಡೆ ಹೋಗುತ್ತಿದೆ, ಎಂದು ಅನೇಕ ಇತ್ಯಾದಿ ವಿರೋಧಾಭಾಸವಾದ ಅಭಿಪ್ರಾಯಗಳ ನ್ನೆಲ್ಲಾ ಸೇರಿಸಿ ಚರ್ಚೆಮಾಡಿದ್ದಾರೆ.

ಇದರ ಉದ್ದೇಶವಿದ್ದುದು ಒಂದೇ ಒಂದು. ಒಂದು ಖಂಡಿತ ಹಾಗೆ ಒಂದು ತೊಟ್ಟು ಹೆಪ್ಪುಹಾಕುವ ಹಾಗೆ ಆಗಬಾರದು, ಅನೇಕ ವರ್ಷಗಳಿಂದ ಬೆಳೆಸಿದ ತಳಿ ಹಾಳಾಗಬಾರದು, ಒಂದು ಗಿಡ್ಡ ಹೋರಿ ಅವ ನ್ನೆಲ್ಲಾ ಹಾಳುಮಾಡೀತು, ಹಾಗೆ ಆಗಬಾರದು, ಗಿಡ್ಡ ದಿಂದ ಕರು ಇಳಿದರೆ ರೂಪಾಯಿ ಪ್ರಯೋಜನವಾಗು ವುದಿಲ್ಲ. ಆದ್ದರಿಂದ ಅಂಥ ಗಿಡ್ಡ ಹೋರಿಗಳಿಗೆ ಬೀಜ ಒಡೆದರೆ ಏನೂ ತೊಂದರೆಯಿಲ್ಲ ಎಂಬ ಅಭಿಪ್ರಾಯ.

(ಮಾನ್ಯ ಶ್ರೀ ಟಿ. ಮರಿಯಪ್ಪನವರು.)

ಪ್ರಾಯಶಃ ಇದು ತಳಿಯು ಅಭಿವೃದ್ಧಿಗೆ ಕಾರಣವಾದ ಮನೂದಯಾದ್ದರಿಂದ ಎಲ್ಲಾ ವಿಷಯವನ್ನೂ ಚರ್ಚಿಸಿರಬಹುದು. ಆದರೆ ಇದರ ಉದ್ದೇಶ ನೋಡುವುದಾದರೆ, ಕಾನೂನಿನ ಕಲಮುಗಳನ್ನು ನೋಡುವುದಾದರೆ ಒಂದು ಒಳ್ಳೆಯ ಉದ್ದೇಶವಿದೆ. ಶಕ್ತಿಯಿರುವ ತಳಿಯದ್ದು ಅದನ್ನು ಚೆನ್ನಾಗಿ ಸಾಕಿದರೆ ಎಷ್ಟೋ ಅನುಕೂಲವಿದೆಯೆಂದು ಶ್ರೀ ಕೃಷ್ಣಪ್ಪನವರು ಹೇಳಿದರು. Even one scrub bull can do a lot of mischief. ಮೈಸೂರು ವೆಟರ್ನರಿ ಇಲಾಖೆಯವರ ಸ್ಯಾಂಪರ್ ನರ್ವೆಯಿಂದಲೂ/ ಕೂಡ ಇದು ವ್ಯಕ್ತವಾಗಿದೆ. ನಮ್ಮ ಜನರ ಆಸಕ್ತಿಯಿಂದ ಹೆಚ್ಚು ಚರ್ಚೆಯಾಗಿ ವಿರೋಧಾಭಾಸವಾಗಿದೆ. ದೇಶದಲ್ಲಿ ಕೆಲವು ರೈತರು, ಬಹಳಕಡೆ ಒಳ್ಳೆಯ ತಳಿಯನ್ನೇ ಇಟ್ಟು ಕೊಂಡಿದ್ದಾರೆಂದೂ ಹೇಳುತ್ತಾರೆ. ಅದಕ್ಕೆ ಇಷ್ಟು ಹೇಳಬಹುದು: ಹಳ್ಳಿಕಾರು, ಅಮೃತಮಹಲ್ ಮುಂತಾದ ಪ್ರಸಿದ್ಧವಾದ ದನಗಳಿಗೆ ತೊಂದರೆಯಾಗಬಹುದು, ಮೈಸೂರಿನಾಡಿನಲ್ಲಿ ಅವಕ್ಕೆ ಏಳಿಗೆಯಿಲ್ಲ ಎಂದು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ. ವೆಟರ್ನರಿ ಇಲಾಖೆಯು ದನಗಳಿಗೆ ತೊಂದರೆ ಬಾರದಂತೆ ನೋಡಿಕೊಳ್ಳುವುದಕ್ಕಾಗಿಯೇ ಇರುವುದು. ಎಷ್ಟೋ ಜನರಿಗೆ ತಿಳಿವಳಿಕೆಯಿಲ್ಲದೆ ತಪ್ಪುದಾರಿಗೆ ಹೋಗುತ್ತಾರೆಂದು ಹೇಳಿರುತ್ತಾರೆ. ಆದರೆ ನಾವು ಗೋಸಂಪತ್ತು ಅಭಿವೃದ್ಧಿಯಾಗಬೇಕೆಂಬ ನೀತಿಯನ್ನು ಮಾತ್ರ ಈಗ ಅನುಸರಿಸಬೇಕೆಂದು ಹೇಳುತ್ತಿದ್ದೇವೆಯೇ ಹೊರತು ಮತ್ತೆ ಬೇರೆ ಅಲ್ಲ. ಯಾವುದಾದರೂ ಒಂದು ಉಚಿತ ಮಾರ್ಗವಾಗಬೇಕು. ಇಲಾಖೆ ಇರಬೇಕು ಅಥವಾ ಬೇಡ ಎಂಬುದು ಧೃಢಪಡಬೇಕು. ಜನರ ಅಭಿಪ್ರಾಯದಂತೆ ಇದುವರೆಗೆ ಅನೇಕ ಕಡೆಗೆ ವೆಟರ್ನರಿ ಆಸ್ಪತ್ರೆಗಳನ್ನು ಕೊಟ್ಟಿದೆ. ನಮ್ಮ ಊರಿಗೆ ಆಸ್ಪತ್ರೆ ಕೊಡಿ, ಮುಷ್ಠಾಗಿ ಕಟ್ಟಡ ಕೊಡುತ್ತೇವೆ, ಸಲಕರಣೆಗಳನ್ನು ಒದಗಿಸುತ್ತೇವೆ ಎಂಬ ಕೇಳಿಕೆಗಳು ಹೆಚ್ಚು ಅವನ್ನು ಸುಧಾರಿಸುವುದು ಕಷ್ಟವಾಗಿಡೆ. ಯಾವ ಪ್ರಾಂತ್ಯಕ್ಕೆ ಹೋಗಿ ನೋಡಿದರೂ ವೆಟರ್ನರಿ ಆಸ್ಪತ್ರೆಯಿದೆ. ಪ್ರತಿವರ್ಷವೂ ಅದರಂತೆ ಕೊಡುತ್ತಿದ್ದ ಆಸ್ಪತ್ರೆಗಳನ್ನು ಈಗ ಒಂಭತ್ತಕ್ಕೆ ಹೆಚ್ಚಿನಬೇಕಾಗಿದೆ. ಬಹುಶಃ ಮುಂದೆ ಇನ್ನೂ ಜಾಸ್ತಿಯಾಗಬಹುದು. ಎಲ್ಲಿ ನೋಡಿದರೂ ಒಂದೆರಡು ಆಸ್ಪತ್ರೆಗಳಿಲ್ಲದ ತಾಲ್ಲೂಕೇ ಇಲ್ಲ. ನಮ್ಮ ದೇಶದಲ್ಲಿ ಅಷ್ಟು ಆಸ್ಪತ್ರೆಗಳಿವೆ. ನಮ್ಮ ನುತ್ತ ಇರುವ ಬಾಕಿ ಪ್ರಾಂತಗಳಿಗಿಂತ ನಮ್ಮ ಸಂಸ್ಥಾನದಲ್ಲಿ ಈ ಆಸ್ಪತ್ರೆಗಳು ಹೆಚ್ಚಾಗಿವೆ. ಇಷ್ಟು ಜಾಸ್ತಿಯಾಗಿದ್ದರೂ ಕೂಡ ಇನ್ನೂ ಬೇಕೆಂದು ಜನರು ಹೇಳುತ್ತಿರುವಾಗ ಅವುಗಳಿಂದ ಪ್ರಯೋಜನವಿದೆಯೇ ಇಲ್ಲವೇ ಎಂಬುದನ್ನು ಮಾನ್ಯ ಸದಸ್ಯರೇ ಯೋಚನೆ ಮಾಡಬೇಕಾಗಿದೆ. ರೈತರು ಇದನ್ನು ಜಾಗ್ರತೆ ಒಪ್ಪದಿರಬಹುದು. ಆದರೂ ಅವರು ಬುದ್ಧಿವಂತರು. ಹಳ್ಳಿಕಾರ ದನಗಳನ್ನು ಸಾಕುವುದರಲ್ಲಿ ಹೆಸರುವಾಸಿಯಾಗಿದ್ದಾರೆ. ಎರಡು ಕೋಟಿ ರೂಪಾಯಿ ನಮಗೆ ಹೊರಗಿನಿಂದ ಬರಬೇಕಾದರೆ ಶಾಸ್ತ್ರೀಯವಾದ ಅನುಭವ ಮತ್ತು ತಿಳಿವಳಿಕೆ ನಮ್ಮವರಿಗೆ ಇದ್ದೇ ಇರಬೇಕು. ಹಾಗಿರುವಾಗ ಈ ಮನೂದೆಯಿಂದ ಹೀಗಾಗುತ್ತದೆ, ಹಾಗಾಗುತ್ತದೆ ಎಂದು ಭಯಪಡಬೇಕಾಗಿಲ್ಲ. ಈಗಾಗಲೇ ಅನೇಕ ರೈತರು ಮತ್ತು ಮಹನೀಯರು ಹಳ್ಳಿಕಾರ ದನ, ಅಮೃತಮಹಲ್ ದನ ಮತ್ತು ಮಲೆನಾಡು ಗಿಡ್ಡಗಳನ್ನು ಚೆನ್ನಾಗಿ ಸಾಕುತ್ತಿದ್ದುದಕ್ಕೆ ಸ್ವಲ್ಪ ಧಕ್ಕೆ ಬಂದಿದೆ. ಇತ್ತೀಚೆಗೆ ಸ್ವಲ್ಪ ಬೆರಕೆಯಾಗುತ್ತಿದೆ. ಹಳ್ಳಿಕಾರ ದನಗಳ ತಳಿ ಬಹಳ ಯಶಸ್ವಿಯಾಗಿದೆ. ಬಹು ಭಾಗ ಹಳ್ಳಿಕಾರ ರಾಸುಗಳಾಗಿವೆ. ಆದರೆ ಗಿಡ್ಡ ಹೋರಿಗಳ ದೆಶೆಯಿಂದ ಸ್ವಲ್ಪ ಉತ್ತಮ ತಳಿಯು ಕ್ಷೀಣಿಸಿದೆ. ಅದಕ್ಕೆ ಅವಕಾಶವಿರಬಾರದು. ಅಮೃತ ಮಹಲ್ ದನಗಳು ಅಜ್ಜಂಪುರದಲ್ಲಿ ಕಡಮೆಯಾಗಿರುವುದಕ್ಕೆ ಸರ್ಕಾರದವರು ಜವಾಬ್ದಾರರಲ್ಲ. 1941 ರಿಂದ ಅಲ್ಲಿ ಎಷ್ಟು ರಾಸು ಕಡಮೆಯಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಎಷ್ಟು ಮಟ್ಟಿಗೆ ತಳಿ ಅಭಿವೃದ್ಧಿಯಾಗಿದೆಯೆಂಬುದಕ್ಕೆ, ಶಾಸ್ತ್ರೀಯವಾಗಿ ನಡೆದಿರುವುದಕ್ಕೆ ಲೆಕ್ಕವಿದ್ದರೆ ಏನಾದರೂ ಮಾಡಬಹುದಾಗಿತ್ತು. ಅದೂ ಅಲ್ಲದೆ ಬ್ರೀಡಿಂಗ್ ಬಹಳ ನಿಧಾನ. ಒಂದು ಹತ್ತು ವರ್ಷದಲ್ಲಿ ಆಗುವುದಿಲ್ಲ. ಅದಕ್ಕೆ ಹೆಚ್ಚು ಕಾಲಾವಧಿ ಬೇಕು. ಸರಿಯಾದ ತಳಿ ಅಭಿವೃದ್ಧಿಯಾಗಬೇಕಾದರೆ ಗಿಡ್ಡ ಹೋರಿಗಳ ತೊಂದರೆ ತಪ್ಪಬೇಕು. ಎಲ್ಲಿ ಮೊದಲು ರೈತರು ಇಷ್ಟಪಡುತ್ತಾರೋ ಆ ಕಡೆ ಕಾನೂನು ಮೊದಲು ಅನ್ವಯಿಸುವುದಕ್ಕೆ ಅವಕಾಶ ಮಾಡಿದ್ದೇವೆ. ಈ ಕಾನೂನನ್ನು ವೆಟರ್ನರಿ ಅಧಿಕಾರಿಗಳ ಕೈಗೆ ಕೊಟ್ಟು ಜನರಿಗೆ ಹಿಂಸೆ ಮಾಡಬೇಕೆಂಬ ಉದ್ದೇಶವಿಲ್ಲ. ಪ್ರಜಾಸರ್ಕಾರ ಬಂದಿರುವಾಗ ನಾವು ಪ್ರಜೆಗಳಿಗೆ ತೊಂದರೆ ಮಾಡಿದರೆ ನಮ್ಮನ್ನು ತೆಗೆಯುವುದಕ್ಕೆ ಎಲ್ಲರಿಗೂ ಅಧಿಕಾರವಿದೆ. ಈ ವಿಚಾರದಲ್ಲಿ ಜನರಿಂದ ಒತ್ತಾಯ ಬಂದಿಲ್ಲವೆಂದು ಹೇಳುವುದರಲ್ಲಿ ಅರ್ಥವಿಲ್ಲ. ಅನೇಕರು ಇದು ಬಂದರೆ ಸಾಕೆಂದು ನಿರೀಕ್ಷಿಸುತ್ತಿದ್ದಾರೆ. ಈ ಬಗ್ಗೆ ಭಾರತ ಸಂಶೋಧನ ಶಾಖೆಯವರು ಅಖಿಲ ಭಾರತ ದನಗಳ ಪ್ರದರ್ಶನವಲ್ಲಿ ಒಂದು ನಿರ್ಣಯಮಾಡಿ ಕಳುಹಿಸಿದ್ದಾರೆ. ಇದುವರೆಗೆ ಎಷ್ಟು ಗಿಡ್ಡಹೋರಿಗಳ ಬೀಜ ಒಡೆದಿದೆಯೆಂಬುದಕ್ಕೆ ಅಂಕಿ ಅಂಶಗಳನ್ನು ಬೇಕಾದರೆ ಕೊಡಬಹುದು. ಅದು ಒಂದು ಸಾವಿರ ಆಗಿದ್ದರೆ ಗಮನಿಸಬೇಕಾಗಿರಲಿಲ್ಲ. ಜನರಿಗೆ ಈ ವಿಚಾರದಲ್ಲಿ ಎಷ್ಟು ತೀವ್ರಾಸಕ್ತಿಯಿದೆಯೆಂದು ನೋಡಿದರೆ ಆಫೀಸರು ಸಂಚಾರ ಹೋದಾಗ ಅವರನ್ನು ಕರೆದುಕೊಂಡು ಹೋಗಿ ಮಾಡಿರುವ ಅಂಕಿ ಅಂಶಗಳನ್ನು ಕೊಡಬಹುದು. 1944–45 ರಲ್ಲಿ 81,161, 1945–46 ರಲ್ಲಿ 64,399, 1946–47 ರಲ್ಲಿ 86,641, 1947–48 ರಲ್ಲಿ 99,495, 1948–49 ರಲ್ಲಿ 1,04,727 ಹೋರಿಗಳಿಗೆ ಬೀಜ ಒಡೆದಿರುತ್ತೆ. ಇಷ್ಟು ಗಿಡ್ಡ ಹೋರಿಗಳಿಗೆ ಬೀಜ ಒಡೆದಿದೆ. ಜನರು ವೆಟರ್ನರಿ ಆಫೀಸರುಗಳನ್ನು ಕರೆದು ಕೊಂಡು ಹೋಗಿ 1948–49 ರಲ್ಲಿ ಒಂದು ಲಕ್ಷ ಚಿಲ್ಲರೆ ಗಿಡ್ಡ ಹೋರಿಗಳಿಗೆ ಬೀಜ ಒಡಿಸಿದ್ದಾರೆಂದರೆ ಅದು ಜನಪ್ರಿಯವಾಗಿವೆಯೆಂದು ಧಾರಾಳವಾಗಿ ಹೇಳಬಹುದು, ಅದರಲ್ಲಿ ಸಂದೇಹವಿಲ್ಲ. ಇದರ ಜೊತೆಗೆ ಅಖಿಲ ಭಾರತ ವ್ಯವಸಾಯ ಸಂಶೋಧನೆಯ ಕೌನ್ಸಿಲ್ಲಿನವರೂ ಕೂಡ ಇದನ್ನು ಶಿಫಾರ್ಸು ಮಾಡಿದ್ದಾರೆ. ಇದು ಯನೈಟೆಡ್ ಪ್ರಾವಿನ್ಸ್, ಮದ್ರಾನು ಬೊಂಬಾಯಿಗಳಲ್ಲಿ ಜಾರಿಯಲ್ಲಿವೆ. 1940 ರಲ್ಲೇ ಮದರಾಸಿನಲ್ಲಿ ಜಾರಿಗೆ ಬಂತು. ಇದರಿಂದ ಯಾವ ವಿಧವಾದ ಕಿರುಕುಳವೂ ಕಂಡು ಬಂದಿಲ್ಲ. ಒಂದುವೇಳೆ ಆ ರೀತಿ ಕಿರುಕುಳ ಬಂದರೆ ಅದರ ನಿವಾರಣೆಗೆ ಸೂಕ್ತ ಅವಕಾಶವನ್ನು ಮಾಡುತ್ತೇವೆ. ಕಿರುಕುಳ ಕೊಡ ಬೇಕೆಂಬ ಉದ್ದೇಶವಿಲ್ಲ. ಜನರಿಗೆ ತೊಂದರೆ ಮಾಡಬೇಕೆಂದು ಸರ್ಕಾರಕ್ಕೆ ಆಸಯಿಲ್ಲ. ರೈತರು ಎಷ್ಟೋ ಕಷ್ಟಪಟ್ಟು ಶತಮಾನದಿಂದ ಅಭಿವೃದ್ಧಿ ಪಡಿಸಿರುವ ತಳಿಯು ಅಜಾಗರೂಕತೆಯಿಂದ ಕೆಟ್ಟು ಹೋಗಬಾರದೆಂಬುದೇ ಸರ್ಕಾರದ ಆಶಯ. ಏಕೆಂದರೆ ಒಂದೆರಡು ವರ್ಷದಲ್ಲಿ ಇದು ಆಗತಕ್ಕ ಕೆಲಸವಲ್ಲ, ಇದು ನಿದಾನ,

ಒಳ್ಳೆಯ ತಳಿ ಬರಬೇಕಾದರೆ ನಿಧಾನ, ಹಾಗೆ ಬಂದಿರುವುದನ್ನು ಗಿಡ್ಡ ಹೋರಿಗಳು, ಕೆಲಸಕ್ಕೆ ಬಾರದ ಹೋರಿಗಳು ಕೆದಿಸಿ ತಳಿಯನ್ನು ನಷ್ಟಪಡಿಸಿದರೆ ಅದರಿಂದ ಎಷ್ಟು ಕೆಟ್ಟದ್ದು ಎಂಬುದನ್ನು ಯೋಚನೆ ಮಾಡಬೇಕು.

ಇದೇ ಸಂದರ್ಭದಲ್ಲಿ ಒಂದು ವಿಚಾರವನ್ನು ಹೇಳುತ್ತೇನೆ. ನಮ್ಮ ಗೋ ಸಂಪತ್ತನ್ನು ಅಭಿವೃದ್ಧಿ ಮಾಡುವ ವಿಚಾರವನ್ನೂ ಇದೇ ಸಂದರ್ಭದಲ್ಲೇ ಚರ್ಚೆ ಮಾಡಿದರೆ ಅದಕ್ಕೆ ಉತ್ತರ ಕೊಡುವುದು ಕಷ್ಟ ಮತ್ತು ಕಾಲ ವ್ಯಯವಾಗುತ್ತದೆ. ಈ ವಿಚಾರವನ್ನು ಬೇರೆ ಸಂದರ್ಭದಲ್ಲಿ ಚರ್ಚೆ ಮಾಡಬಹುದು. ಅದಕ್ಕೆ ಅವಕಾಶ ಏದೆ; ಆಗ ಮಾನ್ಯ ಸದಸ್ಯರು ಎಲ್ಲ ಸಲಹೆಗಳನ್ನೂ ಕೊಡಬಹುದು. ಅದನ್ನು ತೆಗೆದುಕೊಳ್ಳಲು ಸರ್ಕಾರದವರು ತಯಾರಾಗಿದ್ದಾರೆ. ಈಗಾಗಲೇ ತಳಿಗಳ ಅಭಿವೃದ್ಧಿಗಾಗಿ ಸರ್ಕಾರದವರು ಅಜ್ಜಂಪುರದಲ್ಲಿ ಒಂದು ಕ್ಯಾಟಲ್ ಬ್ರೀಡಿಂಗ್ ಸ್ಟೇಷನ್ ಇಟ್ಟಿದ್ದಾರೆ, ಹೆಸರುಘಟ್ಟದಲ್ಲಿ ಒಂದು ಏರ್ಪಾಡಾಗಿದೆ. ಆದರೆ ಎಲ್ಲವನ್ನೂ ಸರ್ಕಾರದವರೇ ಮಾಡಬೇಕೆಂದು ಯಾರೂ ಪ್ರತಿಪಾದಿಸುವುದಿಲ್ಲ. ಹಾಗೆ ಸರ್ಕಾರದವರೇ ಮಾಡುವುದಕ್ಕೆ ಎಷ್ಟೋ ಕೊಂದರೆಗಳಿವೆ. ಅದೃಷ್ಟವಶಾತ್ ರೈತರೂ ಸ್ವಲ್ಪ ಸ್ವಲ್ಪವಾಗಿ ಈ ಕಾರ್ಯವನ್ನು ತಾವೇ ಮಾಡಿ ಅಭಿವೃದ್ಧಿ ಮಾಡುತ್ತಿದ್ದಾರೆ, ಎಷ್ಟೋ ಜನರು ಬಹಳ ಉತ್ಕೃಷ್ಟವಾದ ಕರುಗಳನ್ನು ಸಾಕುತ್ತಿದ್ದಾರೆ. ಒಳ್ಳೆಯ ಬೀಜದ ಹೋರಿಗಳನ್ನು ಪ್ರದರ್ಶನಗಳಿಗಿಟ್ಟು ಬಹುಮಾನಗಳನ್ನು ಪಡೆಯುತ್ತಿದ್ದಾರೆ. ವಂಶಪಾರಂಪರ್ಯವಾಗಿ ನಮ್ಮ ರೈತರಲ್ಲಿರುವ ಈ ಜ್ಞಾನವನ್ನು ಇನ್ನೂ ಕಾರ್ಯತಃ ಅಭಿವೃದ್ಧಿ ಮಾಡಬೇಕು. ಅವರಿಗೆ ಹಾಗೆ ಮಾಡಲು ಸರ್ಕಾರದವರು ಸಹಾಯಮಾಡಬೇಕು. ಖಾನಗೀ ವೈದ್ಯ ಸಹಾಯ ಮತ್ತು ವೆಟರಿನರಿ ಇಲಾಖೆಯಿಂದ ವೈದ್ಯ ಸಹಾಯ ಕೊಡಬಹುದು. ವೆಟೆರಿನೆರಿ ಇಲಾಖೆಯವರಿಗಿಂತ ಚೆನ್ನಾಗಿಯೇ ತಿಳಿದುಕೊಂಡಿರುವ ಖಾನಗೀ ವೈದ್ಯರೂ ಇರಬಹುದು. ಆದರೆ ಎಲ್ಲೋ ಒಬ್ಬಬ್ಬರು ಅಪ್ಪಿತಪ್ಪಿ ಚೆನ್ನಾಗಿ ಕೆಲಸಮಾಡದಿದ್ದ ಮಾತ್ರಕ್ಕೇ ವೆಟೆರಿನೆರಿ ಇಲಾಖೆಯನ್ನೇ ತೆಗೆಯ ಬೇಕೆಂದು ಹೇಳುವುದು ಸರಿಯಿಲ್ಲ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಯಾರೂ ಹಾಗೆ ಹೇಳಲಿಲ್ಲ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವರು ಆ ಇಲಾಖೆಯವರಿಗೆ ಏನೂ ತಿಳಿಯುವುದಿಲ್ಲವೆಂದು ಹೇಳಿದರು.

ಗೋಸಂಪತ್ತನ್ನು ಅಭಿವೃದ್ಧಿ ಮಾಡುವವಿಷಯವನ್ನು ಬೇರೆ ಚರ್ಚೆಮಾಡೋಣ. ಆದರೆ ಈಗ scrub bulls ಇರಬೇಕೇ ಬೇಡವೇ ಎಂಬುದನ್ನು ನಾವು ಯೋಚನೆ ಮಾಡಬೇಕು. ಯಾರಿಗೂ ತೊಂದರೆಯಾಗದೇಯಿರುವ ಹಾಗೆ ರಕ್ಷಣೆಗಳನ್ನು ಇಟ್ಟುಕೊಳ್ಳೋಣ, ರೈತರಿಗೆ ಕಿರುಕುಳಕೊಡಬಾರದು. ಇಲಾಖೆಯ ಅಧಿಕಾರಿಗಳೇ ಹೋಗಿ ಎಲ್ಲೆಲ್ಲ ಒಳ್ಳೆಯ ಹೋರಿಗಳಿವೆ ಎಂಬುದನ್ನೂ ತಿಳಿದು ಕೊಂಡು ಬಂದು ರೈತರಿಗೆ ಹೇಳಲಿ. ಆದರೆ ಹಳ್ಳಿಗಳಲ್ಲಿ scrub bulls ಇಲ್ಲವೇ ಇಲ್ಲವೆಂದು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ. ನಮಾರು ಒಂದು ಲಕ್ಷ ಚಿಲ್ಲರೆಯಷ್ಟು scrub bulls ನ್ನು castrate ಮಾಡಬೇಕಾಗಿದೆ ಎಂದರೆ ಎಷ್ಟು ಕಷ್ಟವಾಗುತ್ತದೆಯೆಂಬುದನ್ನು ಯೋಚಿಸಬೇಕು! ಒಂದು ಕಡೆ ಎಲ್ಲೋ ಎರಡು ಕೆಟ್ಟ ಹೋರಿಗರುಗಳಿರಬಹುದು. ಅಷ್ಟುಗಮನಿಸದೆ ಹಳ್ಳಿಯವರು ತಮ್ಮ ದನಗಳನ್ನೆಲ್ಲಾ ಒಟ್ಟಿಗೆ ಮೇಯುವುದಕ್ಕೆ ಹೊಡೆಯುತ್ತಾರೆ. ಆದರಲ್ಲಿಯೂ ಬೇಸಿಗೆಯಲ್ಲಿ ಇದು ನರ್ವೇ ಸಾಮಾನ್ಯ. ಆಗ ಈ ಹೋರಿಗಳು ಕ್ಯಾನ್ ಮಾಡಿ ಅದರಿಂದ ತಳಿಗಳು ಕೆಟ್ಟು ಹೋಗುತ್ತವೆ. ನನಗೆ ಈಗ ಒಂದು ವಿಷಯದಲ್ಲಿ ಆಶ್ಚರ್ಯವಾಗುತ್ತಿದೆ. ಶ್ರೀಮಾನ್ ಹುಚ್ಚೇಗೌಡರಂತಹ ಒಳ್ಳೆಯ ಅನುಭವವಿರುವವರು ಎಷ್ಟೋ ಒಳ್ಳೆಯ ಸಲಹೆಗಳನ್ನು ಕೊಡಬಹುದು. ಏಕೋಕೊಡುತ್ತಿಲ್ಲ. ಅವರು ಎಷ್ಟೋ ಸಾರಿ ನಮ್ಮ ದೇಶದಲ್ಲಿ ಒಳ್ಳೆಯ ಹೋರಿಗಳನ್ನಿಟ್ಟು ಕೊಳ್ಳಬೇಕೆಂದು ಪಾಠಿಸಿದ್ದಾರೆ. ಅವರ ಭಾಷಣವನ್ನು ಪ್ರಾರಂಭ ಮಾಡುವಾಗ ಈ ಮಸೂದೆ ಸಮಯೋಚಿತವಾಗಿದೆ ಎಂದು ಹೇಳಿದರು. ಆದರೆ ಆಮೇಲೆ ಅವರ ಭಾವವನ್ನು ಬದಲಾಯಿಸಿದರು. ವ್ಯಾಯತಃ ಅವರು ವಿರೋಧ ಪಕ್ಷಕ್ಕೆ ಸೇರಿದವರಾದುದರಿಂದ ಹಾಗೆ ಮಾಡಿರಬಹುದು! ನಿಜವಾಗಿಯೂ ಅವರು ಹೇಳಿದಂತೆ ಈ ಮಸೂದೆ ಸಮಯೋಚಿತವಾಗಿದೆ. ರೈತರಿಗೆ ಕಿರುಕುಳ ಕೊಡಬೇಕೆಂಬ ಉದ್ದೇಶ ಖಂಡಿತವಾಗಿ ಸರ್ಕಾರದವರಿಗಿಲ್ಲ. ಬೇಕಾದರೆ ಈ ಮಸೂದೆಯಲ್ಲಿರುವ penal clauses ತೆಗೆದು ಬಿಡಬಹುದು. ಆದರೆ ವೆಟೆರಿನೆರಿ ಇಲಾಖೆಗೆ ಒಂದು ರಕ್ಷಣೆ ಇರಬೇಕು. ಎಲ್ಲಾದರೂ scrub bulls ಇದೆಯೆಂದು ಅವರು ಕಾರ್ಯಕ್ರಮ ತೆಗೆದುಕೊಂಡರೆ ಜನರಿಂದ ಅವರಿಗೆ ತೊಂದರೆ ಬರದಂತೆ ಮಾಡಬೇಕು. ಒಂದೂರಿನಲ್ಲಿ ಎರಡು ಇಂತಹ ಗಿಡ್ಡ ಗೂಳಿಗಳಿದ್ದರೆ ಜನರು ಅವನ್ನು ಕ್ಯಾಸ್ಟ್ರೇಡ್ ಮಾಡುವುದು ಬೇಡವೆಂದು ಹೇಳಬಹುದು, ಇಲಾಖೆಯವರಿಗೆ ಅಡಚಣೆ ಮಾಡಬಹುದು, ನಾವು ಒಂದಂಶವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಗೋಸಂಪತ್ತನ್ನು ಅಭಿವೃದ್ಧಿ ಮಾಡುತ್ತೇವೆಂದರೆ ಎಲ್ಲವನ್ನೂ ಸರ್ಕಾರದವರೇ ಕೊಡಬೇಕು ಎಂದು ಹೇಳಬಾರದು. ನಮ್ಮ ಅದೃಷ್ಟವಶಾತ್ ರೈತರೂ ಕೂಡ ಅನೇಕ ಕಡೆ ಒಳ್ಳೆಯ ಹೋರಿಗಳನ್ನಿಟ್ಟು ಕೊಂಡಿದ್ದಾರೆ. ಹೆಚ್ಚು ಆಹಾರ ಬೆಳೆಗಳನ್ನು ಬೆಳೆಯುವ ಯೋಜನೆಯ ಸಂಬಂಧವಾಗಿಯೂ ಅನೇಕರು ಎಲ್ಲವನ್ನೂ ಸರ್ಕಾರದವರೇ ಮಾಡಬೇಕೆಂದು ಆಕ್ಷೇಪಣೆ ಮಾಡುತ್ತಾರೆ, ಇದು ಸರಿಯಲ್ಲ. ಇದೆಲ್ಲಾ ನೋಡಿ ಈ ಮಸೂದೆಗೆ ಈ ಹೆಸರು ಕೊಡುವುದಕ್ಕೆ ಬದಲು castration of scrub bulls Bill ಎಂದು ಹೆಸರು ಕೊಟ್ಟಿದ್ದರೆ ಚೆನ್ನಾಗಿತ್ತು ಎನಿಸುತ್ತದೆ from the Himalayas to Cape Camorin—China to Peru ಎಲ್ಲಾ ಸರ್ಕಾರ ಮಾಡಬೇಕೆಂದರೆ ಹೇಗೆ? ನಮ್ಮ ದೇಶದಲ್ಲಿ ಹೆಚ್ಚು ಬೆಳೆ ಬೆಳೆಯುವ ಯೋಜನೆಗೆ ಇದು ಒಂದು ಅಂಗವಾಗಿರಬೇಕು. ನಮ್ಮ ದೇಶದ ದನಗಳ ತಳಿ ಕೆಟ್ಟುಹೋಗಬಾರದು. ಇದಕ್ಕೆ ಒಳ್ಳೆಯ ತಳಿಗಳನ್ನು ಉಳಿಸಿಕೊಳ್ಳಬೇಕು. ಹಳ್ಳಿಕಾರ ದನಗಳಲ್ಲಿ ಗುಜ್ಜು ಮಾವು ದನಗಳು ಬಹಳ ಒಳ್ಳೆಯವು. ಹೆಚ್ಚು ಹಾಲು ಕೊಡುತ್ತವೆ. ಈಗ ಈ ಜಾತಿಯ ದನಗಳು ಬಹಳ ಕಡಿಮೆಯಾಗಿವೆ. ನರಿಯಾಗಿ cross ಮಾಡಿನ ದೇಯರುವುದರಿಂದ ಹೀಗಾಗಿದೆ. Scrub bulls ಎಂದು ಖಚಿತವಾಗಿ ಗೊತ್ತಿರುವುದನ್ನು castrate ಮಾಡಬೇಕು. ಇವುಗಳನ್ನೆಲ್ಲಾ ಮಾಡಬೇಕಾದರೆ ಯಾವಾಗ ಮಾಡುವುದೆಂಬುದು ಲೈವ್‌ಸ್ಟಾಕ್ ಎಕ್ಸ್‌ಪಾರ್ಟಗೇ ಗೊತ್ತಾಗುವುದಿಲ್ಲ. ಒಟ್ಟು ಐದು ಲಕ್ಷ ಹೋರಿಗಳಲ್ಲಿ ಐದನೆಯ ಒಂದು ಭಾಗಕ್ಕೆ ಮಾಡಬೇಕು. Animal Husbandry ಇಲಾಖೆಯ ಅಧಿಕಾರಿಗಳಿಗೆ ಇವುಗಳನ್ನು ಕ್ಯಾಸ್ಟ್ರೇಟ್ ಮಾಡಬೇಕೆಂದು ಹೇಳುತ್ತಿದ್ದೇವೆ. It must be reinforced by gentle pressure ಎಂದು ಹೇಳಿದರು. ನಿಜ, ಆದರೆ ಎಲ್ಲೆಲ್ಲಿ ಗ್ರಾಮಾಂತರಗಳಲ್ಲಿ ಪಾರ್ಟ ವೈಷಮ್ಯಗಳಿರುತ್ತವೆಯೋ ಅಲ್ಲಿ ನುಲಭವಾಗಿ ಮಾಡುವುದಕ್ಕಾಗುವುದಿಲ್ಲ. ಒಂದು ಪಾರ್ಟ

(ಮಾನ್ಯ ಶ್ರೀ ಟಿ. ಮರಿಯಪ್ಪನವರು)

ಯುವರೊಪ್ಪಿದರೆ ಇನ್ನೊಂದು ಪಾರ್ಟಿಯವರು ಒಪ್ಪದೇ ಹೋಗಬಹುದು. ಶ್ರೀಮಾನ್ ಚನ್ನಬಸಪ್ಪನವರು ಹೇಳಿದ ಹಾಗೆ ಬಸವನನ್ನು ಬಿಟ್ಟರೆ ಕೆಲವು ಸಂದರ್ಭಗಳಲ್ಲಿ ಅದು ಹತೋಟಿಗೆ ಬೀರುತ್ತದೆ. ಒಂದೊಂದು ವೇಳೆ ಅದು ಬಹಳ ಕ್ರೂರವಾಗುತ್ತದೆ, ತಂಟೆ ಮಾಡುತ್ತದೆ, ನಿಜ. ಕ್ಯಾಸ್ಟ್ರೇಟ್ ಮಾಡದರೆ ಕೆಟ್ಟುಹೋಗಿ ಕೆಲಸಕ್ಕೆ ಬಾರದ ಪ್ರಾಣಿಯಾಗುವುದಿಲ್ಲ, ಕೆಲಸಮಾಡುವ ಒಂದು ಪ್ರಾಣಿಯಾಗುತ್ತದೆ. ಅದು propogate ಮಾಡದೇ ಇರಬಹುದು, ಅಷ್ಟೆ.

ಎರಡನೆಯದಾಗಿ ಶ್ರೀಮಾನ್ ಗುಂಡಪ್ಪಗೌಡರು ಹಳ್ಳಿಕಾರ ಹೋರಿಗಳನ್ನು ಮದ್ರಾಸು ಹಸುಗಳ ಮೇಲೆ ಹಾರಿಸಿದರೆ ಒಳ್ಳೆಯದೆಂದು ಹೇಳಿದರು. ಮಿ ರಾಮಮೂರ್ತಿ ಸಿಂಧಿ ದನಗಳ ವಿಚಾರ ಪ್ರಸ್ತಾಪಮಾಡಿದರು; ಅದರ ವಿಚಾರ ಕಮ್ಮಿ ಹೇಳುವ ಅವಶ್ಯ ವಿಲ್ಲ. ನಮ್ಮ ದೇಶದಲ್ಲಿ ಸಿಂಧಿ ಹಸುಗಳು ಇಚ್ಚಾಗಿಲ್ಲ. ಮೈಸೂರು ಸರ್ಕಾರದವರು ನೂರು ಸಿಂಧಿ ಹಸುಗಳನ್ನು ತರಿಸಿ ಪ್ರಯೋಗ ಮಾಡುತ್ತಿದ್ದಾರೆ. ನಮ್ಮ ದೇಶದ ಹವಾಗುಣ ಇವಕ್ಕೆ ಸರಿಹೋಗುತ್ತದೆಯೇ ಎಂಬುದನ್ನು ಪರೀಕ್ಷಿಸುತ್ತಿದ್ದಾರೆ. ಮುಖ್ಯವಾಗಿ ನಮ್ಮ ದೇಶಕ್ಕೆ ಆರ್ಜೆಂಟೀನದಿಂದ ಬಂದಿರುವ ಒಳ್ಳೆಯ ತಳಿಗಳು ಕೆಟ್ಟು ಹೋಗದೇ ಯಿರಲಿ, ನಮ್ಮ ದನಗಳ ಶಕ್ತಿ ಹೆಚ್ಚಿಸುವಂತಾಗದೇ ಯಿರಲಿ ಎಂಬುದು ನಮ್ಮ ಉದ್ದೇಶ. ಗುಜ್ಜಮಾವು ಜಾತಿ ದನಗಳನ್ನು ಅಭಿವೃದ್ಧಿ ಮಾಡಬೇಕೆಂದು ಸರ್ಕಾರದವರಿಗೆ ಆಶೆ ಇದೆ. ಅನೇಕ ರೈತರೂ ಈ ಪ್ರಯತ್ನ ಮಾಡುತ್ತಿದ್ದಾರೆ, ಅವರಿಗೂ ಪ್ರೋತ್ಸಾಹ ಕೊಡುತ್ತೇವೆ. ಈ ಎಲ್ಲ ವಿಚಾರಗಳನ್ನೂ ಸೆಲೆಕ್ಟ್ ಕಮಿಟಿಯ ಪರಾಮರ್ಶೆ ಮಾಡಿ ಸಲಹೆ ಮಾಡಬಹುದು ಮತ್ತು ನೂಕ್ಷ್ಮ ತಿದ್ದುಪಡಿಗಳನ್ನು ಸೂಚಿಸಬಹುದು. ಆದ ಕಾರಣ ಈ ಮಸೂದೆ ಸೆಲೆಕ್ಟ್ ಕಮಿಟಿಗೆ ಹೋಗಲು ಎಲ್ಲರೂ ಒಪ್ಪಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—The question is:

"That the Mysore Live-stock Improvement Bill, 1951, be referred to a Select Committee consisting of—

Sri M. Govinda Reddy,
Sri H. Siddananjappa,
Sri H. Siddaveerappa,
Sri K. Singari Gowda,
Sri D. M. Siddiah,
